ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 25 ಮಂಗಳವಾರ 2023

ಸಂಪುಟ: 44 | ಸಂಚಿಕೆ: 10 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಧಾನಿ ಮೋದಿ ವಿಕಾಸ ರಾಜಕಾರಣ ಬೆಂಬಲಿಸಿ...

ಗುಂಡ್ಲುಪೇಟೆಯಲ್ಲಿ ಬಿಜೆಪಿ ಚುನಾವಣಾ ಚಾಣಕ್ಯ ಅಮಿತ್ ಶಾ ರೋಡ್ ಶೋ





ಗುಂಡ್ಲುಪೇಟೆ, ಏ.24–ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಗುಂಡ್ಲುಪೇಟೆ ಪಟ್ಟಣದಲ್ಲಿ ಭರ್ಜರಿ ರೋಡ್ ಶೋ ನಡೆಸಿ, ಹಾಲಿ ಶಾಸಕ, ಬಿಜೆಪಿ ಅಭ್ಯರ್ಥಿ ನಿರಂಜನ್‌ಕುಮಾರ್ ಪರ ಪ್ರಚಾರ ನಡೆಸಿದರು.

ಇಂದು ಮಧ್ಯಾಹ್ನ 1 ಗಂಟೆಗೆ ಹೆಲಿಕಾಪ್ಟರ್ ಮೂಲಕ ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣಕ್ಕೆ ಆಗಮಿಸಿದ ಅವರು, ಅಲ್ಲಿಂದ ಬಿಜೆಪಿ ಪ್ರಚಾರ ವಾಹನದಲ್ಲಿ ಹಳೇ ಬಸ್ ನಿಲ್ದಾಣದವರೆಗೆ ಸುಮಾರು ಒಂದೂವರೆ ಕಿಲೋಮೀಟರ್ ದೂರ ರೋಡ್ ಶೋ ನಡೆಸಿ, ಮತ ಯಾಚಿಸಿದರು. ಅಮಿತ್ ಶಾ ಅವರನ್ನು ನೋಡಲು ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ನೆರೆದಿದ್ದು, ಪಕ್ಷದ ಬಾವುಟ ಪ್ರದರ್ಶಿಸುತ್ತಾ, ಅಮಿತ್ ಶಾ ಅವರಿಗೆ ಜೈಕಾರ ಕೂಗಿದರು. ಹಳೇ ಬಸ್ ನಿಲ್ದಾಣದ ಬಳಿ ಪ್ರಚಾರ ವಾಹನದಲ್ಲೇ ನಿಂತು ಮಾತನಾಡಿದ ಅಮಿತ್ ಶಾ, ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಬಿಜೆಪಿ ಮತ್ತೇ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಚಾಮರಾಜನಗರ

● 9ನೇ ಪುಟಕ್ಕೆ

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 143 ಅಭ್ಯರ್ಥಿಗಳು ಕಣದಲ್ಲಿ

ನಾಮಪತ್ರ ಹಿಂತೆಗೆದುಕೊಂಡ 29 ಮಂದಿ

ಮೈಸೂರು, ಏ.24(ಎಸ್‌ಬಿಡಿ)–ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರದಿಂದ ಒಟ್ಟು 29 ಮಂದಿ ನಾಮಪತ್ರ ಹಿಂಪಡೆದಿದ್ದು, ಅಂತಿಮವಾಗಿ 143 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಉಳಿದಿದ್ದಾರೆ. ನಾಮಪತ್ರ ಹಿಂಪಡೆಯುವ ಗಡುವು ಸೋಮವಾರ ಮುಕ್ತಾಯವಾಗಿದ್ದು, ವರುಣ ವಿಧಾನಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚು 10 ಅಭ್ಯರ್ಥಿಗಳು, ಕೆ.ಆರ್.ನಗರದಲ್ಲಿ 5, ನರಸಿಂಹರಾಜ 4, ತಿ.ನರಸೀಪುರ 3, ಚಾಮರಾಜ ಹಾಗೂ ಹುಣಸೂರಿನಲ್ಲಿ ತಲಾ 2, ಪಿರಿಯಾಪಟ್ಟಣ, ಚಾಮುಂಡೇಶ್ವರಿ ಹಾಗೂ ಕೃಷ್ಣರಾಜದಲ್ಲಿ ತಲಾ ಒಬ್ಬರು ಉಮೇದುವಾರಿಕೆ ಹಿಂಪಡೆಯುವ ಮೂಲಕ ಚುನಾವಣಾ ಕಣದಿಂದ ಹಿಂದೆ ಸರಿದಿದ್ದಾರೆ. ಎಸ್ಟಿ ಮೀಸಲಾತಿ ಕ್ಷೇತ್ರವಾದ ಹೆಚ್.ಡಿ.ಕೋಟೆ ಹಾಗೂ ಎಸ್ಸಿ ಮೀಸಲು ಕ್ಷೇತ್ರ ನಂಜನಗೂಡಿನಲ್ಲಿ ಯಾರೊಬ್ಬರೂ ನಾಮಪತ್ರ ಹಿಂಪಡೆದಿಲ್ಲ. ಉಮೇದುವಾರಿಕೆ ಹಿಂಪಡೆದವರಲ್ಲಿ ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿಯ ಓರ್ವ ಅಭ್ಯರ್ಥಿ ಹೊರತುಪಡಿಸಿದರೆ ಉಳಿದವರೆಲ್ಲಾ ಪಕ್ಷೇತರರು.

ನಾಮಪತ್ರ ಹಿಂಪಡೆದವರು: ವರುಣ ಕ್ಷೇತ್ರದಲ್ಲಿ ಪಕ್ಷೇತರರಾದ ಎಲ್.ಕುಮಾರ್, ಖಲೀಲ್ ಉಲ್ಲಾ, ಗಿರೀಶ್, ಗುರುಲಿಂಗಯ್ಯ, ಕೆ.ಎಸ್.ಮಾದಪ್ಪ,

● 9ನೇ ಪುಟಕ್ಕೆ

ಕರ್ನಾಟಕ ಚುನಾವಣಾ ಅಖಾಡದಲ್ಲಿ 2613 ಕಲಿಗಳು

ಎನ್‌ಆರ್, ಕೆಆರ್, ಶ್ರೀರಂಗಪಟ್ಟಣ, ಹನೂರು ಸೇರಿ 16 ವಿಧಾನಸಭಾ ಕ್ಷೇತ್ರದಲ್ಲಿ 15ಕ್ಕಿಂತ ಹೆಚ್ಚು ಅಭ್ಯರ್ಥಿಗಳು

ಬೆಂಗಳೂರು, ಏ.24–ಕರ್ನಾಟಕ ವಿಧಾನಸಭೆ ಚುನಾವಣೆಯ ಅಖಾಡ ಸಿದ್ಧವಾಗಿದ್ದು ನಾಮಪತ್ರ ಹಿಂಪಡೆಯುವ ಪ್ರಕ್ರಿಯೆಯ ನಂತರ ಅಂತಿಮವಾಗಿ ಕಣದಲ್ಲಿ 2613 ಕಲಿಗಳು ಉಳಿದಿದ್ದಾರೆ. ಇವರಲ್ಲಿ ಪುರುಷ ಅಭ್ಯರ್ಥಿಗಳು 2427 ಹಾಗೂ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 184, ಇತರೆ ಇಬ್ಬರು ಸ್ಪರ್ಧಾಕಣದಲ್ಲಿದ್ದಾರೆ. ನಾಮಪತ್ರ ಸಲ್ಲಿಸಿದ್ದ ಒಟ್ಟು 5,101 ಮಂದಿ ಪೈಕಿ 517 ಮಂದಿ ತಮ್ಮ ಉಮೇದುವಾರಿಕೆಯನ್ನು ಹಿಂಪಡೆದಿದ್ದಾರೆ. ಕೆಲವು ಬಂಡಾಯ ಅಭ್ಯರ್ಥಿಗಳು ನಾಮಪತ್ರ ಹಿಂಪಡೆದರೆ, ಕೆಲವೆಡೆ ಕಾಂಗ್ರೆಸ್ ಮತ್ತು

● 9ನೇ ಪುಟಕ್ಕೆ

‘ಮುಖ್ಯಮಂತ್ರಿ ಸ್ಥಾನೇ ಪ್ರಾಪ್ತಿರಸ್ತು...’

ಕೊಲ್ಲೂರಿನಲ್ಲಿ ಡಿಕೆಶಿ ಹರಕೆಯ ನವ ಚಂಡಿಕಾಯಾಗದ ಪೂರ್ಣಾಹುತಿಯಲ್ಲಿ ಸಿಎಂ ಗಾದಿಗಾಗಿ ವಿಶೇಷ ಪ್ರಾರ್ಥನೆ



ಉಡುಪಿ, ಏ.24–ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಗಾದಿಗಾಗಿ ಟೆಂಪಲ್ ರನ್ ಮುಂದುವರಿದಿದೆ. ದಕ್ಷಿಣ ಕನ್ನಡ ಜಿಲ್ಲೆ, ಚಿಕ್ಕಮಗಳೂರಿನ ನಂತರ ಉಡುಪಿ ಜಿಲ್ಲೆ, ಬೈಂದೂರು ತಾಲೂಕಿನ ಇತಿಹಾಸ ಪ್ರಸಿದ್ಧ ಕೊಲ್ಲೂರು ಮೂಕಾಂಬಿಕೆ ಸನ್ನಿಧಾನದಲ್ಲಿ ನವ ಚಂಡಿಕಾಯಾಗವನ್ನು ಡಿ.ಕೆ.ಶಿವಕುಮಾರ್ ನಡೆಸಿದ್ದಾರೆ.

ಯಾಗದ ಪೂರ್ಣಾಹುತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಡಿ.ಕೆ.ಶಿವಕುಮಾರ್ ಕುಟುಂಬದ ಪರವಾಗಿ ಪುರೋಹಿತರು ವಿಶೇಷ ಪ್ರಾರ್ಥನೆ ಸಲ್ಲಿಸಿದ್ದಾರೆ. ಅದರಲ್ಲಿ 'ಮುಖ್ಯಮಂತ್ರಿ ಸ್ಥಾನೇ' ಎಂದು ಪುರೋಹಿತರು ಹೇಳಿದ ಮಂತ್ರ ಪಠಣ

● 9ನೇ ಪುಟಕ್ಕೆ

> ಕಾಂಗ್ರೆಸ್‌ನಲ್ಲಿ ಸಿಎಂ ಹುದ್ದೆಗಾಗಿ ಆರೋಗ್ಯಕರ ಸ್ಪರ್ಧೆ ತಪ್ಪಲ್ಲ. ಡಿಕೆಶಿ ಸಿಎಂ ಆಗಲು ಆಕಾಂಕ್ಷಿಯಾಗಿದ್ದರೆ ತಪ್ಪಿಲ್ಲ. ನಾನೂ ಸಿಎಂ ಹುದ್ದೆ ಆಕಾಂಕ್ಷಿಯಾಗಿದ್ದೇನೆ. ಅದರಲ್ಲೂ ತಪ್ಪಿಲ್ಲ. ಅಂತಿಮವಾಗಿ ಶಾಸಕರು, ಹೈಕಮಾಂಡ್ ನಾಯಕರು ಮುಂದಿನ ಸಿಎಂ ಯಾರು ಎಂದು ತೀರ್ಮಾನಿಸುತ್ತಾರೆ. –ಸಿದ್ದರಾಮಯ್ಯ

ದಲಿತರನ್ನು ಬಳಸಿ ಮೂಲೆಗುಂಪು ಮಾಡುವ ತಂತ್ರಗಾರಿಕೆ ಬಿಜೆಪಿಯದ್ದು

- ಅಂಬೇಡ್ಕರ್ ಆಶಯಕ್ಕೆ ವಿರುದ್ಧವಾಗಿ ಬಿಜೆಪಿ ವರ್ತನೆ
- ಎಚ್ಚೆತ್ತುಕೊಳ್ಳದಿದ್ದರೆ ಶೋಷಿತ ಸಮುದಾಯಕ್ಕೆ ಧಕ್ಕೆ
- ಬಿಜೆಪಿ ಕಾರ್ಯಸೂಚಿಗಳಿಂದ ಸಂವಿಧಾನ ದುರ್ಬಲ
- ಮಾಜಿ ಸಚಿವ ಬಿ.ಸೋಮಶೇಖರ್ ಆರೋಪ

ಮೈಸೂರು,ಏ.24(ಎಂಟಿವೈ)– ದಲಿತರು ಮತ್ತು ಹಿಂದುಳಿದ ವರ್ಗಗಳನ್ನು ನಯವಾಗಿ ಬಳಸಿಕೊಂಡು ಬಳಿಕ ಮೂಲೆಗುಂಪು ಮಾಡುವ ಬಿಜೆಪಿ ತಂತ್ರಗಾರಿಕೆಯನ್ನು ಜನ ಅರ್ಥ ಮಾಡಿಕೊಂಡು, ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು ಎಂದು ಮಾಜಿ ಸಚಿವ ಬಿ.ಸೋಮಶೇಖರ್ ಮನವಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ತನ್ನ ಪಕ್ಷದ ಸಿದ್ಧಾಂತವನ್ನಾಗಿ ಮಾಡಿಕೊಂಡಿದೆ. ಇದನ್ನು ನಾನು 8 ವರ್ಷ ಬಿಜೆಪಿಯಲ್ಲಿದ್ದುಕೊಂಡೇ ಗಮನಿಸಿದ್ದೇನೆ. ಚುನಾವಣೆ ಸಮಯದಲ್ಲಿ ಮಾತ್ರ ದಲಿತರು ಮತ್ತು ಹಿಂದುಳಿದ ವರ್ಗಗಳನ್ನು ಬಳಸಿಕೊಂಡು ಆ ನಂತರ ಅವರ ಮಾತಿಗೆ ಮನ್ನಣೆ ನೀಡದೆ ನಿರ್ಧಾರವಾಗಿ ಅವರನ್ನು ಕಡೆಗಣಿಸುವ ಪದ್ಧತಿ ಬಿಜೆಪಿ ಅನುಸರಿಸುತ್ತಿದೆ. ಈ ತಂತ್ರಗಾರಿಕೆಗೆ ಹಲವು ಬಲಿಯಾಗಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸ ಸಮುದಾಯಗಳಿಗೆ ಹೆಚ್ಚು ಟಿಕೆಟ್ ನೀಡುವ ಮೂಲಕ ಅಸ್ತಿತ್ವರನ್ನು ರಾಜಕೀಯದಿಂದಲೇ ಹೊರಗಿಡುವ ಹುನ್ನಾರವನ್ನು ಬಿಜೆಪಿ ಮಾಡುತ್ತಿದೆ ಎಂದು ಕಿಡಿಕಾರಿದರು.

ಬಿಜೆಪಿ ಕಾರ್ಯಸೂಚಿಗಳು ಸಂವಿಧಾನವನ್ನು ದುರ್ಬಲ ಮಾಡುತ್ತಿವೆ. ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಕೇವಲ ಪ್ರತಿಮೆ ನಿರ್ಮಾಣಕ್ಕೆ ಸೀಮಿತಗೊಳಿಸಿದ್ದಾರೆ. ದಲಿತರಿಗೆ ಸಿಗುತ್ತಿದ್ದ ಸವಲತ್ತುಗಳಿಗೆ ಕತ್ತರಿ ಹಾಕಿದ್ದಾರೆ. ಜಾತಿ ಜಾತಿಗಳ ನಡುವೆ ದ್ವೇಷ ಹಚ್ಚಿ ಅದರ ಮೂಲಕ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಾರೆ. ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಅವರಿಗೆ ಕಿರುಕುಳ ನೀಡಲಾಗುತ್ತಿದೆ. ಸಂವಿಧಾನದ ಮೌಲ್ಯಗಳನ್ನು ಬುಡಮೇಲು ಮಾಡಲು ಹೊರಟಿರುವ ಬಿಜೆಪಿಯನ್ನು ದಲಿತರು ಮತ್ತು ಹಿಂದುಳಿದ ವರ್ಗಗಳು ಧಿಕ್ಕರಿಸಬೇಕು ಎಂದು ಮನವಿ ಮಾಡಿದರು.

ರೈತರ ಆದಾಯವನ್ನು ದ್ವಿಗುಣ ಮಾಡುತ್ತೇನೆ ಎಂದು ಹೇಳಿದ ಪ್ರಧಾನಿ ಮೋದಿ ರೈತರ ಭೂಮಿಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಕೊಡುತ್ತಿದ್ದಾರೆ. ಕೃಷಿ ಕ್ಷೇತ್ರವನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲು ತಿದ್ದುಪಡಿ ಮಾಡಿದ ಮೂರು ಕೃಷಿ ಕಾಯ್ದೆಗಳನ್ನು ಜಾರಿಗೊಳಿಸಲು ಯತ್ನಿಸಿದರು. ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸುವುದಾಗಿ ನೀಡಿದ್ದ ಭರವಸೆ ಇಂದಿಗೂ ಈಡೇರಿಸಿಲ್ಲ. ರೈತರ ಬೆಳೆಗೆ ಎಂಎಸ್‌ಪಿ ಜಾರಿ ಮಾಡಲು ಸಾಧ್ಯವಿಲ್ಲ ಎಂದ ಕೇಂದ್ರ ಸರ್ಕಾರದ ವಿರುದ್ಧ ಸೋಮಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

ಕಪ್ಪು ಹಣ ವಾಪಸ್ಸು ತರುವುದಾಗಿ ಪಡೆಯುವುದಕ್ಕಾಗಿ ನೋಟು ಅಮಾನ್ಯೀಕರಣ ಮಾಡಿದ್ದೇನೆ ಎಂದು ಹೇಳಿದ ಪ್ರಧಾನಿ ಮೋದಿ ಕೋಟ್ಯಂತರ ಜನರ ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದರು. ಕಪ್ಪು ಹಣದ ಬಗ್ಗೆ ಚಕಾರವಿಲ್ಲ. ಕೇಂದ್ರ ಸರ್ಕಾರದ ನಿಲುವಿನಿಂದಾಗಿ ಜನಸಾಮಾನ್ಯರು ತತ್ತರಿಸಿದರು. ಕೋಟ್ಯಂತರ ಮಂದಿ ಉದ್ಯೋಗ ಕಳೆದುಕೊಂಡರು. ವ್ಯಾಪಾರಿಗಳು ನಷ್ಟಕ್ಕೆ ಸಿಲುಕಿದರು. ತೆರಿಗೆ ಸಿಲುಕಿದವರ ನೋವಿಗೆ ಸ್ಪಂದಿಸಲು ಮುಂದೆ ಬರಲಿಲ್ಲ. ನೋಟು ಅಮಾನ್ಯೀಕರಣದಿಂದ ಯಾವುದೇ ಪ್ರಯೋಜನವಾಗಲಿಲ್ಲ ಎಂದು ಕಿಡಿಕಾರಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಬಿ.ಸೋಮಶೇಖರ್ ಮಾತನಾಡಿದರು. ಡಾ.ವಿಜಯಕುಮಾರ್ ಇದ್ದಾರೆ.

ಅಧಿಕಾರಕ್ಕಾಗಿ ಜೆಡಿಎಸ್ ಒಳ ಒಪ್ಪಂದ: ಮಂಡ್ಯ ಜಿಲ್ಲೆ ಒಂದು ಕ್ಷೇತ್ರವನ್ನು ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿ ಜೆಡಿಎಸ್ ಇದೆ. ಆದರೆ ಅಧಿಕಾರಕ್ಕಾಗಿ ಅವರು ಯಾರ ಜೊತೆ ಬೇಕಾದರೂ ಒಳ ಒಪ್ಪಂದ ಮಾಡಿಕೊಳ್ಳಲು ಸಿದ್ಧರಿರುತ್ತಾರೆ. ಅಲ್ಲದೇ ಆ ಪಕ್ಷಕ್ಕೆ ಯಾವುದೇ ಸಿದ್ಧಾಂತ ಇಲ್ಲ ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮಯ್ಯ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖಂಡರಾದ ಪುಟ್ಟಸಿದ್ದೇಗೌಡ, ಎಡತಲೆ ಮಂಜುನಾಥ, ರಘುರಾಜ್, ಡೊನಾಲ್ಡ್, ಚಂದ್ರು, ನಾಗೇಶ್, ಜೈಕುಮಾರ್ ಇದ್ದರು.

ದಲಿತರಿಗೆ ಪ್ರಸಾದ್ ನೀಡಿದ ಕೊಡುಗೆ ಏನು

ಸಂಸದ ಶ್ರೀನಿವಾಸ್ ಪ್ರಸಾದ್ ಅವರು ದಲಿತರ ಏಳಿಗೆಗೆ ಏನು ಕೊಡುಗೆ ನೀಡಿದ್ದಾರೆ ಎಂಬುದನ್ನು ಜನತೆಗೆ ತಿಳಿಸಬೇಕು ಎಂದು ಮಾಜಿ ಸಚಿವ ಬಿ.ಸೋಮಶೇಖರ್ ಆಗ್ರಹಿಸಿದರು.

ಮೂರು ಬಾರಿ ಕಂದಾಯ ಸಚಿವರಾಗಿದ್ದ ಪ್ರಸಾದ್ ಅವರು ಏನು ಅಭಿವೃದ್ಧಿ ಮಾಡಿದ್ದಾರೆ ಎಂದು ಜನರಿಗೆ ಗೊತ್ತಿದೆ. ನಾನು ಒಂದೂವರೆ ವರ್ಷ ಕಂದಾಯ ಸಚಿವನಾಗಿ ಮಾಡಿರುವ ಕೆಲಸಕ್ಕೆ ಪ್ರಶಸ್ತಿ ಬಂದಿದೆ. ಏನೇನು ಅಭಿವೃದ್ಧಿ ಮಾಡಿದ್ದೇನೆ ಎಂಬುದರ ದಾಖಲೆಯನ್ನು ನಾನು ನೀಡುತ್ತೇನೆ ಎಂದರು.

ಸಂಸದ ಶ್ರೀನಿವಾಸ್‌ಪ್ರಸಾದ್ ಮೂಲತಃ ಆರ್‌ಎಸ್‌ಎಸ್ ಮೂಲದವರೇ. ಅನಾರೋಗ್ಯವಿದ್ದರೂ ಆರ್‌ಎಸ್‌ಎಸ್ ಒತ್ತಡಕ್ಕೆ ಮಣಿದು ಲೋಕಸಭೆಗೆ ಸ್ಪರ್ಧಿಸಿದರು. ಆದರೆ, ನಾಲ್ಕು ವರ್ಷ ಎಂಪಿ ಆಗಿದ್ದರೂ ಏನು ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಬಿಜೆಪಿ ಅವರನ್ನು ನಡೆಸಿಕೊಂಡಿದೆ ಬಿಜೆಪಿಗೆ ಹೋಗಿ ಸಂಸದರಾದರು, ಆಳಿಯ ಶಾಸಕರಾದರು. ಅದನ್ನು ಹೊರತುಪಡಿಸಿ ದಲಿತರಿಗೆ ಏನು ಯೋಜನೆಗಳನ್ನು ನೀಡಿದ್ದಾರೆ ಎಂದು ಸೋಮಶೇಖರ್ ಪ್ರಶ್ನಿಸಿದರು.

ಬಿಜೆಪಿಯಲ್ಲಿ ದಲಿತ ಮುಖಂಡರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಅವರನ್ನು ದುರ್ಬಲಗೊಳಿಸುವ ಹುನ್ನಾರ ವ್ಯವಸ್ಥಿತವಾಗಿ ನಡೆಯುತ್ತಿದೆ. ರಾಜ್ಯಾದ್ಯಂತ ಅನೇಕ ಮುಖಂಡರು ಈಗಾಗಲೇ ಈ ಜಾಲದಲ್ಲಿ ಸಿಲುಕಿ ತಮ್ಮ ಅಸ್ತಿತ್ವ ಕಳೆದುಕೊಂಡಿದ್ದಾರೆ ಎಂದು ಆರೋಪಿಸಿದರು.

ಮಹಾರಾಣಿ ಕಾಮರ್ಸ್ ಕಾಲೇಜಲ್ಲಿ ಮತ ಎಣಿಕೆಗೆ ಸಿದ್ಧತಾ ಕಾರ್ಯ
ಜಿಲ್ಲಾ ಚುನಾವಣಾಧಿಕಾರಿ, ವೀಕ್ಷಕರಿಂದ ಪರಿಶೀಲನೆ

ಮೈಸೂರು,ಏ.24(ಆರ್‌ಕೆ)– ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಮಹಿಳಾ ಕಾಲೇಜು ಕಟ್ಟಡದಲ್ಲಿ ವಿಧಾನಸಭಾ ಚುನಾವಣೆಯ ಮತ ಎಣಿಕೆಗೆ ಜಿಲ್ಲಾಡಳಿತ ಸಿದ್ಧತೆ ಆರಂಭಿಸಿದೆ.

ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಈ ಬಾರಿ ಮಹಾರಾಣಿ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಕೇಂದ್ರವೊಂದರಲ್ಲೇ ನಡೆಯಲಿದ್ದು, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಸ್ಟ್ರಾಂಗ್ ರೂಂ, ಮತ ಎಣಿಕೆ ಹಾಲ್, ಮೀಡಿಯಾ ಸೆಂಟರ್, ಇಂಟರ್‌ನೆಟ್ ಸೌಲಭ್ಯದೊಂದಿಗೆ ಕಂಪ್ಯೂಟರ್ ರೂಂ, ಚುನಾವಣಾ ವೀಕ್ಷಕರ ಕೊಠಡಿಗಳನ್ನು ಸಿದ್ಧಪಡಿಸಲಾಗಿದೆ.

ಕಾಲೇಜು ಕೇಂದ್ರದ ಆವರಣ, ಕಾಂಪೌಂಡ್ ಹೊರಭಾಗ, ಒಳಾವರಣ, ಸ್ಟ್ರಾಂಗ್ ರೂಂ, ಕಾರಿಡಾರ್‌ಗಳು ಸೇರಿದಂತೆ ಎಲ್ಲೆಡೆ ಹೆಚ್ಚಿನ ಸಂಖ್ಯೆಯ ಸಿಸಿ ಕ್ಯಾಮರಾಗಳನ್ನು ಅಳವಡಿಸಿ, ಶೌಚಾಲಯ, ಕುಡಿಯುವ ನೀರು, ಅಧಿಕಾರಿಗಳು, ಸಿಬ್ಬಂದಿ ವಾಹನ ನಿಲುಗಡೆ ಸೇರಿದಂತೆ ಅಗತ್ಯ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಮತಗಟ್ಟೆ ಕೇಂದ್ರಕ್ಕೆ ಒದಗಿಸಲಾಗಿದ್ದು, ಇಂದು ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಚುನಾವಣಾ ಸಾಮಾನ್ಯ ವೀಕ್ಷಕರಾದ ರಾಮ್ ಪ್ರತಾಪ್ ಸಿಂಗ್, ಜಾಡೋನ್ (ತಿ.ನರಸೀಪುರ ವಿಧಾನಸಭಾ ಕ್ಷೇತ್ರ), ದಿವೇಶ್ ಸೆಹರ (ಹುಣಸೂರು, ಹೆಚ್.ಡಿ.ಕೋಟೆ), ಕೆ.ಆರ್. ಮತ್ತು ಎನ್.ಆರ್. ಕ್ಷೇತ್ರಗಳ ಧೀರಜ್ ಗುಪ್ತ ಅವರು ಮತ ಎಣಿಕಾ ಕೇಂದ್ರಕ್ಕೆ ಭೇಟಿ ನೀಡಿ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿದರು.

ಎಣಿಕಾ ಟೇಬಲ್‌ಗಳ ಅಳವಡಿಕೆ, ಅಭ್ಯರ್ಥಿಗಳ ಏಜೆಂಟರ್‌ಗಳು ವೀಕ್ಷಿಸಲು ಅವಕಾಶ, ಪ್ರತಿ ಸುತ್ತಿನ ಎಣಿಕಾ ಫಲಿತಾಂಶ ಪ್ರಕಟಿಸಲು ಧ್ವನಿವರ್ಧಕ, ಜನದಟ್ಟಣೆ ತಡೆಯಲು ಅಳವಡಿಸಬೇಕಾದ ಬ್ಯಾರಿಕೇಡ್, ಅಧಿಕಾರಿ, ಸಿಬ್ಬಂದಿಗಳಿಗೆ ತಿಂಡಿ, ಊಟದ ವ್ಯವಸ್ಥೆ ಕುರಿತಂತೆ ಡಾ. ರಾಜೇಂದ್ರ, ಚುನಾವಣಾ ವೀಕ್ಷಕರಿಗೆ ಮಾಹಿತಿ ನೀಡಿದರು. ಮೈಸೂರು ಮಹಾನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳು, ಚುನಾವಣಾ ತಹಸೀಲ್ದಾರರು ಮತ ಎಣಿಕೆ ಕೇಂದ್ರದ ಪರಿಶೀಲನೆ ವೇಳೆ ಉಪಸ್ಥಿತರಿದ್ದರು. ಮತ ಎಣಿಕಾ ಕೇಂದ್ರಕ್ಕೆ ಎಸಿಪಿ ಮಟ್ಟದ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಇನ್ನಿಲ್ಲದ ಭದ್ರತೆ ಒದಗಿಸಲಾಗುವುದು ಎಂದು ಡಾ.ರಾಜೇಂದ್ರ ತಿಳಿಸಿದರು.



ಚುನಾವಣಾ ಅಕ್ರಮ ಕಂಡಲ್ಲಿ ವೀಕ್ಷಕರಿಗೆ ಮಾಹಿತಿ ನೀಡಿ

ಮೈಸೂರು, ಏ.24(ಆರ್‌ಕೆ)– ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗುವುದು ಇಲ್ಲವೇ ಅಕ್ರಮಗಳು ಕಂಡು ಬಂದಲ್ಲಿ ಮೈಸೂರಿನ ಚಾಮರಾಜ ಮತ್ತು ಕೃಷ್ಣರಾಜ ಕ್ಷೇತ್ರದ ಚುನಾವಣಾ ಸಾಮಾನ್ಯ ವೀಕ್ಷಕ ಧೀರಜ್ ಗುಪ್ತಾ ಅವರಿಗೆ, ಅವರ ಮೊಬೈಲ್ ಸಂಖ್ಯೆ 7411509284 ಮೂಲಕ ಮಾಹಿತಿ ನೀಡಬಹುದು.

ಸಾಮಾನ್ಯ ವೀಕ್ಷಕರು ನಜರ್‌ಬಾದಿನ ಸರ್ಕಾರಿ ಅತಿಥಿ ಗೃಹದ ಕೊಠಡಿ ಸಂಖ್ಯೆ 10ರಲ್ಲಿ ಪ್ರತೀ ದಿನ ಬೆಳಗ್ಗೆ 9ರಿಂದ 11 ಗಂಟೆವರೆಗೆ, ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿಯ ಕೊಠಡಿ ಸಂಖ್ಯೆ 14ರಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಲಭ್ಯವಿರುತ್ತಾರೆ. ಸಾರ್ವಜನಿಕರು, ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರು ಖುದ್ದಾಗಿ, ದೂರವಾಣಿ ಮೂಲಕ ಅಥವಾ ವಾಟ್ಸಾಪ್‌ನಲ್ಲಿ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ಚಾಮರಾಜ ಕ್ಷೇತ್ರದ ಚುನಾವಣಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಇಂದು ಚಾಮರಾಜ, ಕೆ.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಗಳ ಪರ ಕುಮಾರಸ್ವಾಮಿ ಮತಯಾಚನೆ


ಮೈಸೂರು, ಏ.24– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮೈಸೂರು ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಪರ ಬೆಳಗ್ಗೆ 10 ಗಂಟೆಗೆ ವಿಜಯನಗರದ ಸಪ್ತಪದಿ ಕನ್ವೆಷನ್‌ಹಾಲ್‌ನಲ್ಲಿ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಪ್ರಚಾರ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 12 ಗಂಟೆಗೆ ಕೆ.ಆರ್. ಕ್ಷೇತ್ರದ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಪರ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮತಯಾಚನೆ ಮಾಡಲಿದ್ದಾರೆ. ಈ ವೇಳೆ ಜೆಡಿಎಸ್‌ನ ರಾಜ್ಯ, ಜಿಲ್ಲಾ ಹಾಗೂ ಕ್ಷೇತ್ರದ ಎಲ್ಲಾ ಮುಖಂಡರು ಉಪಸ್ಥಿತರಿರುವರು. ಕಾರ್ಯಕರ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪಕ್ಷದ ಪ್ರಕಟಣೆಯಲ್ಲಿ ಕೋರಲಾಗಿದೆ.



ಹೆಚ್.ಕೆ.ರಮೇಶ್



ಕೆ.ವಿ.ಮಲ್ಲೇಶ್



ನಾಲ್ಕು ಜನರಿಗೆ ಪುನರ್ಜನ್ಮ ನೀಡಿದ ಬಸವಣ್ಣನವರು!

ಮೈಸೂರು, ಏ. 24– ಮೆದುಳು ನಿಷ್ಕ್ರಿಯಗೊಂಡ ಬಸವಣ್ಣ (56) ಅವರ ನಾಲ್ಕು ಅಂಗಾಂಗಗಳನ್ನು ದಾನ ಮಾಡಿ, ಅವುಗಳ ಕಸಿಯಿಂದಾಗಿ ನಾಲ್ವರು ಮರುಜನ್ಮ ಪಡೆದಿದ್ದಾರೆ. ಏ.17ರಂದು ಗಂಭೀರ ಸ್ಥಿತಿಯಲ್ಲಿದ್ದ ಬಸವಣ್ಣ ಅವರನ್ನು ಮೈಸೂರು ಅಪೋಲೋ ಬಿಜಿಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಈ ವೇಳೆ ಅವರ ಮೆದುಳು ಕಾಂಡಕ್ಕೆ ತೀವ್ರ ಹಾನಿಯಾಗಿದ್ದ ಕಾರಣ ಐಸಿಯುನಲ್ಲಿ ಚಿಕಿತ್ಸೆ ಆರಂಭಿಸಲಾಗಿತ್ತು.




ಆದರೆ, ಏ.21ರಂದು ಅವರ ಸ್ಥಿತಿ ಗಂಭೀರವಾಗಿ, ಮೆದುಳು ನಿಷ್ಕ್ರಿಯಗೊಂಡ ಹಿನ್ನೆಲೆಯಲ್ಲಿ ಅಂಗಾಂಗ ದಾನ ಸಂಬಂಧ ಅವರ ಕುಟುಂಬದವರ ಸಮ್ಮತಿಯಂತೆ ತಜ್ಞ ವೈದ್ಯರು ಕ್ರಮ ಕೈಗೊಂಡರು. ಅದರಂತೆ ಮೈಸೂರು ಅಪೋಲೋ ಬಿಜಿಎಸ್ ಆಸ್ಪತ್ರೆಗೆ ಯಕೃತ್ತು, ಎಡಮೂತ್ರ ಪಿಂಡ, ಮೈಸೂರು ಮಣಿಪಾಲ್ ಆಸ್ಪತ್ರೆಗೆ ಬಲಮೂತ್ರ ಪಿಂಡ ಹಾಗೂ ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ ಹೃದಯ ಕವಾಟಗಳನ್ನು ದಾನ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಇಡೀ ದೇಶಕ್ಕೆ ಡಾ.ರಾಜಕುಮಾರ್ ಸ್ಫೂರ್ತಿದಾಯಕ

ಮೈಸೂರು,ಏ.24–ಕರ್ನಾಟಕ ರತ್ನ ಡಾ.ರಾಜಕುಮಾರ್ ಅವರ ಜನ್ಮದಿನದ ಅಂಗವಾಗಿ ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್‌ಸ್ವಾಮಿ, ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ರಾಜಕುಮಾರ್ ಪಾರ್ಕ್‌ನಲ್ಲಿರುವ ಡಾ.ರಾಜ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು.

ಬಳಿಕ ಮಾತನಾಡಿದ ಸಂದೇಶ್ ಸ್ವಾಮಿ, ಡಾ.ರಾಜ್‌ಕುಮಾರ್, ಅಣ್ಣಾವ್ರು ಎಂದೇ ಖ್ಯಾತರಾಗಿದ್ದರು. ಕನ್ನಡ ಚಿತ್ರರಂಗ ಮತ್ತು ರಂಗಭೂಮಿಯ ಮೇರುನಟ. ನಟನೆ, ಗಾಯನ ಮತ್ತು ಚಿತ್ರ ನಿರ್ಮಾಣದ ಮೂಲಕ ವರನಟ, ನಟಸಾರ್ವಭೌಮ ಮೊದಲಾದ ಬಿರುದುಗಳು ಮತ್ತು ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಹಂಪಿ ವಿಶ್ವವಿದ್ಯಾಲಯದಿಂದ ನಾಡೋಜ ಪದವಿಯನ್ನು ಪಡೆದ ಮೊದಲ ನಟರು. ಭಾರತೀಯ ಚಿತ್ರರಂಗ ನೂರು ವರ್ಷ ಪೂರೈಸಿದ ಸಂದರ್ಭದಲ್ಲಿ ಫೋರ್ಬ್ಸ್ ಪತ್ರಿಕೆ ಪ್ರಕಟಿಸಿರುವ 25 ಅತ್ಯದ್ಭುತ ನಟರ ಪಟ್ಟಿಯಲ್ಲಿ ಡಾ.ರಾಜ್‌ಕುಮಾರ್ ಅವರ ಬಂಗಾರದ ಮನುಷ್ಯ ಚಿತ್ರದ ನಟನೆಯೂ ಒಂದಾಗಿದೆ. ಇದು ಅರ್ಥಗರ್ಭಿತ ಹಾಗೂ ಪ್ರೇರಣೆಯ ಚಿತ್ರವು ಆಗಿದ್ದು, ಈಗಲೂ ಜನಪ್ರಿಯ ಎಂದರು. ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್, ಕ್ಷೇತ್ರದ ಮುಖಂಡರಾದ ಸು.ಮುರುಳಿ, ಅಶೋಕ್, ಜಗದೀಶ್ ಇತರರಿದ್ದರು.





ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರ ಪರ ಮುಖಂಡ ಎಸ್.ರಮೇಶ್‌ಗೌಡ ರಾಮಕೃಷ್ಣನಗರದ 58ನೇ ವಾರ್ಡ್‌ನಲ್ಲಿ ಮನೆಮನೆಗೆ ಭೇಟಿ ನೀಡಿ ಮತಯಾಚಿಸಿದರು. ಡಿಸಿಸಿ ಸದಸ್ಯರಾದ ಬಿ.ರವಿ, ಕೆಪಿಸಿಸಿ ಹಿಂದುಳಿದ ಘಟಕ ಪ್ರಧಾನ ಕಾರ್ಯದರ್ಶಿ ಚಂದ್ರು, ಕೃಷ್ಣಪ್ಪ, ರೇಖಾ, ಸುನೀತಾ, ಸಿದ್ದಪ್ಪಾಜಿ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡ ಚಳವಳಿಗೆ ಡಾ.ರಾಜ್ ಸ್ಫೂರ್ತಿಯ ಸೆಲೆ

ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಸ್ಮರಣೆ

ಮೈಸೂರು,ಏ.24–ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದ ಡಾ. ರಾಜಕುಮಾರ್ ಉದ್ಯಾನವನದಲ್ಲಿರುವ ಡಾ.ರಾಜ್ ಪ್ರತಿಮೆಗೆ ವಿಶ್ವ ಮಾನವ ಡಾ.ರಾಜಕುಮಾರ್ ಸೇವಾ ಸಮಿತಿ ವತಿಯಿಂದ ಮಾಲಾರ್ಪಣೆ ಮಾಡುವ ಮೂಲಕ ವರನಟ ಡಾ.ರಾಜಕುಮಾರ್ ಜನ್ಮದಿನ ಆಚರಿಸಲಾಯಿತು.

ಈ ವೇಳೆ ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಮಾತನಾಡಿ, ಗೋಕಾಕ್ ಚಳುವಳಿ ಸಂದರ್ಭದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಡಾ.ರಾಜಕುಮಾರ್ ಕನ್ನಡಿಗರಲ್ಲಿ ಜಾಗೃತಿ ಮೂಡಿಸಿ, ಹೋರಾಟದ ಸ್ಫೂರ್ತಿಯಾದರು. ಅದರ ಫಲವಾಗಿ ಕನ್ನಡ ಭಾಷೆಗೆ ಎಲ್ಲೆಡೆ ಪ್ರಧಾನ ಸ್ಥಾನ ದೊರೆಯಲು ಸಾಧ್ಯವಾಯಿತು. ಸರಳ–ಸಜ್ಜನಿಕೆಯ ವ್ಯಕ್ತಿಯಾಗಿದ್ದ ಡಾ. ರಾಜ್ ತಮ್ಮ ಚಲನಚಿತ್ರಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಜನಪ್ರಿಯಗೊಳಿಸಿದರು. ಸಾಮಾಜಿಕ ಬದಲಾವಣೆಯಲ್ಲಿ ಅವರ ಚಲನಚಿತ್ರಗಳು ಪ್ರಮುಖ ಪಾತ್ರ ವಹಿಸಿವೆ ಎಂದರು.

ಡಾ.ರಾಜ್ ಅವರು ಶ್ರೇಷ್ಠ ಕಲಾವಿದರಾಗಿದ್ದ ಕಾರಣ ಅವರ ಚಲನಚಿತ್ರಗಳು ಜನಸಾಮಾನ್ಯರ ಮನಗೆದ್ದಿವೆ ಎಂದರು. ಈ ಸಂದರ್ಭದಲ್ಲಿ ಮುಡಾ ಸದಸ್ಯೆ ಲಕ್ಷ್ಮೀದೇವಿ, ವಿಶ್ವ ಮಾನವ ಡಾ. ರಾಜಕುಮಾರ್ ಸೇವಾ ಸಮಿತಿ ಕಾರ್ಯದರ್ಶಿ ಸಚೀಂದ್ರ, ಸಾಮಾಜಿಕ ಹೋರಾಟಗಾರ ವಿಕ್ರಮ ಅಯ್ಯಂಗಾರ್, ಚಕ್ರಪಾಣಿ, ಶಿವರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.





ಕರ್ನಾಟಕ ರತ್ನ ಡಾ.ರಾಜ್‌ಕುಮಾರ್ ಅವರ 94ನೇ ಜನ್ಮದಿನವನ್ನು ಮೈಸೂರಿನ ಗೋಕುಲಂನಲ್ಲಿ ಆಚರಿಸಲಾಯಿತು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಕುಂಬಾರಕೊಪ್ಪಲಿನ ಸ್ವಾಮಣ್ಣ, ಕೇಬಲ್ ವೆಂಕಟೇಶ, ಶ್ರೀನಿವಾಸ್‌ಗೌಡ, ಬುಲೆಟ್ ಬಸವರಾಜು, ಆಟೋ ಕಾಂತಾ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಸಿ.ಡಿ.ಕುಮಾರ್, ಪಿ.ಎ.ಪ್ರಕಾಶ್ ಇನ್ನಿತರರಿದ್ದರು.



ಮೈಸೂರು ಡಾ.ರಾಜ್ ಶಿವಸೈನ್ಯ ಶಿವ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಡಾ.ರಾಜ್ 94ನೇ ಜನ್ಮದಿನದ ಹಿನ್ನೆಲೆಯಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಚಿತ್ರನಟ ಸೋಮಣ್ಣ, ರಾಜೇಂದ್ರ, ಬಿ.ಎಸ್.ರವಿ, ಮಹೇಶ್, ಮಹದೇವ ಇನ್ನಿತರರು ಉಪಸ್ಥಿತರಿದ್ದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ನೇಮಕ



ಪ್ರದೀಪ್‌ಕುಮಾರ್

ಮೈಸೂರು,ಏ.24(ಆರ್‌ಕೆ)–ಮೈಸೂರು ನಗರದ 3 ಕ್ಷೇತ್ರಗಳ ಬ್ಲಾಕ್ ಕಾಂಗ್ರೆಸ್‌ಗಳಿಗೆ 6 ಮಂದಿ ಅಧ್ಯಕ್ಷರನ್ನು ನೇಮಿಸಲಾಗಿದೆ. ಚಾಮರಾಜ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷರಾಗಿ ಎಸ್.ಪ್ರದೀಪ್‌ಕುಮಾರ್, ದೇವರಾಜ ಬ್ಲಾಕ್‌ಗೆ ಯು.ಅಭಿಲಾಷ್, ಕೃಷ್ಣರಾಜ ಬ್ಲಾಕ್‌ಗೆ ಬಿ.ಮೋಹನ್‌ಕುಮಾರ್, ದೇವರಾಜ ಅರಸು ಬ್ಲಾಕ್‌ಗೆ ಎಸ್.ಎನ್.ರಾಜೇಶ್, ಅಜೀಜ್ ಸೇಠ್ ಬ್ಲಾಕ್‌ಗೆ ಮಾಜಿದ್ ತೌಫಿಕ್ ಖಾನ್ ಹಾಗೂ ಸಾಹುಕಾರ್ ಚೆನ್ನಯ್ಯ ಬ್ಲಾಕ್‌ಗೆ ಸಮೀರ್ ಅಹಮದ್ ಅವರನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ ಎಂದು ನಗರ (ಜಿಲ್ಲಾ) ಕಾಂಗ್ರೆಸ್ ಸೇವಾದಳದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಏ.24– 2022–23ನೇ ಸಾಲಿನ ಪೋಷಕರ ವಾರ್ಷಿಕ ವರಮಾನ 2.5 ಲಕ್ಷ ರೂ. ಒಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಲು ಏ.30 ಅಂತಿಮ ದಿನವಾಗಿರುತ್ತದೆ. ಪಿ.ಯು.ಸಿ ಮತ್ತು ಐ.ಟಿ.ಐ ಹೊರತುಪಡಿಸಿ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಪಡುವಾರಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಕಚೇರಿಯ ಸಹಾಯಕ ನಿರ್ದೇಶಕರು ಗ್ರೇಡ್ –1 ಅವರನ್ನು ಸಂಪರ್ಕಿಸಬಹುದು.

ಭಾರತೀಯ ಸರ್ಕಸ್‌ನ ಪಿತಾಮಹ ಜೆಮಿನಿ ಶಂಕರನ್ ಇನ್ನಿಲ್ಲ




ಮೈಸೂರು, ಏ. 24– ಭಾರತೀಯ ಸರ್ಕಸ್ ಪಿತಾಮಹ ಎಂದೇ ಪರಿಗಣಿತರಾಗಿ ಖ್ಯಾತರಾಗಿದ್ದ ಜೆಮಿನಿ ಶಂಕರನ್ (99) ಅವರು ಇಂದು ಕೇರಳದ ಕಣ್ಣೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಇವರ ನಿಧನಕ್ಕೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಜೆಮಿನಿ ಮತ್ತು ಜಂಬೋ ಸರ್ಕಸ್ ಕಂಪನಿ ಸ್ಥಾಪಿಸಿದ್ದ ಇವರು ದೇಶ–ವಿದೇಶದಲ್ಲಿ ಹೆಸರುವಾಸಿಯಾಗಿದ್ದರು. ಅಲ್ಲದೆ ಅತ್ಯಂತ ಹಳೆಯ ಸರ್ಕಸ್ ಕಲಾವಿದರೂ ಆಗಿದ್ದರು. ಇಂಡಿಯನ್ ಸರ್ಕಸ್ ಫೆಡರೇಷನ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಶಂಕರನ್ ಭಾರತೀಯ ಸರ್ಕಸ್ ಅನ್ನು ವಿಶ್ವದಾದ್ಯಂತ ಜನಪ್ರಿಯಗೊಳಿಸಿದ್ದರು.

ಆರ್.ಪದ್ಮನಾಭ



ಮೈಸೂರಿನ ಕೆಸಿ ಲೇಔಟ್ 6ನೇ ಕ್ರಾಸ್ ನಿವಾಸಿಯಾದ ನಿವೃತ್ತ ಕೆಎಸ್‌ಆರ್‌ಟಿಸಿ ನೌಕರ ಆರ್.ಪದ್ಮನಾಭ (80) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಏ.25) ಮಧ್ಯಾಹ್ನ 2 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.4.2023 ಮಂಗಳವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 27.04.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಶ್ರೀ ಅವನಿ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ ಶ್ರೀ ಶಾರದಾ ಪೀಠಂ, ಮೈಸೂರು ಶಾಖೆ:** ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತಿ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ಗುರುವಂದನೆ, ಅನುಜ್ಞೆ, ಸಂಕಲ್ಪ, ಏಕಾದಶವಾರ ರುದ್ರಾಭಿಷೇಕ, ವಿವಿಧ ಪಾರಾಯಣಗಳು (ಭಗವದ್ಗೀತೆ, ವಿಷ್ಣು ಸಹಸ್ರನಾಮ, ಉಪನಿಷತ್), ಸಾಮೂಹಿಕ ಶ್ರೀ ಶಂಕರಾಚಾರ್ಯರ ಅಷ್ಟೋತ್ತರ ಪಾರಾಯಣ, ಸೌಂದರ್ಯಲಹರಿ, ಮಧ್ಯಾಹ್ನ 12ಕ್ಕೆ ಡಾ.ಹೆಚ್.ಎಲ್.ಚಂದ್ರಶೇಖರ್ ಅವರಿಂದ ಉಪನ್ಯಾಸ, ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.15ಕ್ಕೆ ಶ್ರೀಮತಿ ವಸುಧ ಸಿ. ಅವರಿಂದ ಸ್ತೋತ್ರ ಗಾಯನ, ಸಂಜೆ 6.45ಕ್ಕೆ ವಿದ್ವಾನ್ ನಾರಾಯಣ ದೇಸಾಯಿ ಅವರಿಂದ ಶಂಕರ ಸ್ತೋತ್ರ ವೈಭವ ಕುರಿತು ಉಪನ್ಯಾಸ, ಸಂಜೆ 8.45ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಮಹಾಸಂಸ್ಥಾನಂ ಆವರಣ, ವಿದ್ಯಾರಣ್ಯಪುರಂ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್:** ಶ್ರೀ ಶಂಕರ ಜಯಂತಿ, ಬೆಳಗ್ಗೆ 8ಕ್ಕೆ ಶ್ರೀ ಶಂಕರ ಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಆವರಣ, ಶ್ರೀರಾಮಪೇಟೆ
- **ಮಹಾಜನ ಪ್ರಥಮ ದರ್ಜೆ ಕಾಲೇಜು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ :** ಯೋಗಪಟು ಕೆ.ಎಸ್.ಬದರಿ ನಾರಾಯಣ್ ಅವರಿಂದ 50 ನಿಮಿಷಗಳ ಕಾಲ ಕಣ್ಣು ಮಿಟುಕಿಸದೇ ಸೂರ್ಯ ದೇವರನ್ನು (ಸನ್ ಗೇಜಿಂಗ್) ನೋಡುವ ಕ್ರಿಯೆ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಮೈಸೂರು ಅರಮನೆ, ಬೆಳಗ್ಗೆ 11.45ಕ್ಕೆ.
- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ವಿಶೇಷ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಆಭರಣ ಮಳಿಗೆ, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ, ಸಂಜೆ 4.30ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿ ಸಮಿತಿ :** ಪ್ರಸಿದ್ಧ ವಿದ್ವಾಂಸರಾದ ಪಂಡಿತ್ ಶ್ರೀ ಮುರಳೀಧರದಾಸ್ ಅವರಿಂದ 'ಹರಿಕಥಾಮೃತ ಸಾರ' ವಿಷಯ ಕುರಿತು ಪ್ರವಚನ, ಸ್ಥಳ: ರಾಯರ ಮಠ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.
- **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಭೂಮಿ ದಿನ ಆಚರಣೆ, ನಮ್ಮ ಗ್ರಹದಲ್ಲಿ ಹೂಡಿಕೆ ಮಾಡಿ ಕುರಿತು ಮೇಜರ್ ಜನರಲ್ ಡಾ. ಎಸ್.ಜಿ. ಒಂಬತ್ಕೆರೆ (ನಿವೃತ್ತ) ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಅಂಬಯ್ಯನುಲಿ, ಕೆ.ಪಿ. ರೇವತಿ, ವ್ಯಾಖ್ಯಾನ– ಡಾ.ಎನ್.ಎಸ್.ತಾರಾನಾಥ್, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್.ಎಸ್., 8.30 ಕಾಫಿ ತಿಂಡಿ–ಸಂಗೀತ ಕಲಾವಿದ ಫಿಯಾಜ್ ಖಾನ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಡಾ. ಮೈಸೂರು ಉಮೇಶ್, 9.30ಚುನಾವಣೆ 2023 –ವಿಧಾನಸಭಾ ಕ್ಷೇತ್ರ ಪರಿಚಯ, 10.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣೆ ಸಾಹಿತ್ಯ– ಎಸ್. ಶಂಕರ್, ನಿರ್ಮಾಣ–ಗೀತಾ ರಮಾನಂದ್, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ರಾಜಗೋಪಾಲ ಭಾಗವತ್, ಶಾಂತಾ ಜಯತೀರ್ಥ, 12.45 ಭೂಗೋಳ ಅಧ್ಯಯನದ ಆಧುನಿಕ ಆಯಾಮ–ಡಾ. ನಾಗರಾಜ್ ಹೆಚ್., 1.20 ಭಾವಗೀತೆಗಳು– ಎಸ್. ಸುನೀತಾ, ಜಿ.ವಿ.ಅತ್ರಿ, 3.00 ಆಲತ್ತೂರು ಸಹೋದರರು–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಶ್ರೀ ಕೃಷ್ಣ ಲೀಲೆ", ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಮಿಶ್ರಮಾಧುರ್ಯ, 6.55 ಕೃಷಿರಂಗ–ಕಿಸಾನ್‌ವಾಣಿ– ಕಬ್ಬಿನ ಬೆಳೆಯಲ್ಲಿ ಬೇರು ತಿನ್ನುವ ಹುಳುವಿನ ಸಮಗ್ರ ನಿರ್ವಹಣೆ ಕುರಿತು ಡಾ. ಜಿ.ಕೆ. ಶಿಲ್ಪ ಅವರೊಂದಿಗೆ ಸಂದರ್ಶನ, 9.15 ಯಕ್ಷಗಾನದ ಹಾಡುಗಳು–ಜಾಂಬವತಿ ಕಲ್ಯಾಣ ಪ್ರಸಂಗದ ಹಾಡುಗಳು–ಲಕ್ಷ್ಮೀನಾರಾಯಣ ಭಟ್, 9.30 ಎಂ.ರಾಘವೇಂದ್ರ – ಹಾಡುಗಾರಿಕೆ, 10.30 ಗಮಕ ವ್ಯಾಖ್ಯಾನ, ವಾಚನ– ಸುಮಾ ವಿಜಯ್, ವ್ಯಾಖ್ಯಾನ– ಶ್ರೀನಿವಾಸ್ ಫಣಿ

ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲಿ 143 ಅಭ್ಯರ್ಥಿಗಳು ಕಣದಲ್ಲಿ

ವರುಣಾ ವಿಧಾನಸಭಾ ಕ್ಷೇತ್ರ



ಸಿದ್ದರಾಮಯ್ಯ ವಿ.ಸೋಮಣ್ಣ ಭಾರತಿ ಶಂಕರ್ ಕೃಷ್ಣಮೂರ್ತಿ

ಕಾಂಗ್ರೆಸ್‌ನ ಸಿದ್ದರಾಮಯ್ಯ, ಬಿಜೆಪಿಯ ವಿ.ಸೋಮಣ್ಣ, ಜೆಡಿಎಸ್‌ನ ಡಾ. ಎನ್.ಎಲ್. ಭಾರತಿ ಶಂಕರ್, ಬಹುಜನ ಸಮಾಜ ಪಾರ್ಟಿಯ ಎಂ.ಕೃಷ್ಣಮೂರ್ತಿ, ಆಮ್ ಆದ್ಮಿ ಪಕ್ಷದ ರಾಜೇಶ್, ಕನ್ನಡ ದೇಶದ ಪಕ್ಷ ಅರುಣ್ ಲಿಂಗ, ಕರ್ನಾಟಕ ಜನತಾ ಪಕ್ಷದ ಎನ್.ಅಂಬರೀಷ್, ಸಮಾಜವಾದಿ ಜನತಾ ಪಾರ್ಟಿ ಕೆ.ನಾಗೇಶ್ ನಾಯ್ಕ, ಉತ್ತಮ ಪ್ರಜಾಕೀಯ ಪಕ್ಷದ ಆರ್.ಮಹದೇವಸ್ವಾಮಿ, ಕರ್ನಾಟಕ ರಾಷ್ಟ್ರೀಯ ಸಮಿತಿ (ಕೆಆರ್‌ಎಸ್)ಯ ಎಂ.ರವಿಕುಮಾರ್, ಕರ್ನಾಟಕ ಪ್ರಜಾ ಪಕ್ಷದ ಈ. ಶಿವ, ಪಕ್ಷೇತರರಾದ ಈ.ಚೇತನ್, ಪ್ಯಾರಿ ಜಾನ್, ಎಂ.ಮಹೇಶ್, ಡಾ.ಯು.ಪಿ.ಶಿವಾನಂದ ಸೇರಿ 15 ಅಭ್ಯರ್ಥಿಗಳು ಕಣದಲ್ಲುಳಿದಿದ್ದಾರೆ.

ಕೆ.ಆರ್.ನಗರ



ಸಾ.ರಾ.ಮಹೇಶ್ ಡಿ.ರವಿಶಂಕರ್ ವೆಂಕಟೇಶ್

ಜೆಡಿಎಸ್‌ನ ಸಾ.ರಾ.ಮಹೇಶ್, ಕಾಂಗ್ರೆಸ್‌ನ ಡಿ.ರವಿಶಂಕರ್, ಬಿಜೆಪಿಯ ಹೊಸಹಳ್ಳಿ ವೆಂಕಟೇಶ್, ಬಿಎಸ್‌ಪಿಯ ಭರತ್‌ಕುಮಾರ್, ಆಮ್ ಆದ್ಮಿ ಪಾರ್ಟಿಯ ಮುರುಗೇಶ್, ಕೆಆರ್‌ಎಸ್ ಪಕ್ಷದ ಪರಮೇಶ, ಉತ್ತಮ ಪ್ರಜಾಕೀಯ ಪಾರ್ಟಿಯ ಕೆ.ಮೋಹನ್, ಪಕ್ಷೇತರ ಶಿವುಗೌಡ ಸೇರಿ ಒಟ್ಟು 8 ಮಂದಿ.

ನರಸಿಂಹರಾಜ



ತನ್ವೀರ್ ಸೇಠ್ ಸಂದೇಶ್ ಸ್ವಾಮಿ ಅಬ್ದುಲ್ ಖಾದರ್ ಧರ್ಮಶ್ರೀ

ಕಾಂಗ್ರೆಸ್‌ನ ತನ್ವೀರ್ ಸೇಠ್, ಬಿಜೆಪಿಯ ಎಸ್.ಸತೀಶ್ ಸಂದೇಶ್ ಸ್ವಾಮಿ, ಜೆಡಿಎಸ್‌ನ ಅಬ್ದುಲ್ ಖಾದರ್, ಆಮ್ ಆದ್ಮಿ ಪಾರ್ಟಿಯ ಧರ್ಮಶ್ರೀ, ಎಸ್‌ಡಿಪಿಐನ ಕೆ.ಹೆಚ್.ಅಬ್ದುಲ್ ಮಜೀದ್, ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿಯ ರಿಹಾನ ಬಾನು, ಉತ್ತಮ ಪ್ರಜಾಕೀಯ ಪಾರ್ಟಿ ಜೆ.ಎಸ್.ಲೀಲಾವತಿ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಕರ್ನಾಟಕ) ವಿನೋಧ ಎಂ.ಚಾಕೋ, ಕೆಆರ್‌ಎಸ್ ಪಕ್ಷದ ಸುಂದರ್ ಪ್ರೇಂಕುಮಾರ್, ಪಕ್ಷೇತರಾದ ಖಲೀಲ್ ಉರ್ ರಹಮಾನ್ ಷರೀಫ್, ಎಂ.ಎನ್.ನೀಲಕಂಠ, ಆರ್.ಸಿ.ರಾಜ್, ರಾಬರ್ಟ್ ಇಮ್ಯಾನುಯಲ್, ಎಂ.ಲಿಂಗರಾಜ್, ಜಿ.ಲೋಕೇಶ್ ಕುಮಾರ್, ಜಿ.ಬಿ.ಶಿವಣ್ಣ, ಸೈಯದ್ ಆಲಿಷಾನ್ ಸೇರಿ ಒಟ್ಟು 17 ಅಭ್ಯರ್ಥಿಗಳು.

ತಿ.ನರಸೀಪುರ



ಅಶ್ವಿನ್‌ಕುಮಾರ್ ಹೆಚ್.ಸಿ.ಮಹದೇವಪ್ಪ ರೇವಣ್ಣ ಪುಟ್ಟಸ್ವಾಮಿ

ಜೆಡಿಎಸ್ ಎಂ. ಅಶ್ವಿನ್‌ಕುಮಾರ್, ಕಾಂಗ್ರೆಸ್‌ನ ಡಾ. ಹೆಚ್.ಸಿ. ಮಹದೇವಪ್ಪ, ಬಿಜೆಪಿ ಡಾ.ಎಂ.ರೇವಣ್ಣ, ಬಹುಜನ ಸಮಾಜ ಪಾರ್ಟಿಯ ಬಿ.ಆರ್.ಪುಟ್ಟಸ್ವಾಮಿ, ಆಮ್ ಆದ್ಮಿ ಪಾರ್ಟಿಯ ಎಂ.ಸಿದ್ದರಾಜು, ರಾಣಿ ಚೆನ್ನಮ್ಮ ಪಾರ್ಟಿಯ ಎನ್.ಚಂದ್ರಪ್ಪ, ಕೆಆರ್‌ಎಸ್ ಪಕ್ಷದ ಎಂ.ಡಿ.ಮಂಜುನಾಥ, ಕಂಟ್ರಿ ಸಿಟಿಜನ್ ಪಾರ್ಟಿಯ ಆರ್.ರೇಣುಕಾ, ಸಮಾಜವಾದಿ ಜನತಾ ಪಾರ್ಟಿಯ ಎ.ಎನ್.ಶಿವಲಿಂಗಪ್ಪ, ಇಂಡಿಯನ್ ಮೂವ್‌ಮೆಂಟ್ ಪಾರ್ಟಿಯ ಶ್ರೀನಿವಾಸ, ಪಕ್ಷೇತರರಾದ ಕೆ.ಕೆಂಚಯ್ಯ, ಎಸ್.ಚಂದ್ರಶೇಖರ್ ಸೇರಿ 12 ಅಭ್ಯರ್ಥಿಗಳು.

ಚಾಮರಾಜ



ಎಲ್.ನಾಗೇಂದ್ರ ಹರೀಶ್‌ಗೌಡ ಹೆಚ್.ಕೆ.ರಮೇಶ್ ಮಾಳವಿಕಾ

ಬಿಜೆಪಿ ಎಲ್.ನಾಗೇಂದ್ರ, ಕಾಂಗ್ರೆಸ್‌ನ ಕೆ.ಹರೀಶ್‌ಗೌಡ, ಜೆಡಿಎಸ್‌ನ ಹೆಚ್.ಕೆ.ರಮೇಶ್(ರವಿ), ಆಮ್ ಆದ್ಮಿ ಪಾರ್ಟಿಯ ಮಾಲವಿಕ ಗುಬ್ಬಿವಾಣಿ, ಬಿಎಸ್‌ಪಿ ಚಂದ್ರಶೇಖರ, ಕೆಆರ್‌ಎಸ್ ಪಕ್ಷ ಡಿಪಿಕೆ ಪರಮೇಶ, ಕಂಟ್ರಿ ಸಿಟಿಜನ್ ಪಾರ್ಟಿಯ ಎಂ.ಪಂಚಲಿಂಗು, ಉತ್ತಮ ಪ್ರಜಾಕೀಯ ಪಾರ್ಟಿಯ ಪ್ರಭ ನಂದೀಶ್, ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಫಾರ್ ಇಂಡಿಯಾ(ಕಮ್ಯುನಿಸ್ಟ್) ಜಿ.ಎಸ್. ಸೀಮಾ, ಪಕ್ಷೇತರರಾದ ಎಂ.ಮನೋಜ್‌ಕುಮಾರ್, ಆರ್.ಯೋಗಾ ನರಸಿಂಹ ಮೂರ್ತಿ, ಸಲೀಂ ಅಹ್ಮದ್, ಹೆಚ್.ಡಿ.ಸಿದ್ದರಾಕು(ಕಾವೇರಿ ಮೆಸ್), ಟಿ.ಎಸ್.ಸುರೇಶ್ ಸೇರಿ 14 ಅಭ್ಯರ್ಥಿಗಳು.

ಹುಣಸೂರು



ಹರೀಶ್‌ಗೌಡ ಮಂಜುನಾಥ್ ಸೋಮಶೇಖರ್

ಜೆಡಿಎಸ್‌ನ ಜಿ.ಡಿ. ಹರೀಶ್‌ಗೌಡ, ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್, ಬಿಜೆಪಿಯಿಂದ ಸೋಮಶೇಖರ್, ಬಿಎಸ್‌ಪಿ ಪ್ರಸನ್ನಕುಮಾರ್, ಆಮ್ ಆದ್ಮಿ ಪಾರ್ಟಿಯ ಜಿ.ರವಿಕುಮಾರ್, ಕೆಆರ್‌ಎಸ್ ಪಕ್ಷ ತಿಮ್ಮಾಬೋವಿ, ಉತ್ತಮ ಪ್ರಜಾಕೀಯ ಪಾರ್ಟಿ ಡಿ.ಎನ್.ಸುನೀಲ್, ಪಕ್ಷೇತರರಾದ ಉಮೇಶ್, ಚನ್ನೇಗೌಡ, ಹೆಚ್.ಬಿ.ರಾಜೇಂದ್ರ, ಬಿ.ಎಲ್. ಲೋಕೇಶ್, ಸೈಯದ್ ಅನೀಫ್ ಸೇರಿ ಒಟ್ಟು 12 ಅಭ್ಯರ್ಥಿಗಳು.

ಚಾಮುಂಡೇಶ್ವರಿ ಕ್ಷೇತ್ರ



ಜಿ.ಟಿ.ದೇವೇಗೌಡ ಸಿದ್ದೇಗೌಡ ಕವೀಶ್‌ಗೌಡ

ಜೆಡಿಎಸ್‌ನ ಜಿ.ಟಿ.ದೇವೇಗೌಡ, ಕಾಂಗ್ರೆಸ್ ಎಸ್.ಸಿದ್ದೇಗೌಡ, ಬಿಜೆಪಿಯ ವಿ.ಕವೀಶ್‌ಗೌಡ, ಬಿಎಸ್‌ಪಿಯ ಜೆ.ಜಯಶಂಕರ (ಶ್ಯಾಮ್), ಆಮ್ ಆದ್ಮಿ ಪಾರ್ಟಿಯ ಕಿರಣ್ ನಾಗೇಶ್ ಕಲ್ಯಾಣಿ, ಉತ್ತಮ ಪ್ರಜಾಕೀಯ ಪಾರ್ಟಿಯ ಎಸ್.ಹರೀಶ, ಕೆಆರ್‌ಎಸ್ ಪಕ್ಷದ ಮಾ.ಸ.ಪ್ರವೀಣ್, ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ಬಿ.ಶಿವಣ್ಣ, ಪಕ್ಷೇತರರಾದ ಜಿ.ಎಂ. ಮಹದೇವ, ಸಿದ್ದೇಗೌಡ, ಎಂ.ನಾಗರಾಜು, ಎಂ.ಎಂ.ಮಹೇಶ್‌ಗೌಡ, ಎಂ.ರಂಗಸ್ವಾಮಿ, ಸುರೇಶ್ ಸೇರಿ ಒಟ್ಟು 14 ಅಭ್ಯರ್ಥಿಗಳು.

ಪಿರಿಯಾಪಟ್ಟಣ



ಕೆ.ಮಹದೇವ ಕೆ.ವೆಂಕಟೇಶ್ ವಿಜಯಶಂಕರ್

ಜೆಡಿಎಸ್‌ನ ಕೆ.ಮಹದೇವ, ಕಾಂಗ್ರೆಸ್‌ನ ಕೆ.ವೆಂಕಟೇಶ್, ಬಿಜೆಪಿಯ ಸಿ. ಹೆಚ್.ವಿಜಯಶಂಕರ್, ಬಿಎಸ್‌ಪಿ ಸಿ.ಎಸ್.ಪ್ರದೀಪ, ಆಮ್ ಆದ್ಮಿ ಪಕ್ಷದ ರಾಜಶೇಖರ್ ದೊಡ್ಡಣ್ಣ, ಕರ್ನಾಟಕ ರಾಷ್ಟ್ರ ಸಮಿತಿಯ ಗುರುಮೂರ್ತಿ ಜೋಗನಹಳ್ಳಿ, ಉತ್ತಮ ಪ್ರಜಾಕೀಯ ಪಕ್ಷದ ಪಿ.ಎಸ್.ನವೀನ್ ಕುಮಾರ್, ಪಕ್ಷೇತರರಾದ ಕಿರಣ್ ಹರದೂರ್, ಆರ್.ತುಂಗಾ ಶ್ರೀನಿವಾಸ ಹಾಗೂ ಬಿ.ಎಸ್.ಸುಬ್ರಹ್ಮಣ್ಯ ಸೇರಿ ಒಟ್ಟು 10 ಅಭ್ಯರ್ಥಿಗಳು.

ಕೃಷ್ಣರಾಜ ಕ್ಷೇತ್ರ



ಶ್ರೀವತ್ಸ ಸೋಮಶೇಖರ್ ಮಲ್ಲೇಶ್

ಬಿಜೆಪಿ ಟಿ.ಎಸ್. ಶ್ರೀವತ್ಸ ಕಾಂಗ್ರೆಸ್ ಎಂ.ಕೆ.ಸೋಮಶೇಖರ್, ಜೆಡಿಎಸ್‌ನ ಕೆ.ವಿ. ಮಲ್ಲೇಶ್, ಆಮ್ ಆದ್ಮಿ ಪಕ್ಷದ ವೈಜಯಶ್ರೀ, ಬಿಎಸ್‌ಪಿಯ ಸಿ.ಶ್ರೀನಿವಾಸಪ್ರಸಾದ್, ಇಂಡಿಯನ್ ಮೂಮೆಂಟ್ ಪಕ್ಷದ ಎಂ.ಲಿಂಗರಾಜು, ಉತ್ತಮ ಪ್ರಜಾಕೀಯ ಪಕ್ಷದ ಎಸ್.ಸುಮಲತಾ, ಕೆಆರ್‌ಎಸ್ ಪಕ್ಷ ಕೆ.ಎಸ್.ಸೋಮಸುಂದರ್, ಎಸ್‌ಯುಸಿಐನ ಪಿ.ಎಸ್.ಸಂಧ್ಯಾ, ಪಕ್ಷೇತರರಾದ ಅಮಿತಾಭ ಹೆಚ್.ಪಿ.ಉದಯಶಂಕರ, ತೇಜಸ್ವಿಕುಮಾರ್, ಹೆಚ್.ಎನ್.ಪಾರ್ಥಸಾರಥಿ, ಎಸ್.ಪ್ರಕಾಶ್ ಪ್ರಿಯಾದರ್ಶನ್, ಬಿ.ರೋಹಿತ್ ಕುಮಾರ್, ಸತೀಶ್, ಸುಂಡಹಳ್ಳಿ ಸೋಮಶೇಖರ ಸೇರಿ ಒಟ್ಟು 17 ಅಭ್ಯರ್ಥಿಗಳು.

ನಂಜನಗೂಡು ಕ್ಷೇತ್ರ



ದರ್ಶನ್



ಹರ್ಷವರ್ಧನ್

ಕಾಂಗ್ರೆಸ್ ದರ್ಶನ್ ಧ್ರುವನಾರಾಯಣ್, ಬಿಜೆಪಿ ಬಿ.ಹರ್ಷವರ್ಧನ್, ಬಿಎಸ್‌ಪಿಯ ಶ್ರೀಕಂಠ, ಆಮ್ ಆದ್ಮಿ ಪಾರ್ಟಿಯ ಹೆಚ್.ಹನುಮಯ್ಯ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಮಾದೇಶನ್, ಕರ್ನಾಟಕ ರಾಷ್ಟ್ರ ಸಮಿತಿಯ ವಿಜಯ್‌ಕುಮಾರ್, ಪಕ್ಷೇತರರಾದ ಆನಂದ ಜೀವನ್‌ರಾಂ, ವಿ.ಗೋವಿಂದರಾಜು, ಜಿ.ಡಿ.ರಾಜಗೋಪಾಲ, ಬಿ.ವಿದ್ಯಾಸಾಗರ್, ಹೆಚ್.ಕೆ.ಸ್ವಾಮಿ ಹರದನಹಳ್ಳಿ, ಸುಬ್ಬಯ್ಯ ಸೇರಿ ಒಟ್ಟು 12 ಅಭ್ಯರ್ಥಿಗಳು.

ಮೈಸೂರು ಜಿಲ್ಲೆ @ 143

ಕ್ಷೇತ್ರ	ಅ.ಸಂಖ್ಯೆ
ಕೃಷ್ಣರಾಜ	17
ನರಸಿಂಹರಾಜ	17
ವರುಣ	15
ಚಾಮುಂಡೇಶ್ವರಿ	14
ಚಾಮರಾಜ	14
ಹುಣಸೂರು	12
ಹೆಚ್.ಡಿ.ಕೋಟೆ	12
ನಂಜನಗೂಡು	12
ತಿ.ನರಸೀಪುರ	12
ಪಿರಿಯಾಪಟ್ಟಣ	10
ಕೆ.ಆರ್.ನಗರ	8
ಒಟ್ಟು	143

ಹೆಚ್.ಡಿ.ಕೋಟೆ ಕ್ಷೇತ್ರ



ಅನಿಲ್ ಕೃಷ್ಣನಾಯಕ ಜಯಪ್ರಕಾಶ

ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು, ಬಿಜೆಪಿ ಕೆ.ಎಂ.ಕೃಷ್ಣನಾಯಕ, ಜೆಡಿಎಸ್ ಜಯಪ್ರಕಾಶ ಚಿಕ್ಕಣ್ಣ, ಬಿಎಸ್‌ಪಿಯ ಹೋಟೆಲ್ ಶಿವಣ್ಣ, ಉತ್ತಮ ಪ್ರಜಾಕೀಯ ಪಾರ್ಟಿಯ ಹೆಚ್.ಎಂ.ನಾಗೇಶ, ಸಮಾಜವಾದಿ ಜನತಾ ಪಾರ್ಟಿ (ಕರ್ನಾಟಕ) ಕೆ.ವಿ.ರಾಜು, ಕೆಆರ್‌ಎಸ್ ಪಕ್ಷದ ಹೆಚ್.ಎಂ.ಶಿವಪ್ಪ, ಪಕ್ಷೇತರರಾದ ಗಿರಿಜಾಂಬ, ಜಿ.ಎನ್.ದೇವದತ್ತ, ಎ.ಎಂ. ಬಾಬು ನಾಯಕ, ಎಂ.ಎಸ್.ಶಿವಕುಮಾರ, ಸಣ್ಣನಾಯ್ಕ ಸೇರಿ ಒಟ್ಟು 12 ಅಭ್ಯರ್ಥಿಗಳು.

ಜಿಲ್ಲೆಯಲ್ಲಿ ಒಟ್ಟು 194 ಅಭ್ಯರ್ಥಿಗಳು ನಾಮಪತ್ರ ಸಲ್ಲಿದ್ದರು. ಏ.21ರಂದು ನಾಮಪತ್ರ ಪರಿಶೀಲನೆ ವೇಳೆ 22 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡು, 172 ಅಭ್ಯರ್ಥಿಗಳ ನಾಮಪತ್ರ ಸ್ವೀಕೃತಗೊಂಡಿದ್ದವು. ಇವರಲ್ಲಿ 29 ಮಂದಿ ತಮ್ಮ ಉಮೇದುವಾರಿಕೆ ಹಿಂಪಡೆದಿದ್ದು ಅಂತಿಮವಾಗಿ 143 ಅಭ್ಯರ್ಥಿಗಳು ಚುನಾವಣಾ ಅಖಾಡದಲ್ಲಿ ಉಳಿದಿದ್ದಾರೆ.

ವಿವಿಧ ಪಕ್ಷಗಳ ಸ್ಪರ್ಧೆ

ನರಸಿಂಹರಾಜ ಹೊರತುಪಡಿಸಿ ಉಳಿದ 10 ಕ್ಷೇತ್ರಗಳಲ್ಲಿ ಬಹುಜನ ಸಮಾಜವಾದಿ ಪಕ್ಷ(ಬಿಎಸ್‌ಪಿ), ಹೆಚ್.ಡಿ.ಕೋಟೆ ಹೊರತುಪಡಿಸಿ ಉಳಿದ 10 ಕ್ಷೇತ್ರಗಳಲ್ಲಿ ಆಮ್ ಆದ್ಮಿ ಪಕ್ಷ(ಎಎಪಿ), ತಿ.ನರಸೀಪುರ ಹಾಗೂ ನಂಜನಗೂಡು ಹೊರತುಪಡಿಸಿ ಉಳಿದ 9 ಕ್ಷೇತ್ರದಲ್ಲಿ ಉತ್ತಮ ಪ್ರಜಾಕೀಯ ಪಕ್ಷ, ನರಸಿಂಹರಾಜದಲ್ಲಿ ಎಸ್‌ಡಿಪಿಐ, ನಂಜನಗೂಡಿನಲ್ಲಿ ಜನಾರ್ಧನ್ ರೆಡ್ಡಿ ಅವರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಭ್ಯರ್ಥಿ ಕಣದಲ್ಲಿದ್ದಾರೆ. ಕರ್ನಾಟಕ ರಾಷ್ಟ್ರೀಯ ಸಮಿತಿ(ಕೆಆರ್‌ಎಸ್) ಪಕ್ಷ ಎಲ್ಲಾ ಕ್ಷೇತ್ರದಲ್ಲೂ ಸ್ಪರ್ಧಿಸಿದೆ. ಸಮಾಜವಾದಿ ಜನತಾ ಪಾರ್ಟಿ, ಕಂಟ್ರಿ ಸಿಟಿಜನ್ ಪಾರ್ಟಿ, ಎಸ್‌ಯುಸಿಐ ಸೇರಿದಂತೆ ಸೇರಿದಂತೆ ಹಲವು ಪಕ್ಷಗಳ ಅಭ್ಯರ್ಥಿಗಳು ವಿವಿಧೆಡೆ ಸ್ಪರ್ಧಿಸಿದ್ದಾರೆ.

ಬೊಮ್ಮಾಯಿ ಸರ್ಕಾರ ಅಲಿಬಾಬಾ, 40 ಕಳ್ಳರ ಸರ್ಕಾರ

ಸಿದ್ದರಾಮಯ್ಯ ವ್ಯಂಗ್ಯ

ಬೆಳಗಾವಿ: ಬೊಮ್ಮಾಯಿ ಸರ್ಕಾರ ಅಲಿಬಾಬ ಮತ್ತು 40 ಕಳ್ಳರ ಸರ್ಕಾರ. ಬಿಜೆಪಿಯವರು ಯದ್ವಾತದ್ವಾ ಭ್ರಷ್ಟಾಚಾರ ಮಾಡಿದ್ದಾರೆ. ಬಿಜೆಪಿ ಅತ್ಯಂತ ಭ್ರಷ್ಟ ಸರ್ಕಾರ ಎಂದು ಜನರು ಬೀದಿ ಬೀದಿಗಳಲ್ಲಿ ಮಾತನಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಡಿದರು.

ಗೋಕಾಕ್ ನಗರದಲ್ಲಿ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಾವೆಲ್ಲಾ 2013ರಲ್ಲಿ ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದ್ದೀರಿ. ನಾನು ಸಿಎಂ ಆಗಿದ್ದೆ. ನಮ್ಮ ಸರ್ಕಾರ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಸಮಾಜದ ಎಲ್ಲಾ ಬಡವರಿಗೆ ಕಾರ್ಯಕ್ರಮ ಕೊಡುವ ಕೆಲಸ ಮಾಡಿದ್ದೇನೆ. ನಮ್ಮದು ನುಡಿದಂತೆ ನಡೆದ ಸರ್ಕಾರ. ಎಲ್ಲಾ ಭರವಸೆಗಳನ್ನು ಈಡೇರಿಸಿದ್ದೇವೆ. 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. ಅನ್ನಭಾಗ್ಯ, ಶೂ ಭಾಗ್ಯ, ವಿದ್ಯಾಸಿರಿ, ಮಾತೃಪೂರ್ಣ ಯೋಜನೆಗಳನ್ನು ಜಾರಿಗೆ ತಂದಿದ್ದೇನೆ. ಬಿಜೆಪಿ 2018ರಲ್ಲಿ 600 ಭರವಸೆಗಳನ್ನು ನೀಡಿತ್ತು. ಅದರಲ್ಲಿ ಕೇವಲ 50 ಭರವಸೆಗಳನ್ನು ಈಡೇರಿಸಿದೆ ಎಂದು ಟೀಕಿಸಿದರು.



ಗೋಕಾಕ್ ಮತದಾರರು ಬದಲಾವಣೆ ಬೇಕು ಎಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ. ನಾನು ರಾಜ್ಯಾದ್ಯಂತ ಪ್ರವಾಸ ಮಾಡಿದ್ದೇನೆ. ಜನರು ಬದಲಾವಣೆ ಬಯಸಿದ್ದಾರೆ. ಜನವಿರೋಧಿ, ಭ್ರಷ್ಟಾಚಾರ ಸರ್ಕಾರ ಇರುವುದರಿಂದ ಬಿಜೆಪಿ ಸರ್ಕಾರವನ್ನು ಬದಲಾವಣೆ ಮಾಡಬೇಕೆಂಬುದು ಜನರ ಅಭಿಲಾಷೆಯಾಗಿದೆ ಎಂದರು. ಗುತ್ತಿಗೆದಾರರರ ಸಂಘ, ರುಪ್ಸಾದಿಂದ ಪ್ರಧಾನಿ ನರೇಂದ್ರ ಮೋದಿಗೆ ಕಮಿಷನ್ ಬಗ್ಗೆ ಪತ್ರ ಬಂದಿವೆ. ನಾನೂ ತಿನ್ನಲ್ಲ, ತಿನ್ನಲು ಬಿಡುವುದಿಲ್ಲ ಎಂದು ಪ್ರಧಾನಿ ಮೋದಿ ಹೇಳುತ್ತಾರೆ. ಕರ್ನಾಟಕದಲ್ಲಿ ಭ್ರಷ್ಟಾಚಾರ ಮಾಡಲು ಅವಕಾಶ ಮಾಡಿಕೊಟ್ಟಿದ್ದೇಕೆ ಎಂದು ಪ್ರಧಾನಿ ನರೇಂದ್ರ ಮೋದಿಗೆ ಪ್ರಶ್ನೆ ಮಾಡಿದರು.

ನಾಲ್ಕು ವರ್ಷಗಳಲ್ಲಿ ಬಿಜೆಪಿ ಒಂದೇ ಒಂದು ಮನೆ ಮಂಜೂರು ಮಾಡಿಲ್ಲ. ರಮೇಶ್ ಜಾರಕಿಹೊಳಿ ಒಬ್ಬ ಹಿರಿಯ ನಾಯಕ. ನಾಲ್ಕು ವರ್ಷಗಳಲ್ಲಿ ಒಂದೇ ಒಂದು ಮನೆ ಕೊಡಿಸಲಾಗದವರು ಅಧಿಕಾರದಲ್ಲಿರಲು ಲಾಯಕ್ಕಾ ಅಥವಾ ನಾಲಾಯಕ್ಕಾ ಎಂದು ನೀವೇ ಹೇಳಿ? ನಾನು 14 ಲಕ್ಷ ಮನೆ ಕಟ್ಟಿಸಿ ಕೊಟ್ಟಿದ್ದೇನೆ. ಬಿಜೆಪಿಯವರು ಒಂದು ಮನೆ ಕೊಟ್ಟಿಲ್ಲ. ಇವರ ಮನೆ ಹಾಳಾಗಿ ಹೋಗಲಿ. ಲಜ್ಜೆಗೆಟ್ಟವರು ಅನ್ನಭಾಗ್ಯ ಅಕ್ಕಿಯ ಪ್ರಮಾಣ ಕಡಿತ ಮಾಡಿದರು ಎಂದು ಹರಿಹಾಯ್ದರು.

'ಅವಸರದ ಅವಾಂತರ' ಕೃತಿ ಬಿಡುಗಡೆ



ಮೈಸೂರು, ಏ.24– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಲೇಖಕ ಎನ್.ವಿ.ರಮೇಶ್ ರಚಿತ 'ಅವಸರದ ಅವಾಂತರ' ಹಾಸ್ಯ ನಾಟಕಗಳ ಕೃತಿ ಲೋಕಾರ್ಪಣೆಗೊಳಿಸಲಾಯಿತು. ಮೈಸೂರಿನ ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗದ ವತಿಯಿಂದ ಆಯೋಜಿಸಿದ್ದ ಕೃತಿ ಬಿಡುಗಡೆ ಹಾಗೂ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಹಾಗೂ ಬೆಳವಾಡಿ ಅಶ್ವತ್ಥ ನಾರಾಯಣ ಕೃತಿ ಬಿಡುಗಡೆ ಮಾಡಿದರು.

ಇದೇ ವೇಳೆ ಬಸವ ಜಯಂತಿ', ಶಂಕರಚಾರ್ಯರು, ರಾಮಾನುಜಾಚಾರ್ಯರ ಜಯಂತಿ ಹಾಗೂ ಡಾ.ರಾಜಕುಮಾರ್ ಜನ್ಮದಿನದ ಆಚರಿಸಲಾಯಿತು. ಬಳಿಕ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಸೃಜನಾತ್ಮಕ ರಚನಾತ್ಮಕ ಚಟುವಟಿಕೆಗಳಲ್ಲಿ ಹೆಚ್ಚು ಯುವಜನರು, ಕವಿಗಳು ಭಾಗವಹಿಸಬೇಕು ಎಂದರು. ಪದ್ಮಾ ಆನಂದ್, ಎಸ್.ರಾಮಪ್ರಸಾದ್, ಪದ್ಮಿನಿ ಹೆಗಡೆ, ಉಮಾ ರಮೇಶ್, ಉಮೇಶ, ಪರಮೇಶ್ ಉತ್ತನಹಳ್ಳಿ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಗೈಡ್ : ಇದು ಮೂರೂವರೆ ಸಾವಿರ ವರ್ಷಗಳಷ್ಟು ಹಳೆಯ ಕಟ್ಟಡ ಸಾರ್

ಪ್ರವಾಸಿ : ಸುಮ್ನೆ ಸುಳ್ಳು ಹೇಳ್ಬೇಡ. ಈಗಿನ್ನೂ 2017. ಮೂರೂವರೆ ಸಾವಿರ ವರ್ಷ ಆಗಲು ಹೇಗೆ ಸಾಧ್ಯವಯ್ಯಾ!?

ಮೈಸೂರು ಮಿತ್ರ

ಮಂಗಳವಾರ, 25 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಗೆಲುವು ದ್ವೇಷಕ್ಕೆ ಕಾರಣವಾಗುವುದು. ಸೋತವನು ದುಃಖಕ್ಕೊಳಗಾಗುವನು. ಶಾಂತಿಯಿಂದ ಕೂಡಿರುವವನು ಸೋಲು–ಗೆಲುವುಗಳನ್ನು ತ್ಯಜಿಸಿ ಆನಂದದಿಂದ ಜೀವಿಸುವನು. –ಭಗವಾನ್ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೂಡಿದರೆ ಒಲೆ, ಮಾಡಿದರೆ ಮನೆ

ನಿಮ್ಮ ಪತ್ರಗಳು

ಆಮಿಷಗಳಿಗೆ ಬಲಿಯಾಗದಿರಿ

ಮಾನ್ಯರೆ,

2023 ರಾಜ್ಯ ವಿಧಾನಸಭೆ ಚುನಾವಣೆಗೆ ದಿನಗಣನೆ ಪ್ರಾರಂಭವಾಗುತ್ತಿದ್ದಂತೆ ವಿವಿಧ ಪಕ್ಷಗಳು ಆಶ್ವಾಸನೆಯ ಸುರಿಮಳೆಗಳನ್ನೇ ಹರಿಸಿ ಮತಯಾಚನೆ ಮಾಡುತ್ತಿವೆ.

ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಪ್ರಾಮಾಣಿಕವಾಗಿ ಚುನಾವಣೆ ನಡೆಸುವುದು ಸಾಧ್ಯವಿಲ್ಲದಂತಾಗಿದೆ ಎಂದು ರಾಜಕೀಯ ಮುಖಂಡರು ಹೇಳುವುದನ್ನು ಕೇಳಿದರೆ ಪ್ರಜಾತಂತ್ರ ವ್ಯವಸ್ಥೆ ಎತ್ತ ಸಾಗುತ್ತಿದೆ ಎನಿಸುತ್ತದೆ!

ಹಲವು ಕಡೆಗಳಲ್ಲಿ ದಾಖಲೆ ಇಲ್ಲದ ಹಣ ವ್ಯಾಪಕವಾಗಿ ಪತ್ತೆಯಾಗುತ್ತಿದೆ ಎಂಬುದನ್ನು ಮಾಧ್ಯಮ ಮೂಲಕ ನೋಡಿದ್ದೇವೆ. ಹಣ ಇಲ್ಲದೆ ಚುನಾವಣೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂತಾಗಿದೆ. ಪ್ರಜಾಪ್ರಭುತ್ವ ದೇಶದಲ್ಲಿ ಮತದಾನ ಬಹಳ ಪ್ರಮುಖ ಹಾಗೂ ಪವಿತ್ರವಾದದ್ದು. ಪ್ರಜೆಗಳೇ ಪ್ರಭುಗಳು, ಮತದಾರರು ಈ ದೇಶದ ಭದ್ರತೆಯ ಬುನಾದಿ ಎಂಬ ಅರಿವಿನ ಪ್ರಜ್ಞೆ ಇರಬೇಕು. ಆಮಿಷಗಳಿಗೆ ಮಾರು ಹೋಗುವ ಮತದಾರನಿಗೆ, ದೇಶದ ಹಿತಾಸಕ್ತಿಗೆ ಕೆಲಸ ಮಾಡುವ ಸಮೂಹವು ಅಲ್ಲಲ್ಲಿ ಜಾಗೃತಿ ಮೂಡಿಸುವ ಆಂದೋಲನಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಜನತಂತ್ರ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳು ಜನಸೇವೆ ಮಾಡುವ ಪ್ರತಿನಿಧಿಯಾಗಿ ಇರಬೇಕೇ ಹೊರತು, ಜನರ ಮೇಲೆ ಸವಾರಿ ಮಾಡುವ ನಾಯಕನಲ್ಲ ಎಂಬುದನ್ನು ಮತದಾರ ಪ್ರಭುಗಳು ತಿಳಿಯಬೇಕಿದೆ. ರಾಜ್ಯ ದೇಶದ ಅಭಿವೃದ್ಧಿಗಾಗಿ ಮತ ಚಲಾಯಿಸ ಬೇಕಾದುದು ಮತದಾರನ ಅಮೂಲ್ಯ ಹಕ್ಕು. ಸಂವಿಧಾನ ಕೊಟ್ಟಿರುವಂತಹ ಮತದಾನದ ಹಕ್ಕನ್ನು, ಜನತಂತ್ರ ವ್ಯವಸ್ಥೆಯಲ್ಲಿ ಮತದಾರನಿಗೆ ಆಮಿಷಗಳನ್ನು ನೀಡಿ ಮತದಾರ ಹಕ್ಕನ್ನು ಕಸಿದುಕೊಳ್ಳುವುದು ಪ್ರಜಾಪ್ರಭುತ್ವವನ್ನು ಹತ್ಯೆ ಮಾಡಿದ ಹಾಗೆ. ಇಂತಹ ಚುನಾವಣೆ ಸಂದರ್ಭದಲ್ಲಿ ತಮ್ಮ ಮತದಾನ ಮೌಲ್ಯವನ್ನು ತಿಳಿಸಿ ಕೊಡಬೇಕಾದದ್ದು ತಿಳಿದಿರುವವರ ಕರ್ತವ್ಯ! ಆಮಿಷಗಳಿಗೆ ಮಾರುಹೋಗದಿರಿ. ದೇಶದ ಭವಿಷ್ಯಕ್ಕೋಸ್ಕರ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಮಾಡ ಬೇಕಾದದ್ದು ಪ್ರತಿ ಭಾರತೀಯನ ಕರ್ತವ್ಯ ಕೂಡ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಸ್ಥಗಿತಗೊಂಡ ಕಾಮಗಾರಿ ಪ್ರಾರಂಭಿಸಿ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಯುಜಿಡಿ ಮತ್ತು ರಸ್ತೆ ಡಾಂಬರೀಕರಣ ಸ್ಥಗಿತಗೊಂಡಿದೆ. ಕೆಲವು ಕಡೆ ರಸ್ತೆಗೆ ಜಲ್ಲಿ ಮತ್ತು ಕಾಂಕ್ರೀಟ್ ಮಿಕ್ಸ್ ಹರಡಿದ್ದು, ಆ ರಸ್ತೆಗಳಿಗೆ ಡಾಂಬರು ಹಾಕಿರುವುದಿಲ್ಲ. ಮಳೆ ಬಂದಲ್ಲಿ ಕಾಂಕ್ರೀಟ್ ಮಿಕ್ಸ್ ಎಲ್ಲಾ ಕೊಚ್ಚಿ ಹೋಗಿ ರಸ್ತೆಗಳಲ್ಲಿ ಜಲ್ಲಿ ಮಾತ್ರ ಉಳಿದುಕೊಳ್ಳುತ್ತದೆ. ಗುತ್ತಿಗೆ ಪಡೆದ ಕಂಟ್ರಾಕ್ಟರ್ ಆಗಲೀ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಲಯ ಇಂಜಿನಿಯರ್‌ಗಳಾಗಲೀ ಈ ರಸ್ತೆಗಳಿಗೆ ಡಾಂಬರು ಹಾಕಿಸುವ ಸೂಚನೆಗಳು ಕಾಣುತ್ತಿಲ್ಲ. ಎನ್‌ಪಿಎಸ್ ಶಾಲೆ ರಸ್ತೆಯಂತೂ ತೀರಾ ಕಿತ್ತು ಹೋಗಿದೆ. ಇನ್ನು ಕೆಲವು ಕಡೆ ಮನೆಗಳ ಕಡೆ ಯುಜಿಡಿಯಾಗಲೀ, ರಸ್ತೆ ಡಾಂಬರೀಕರಣವಾಗಲೀ ಪ್ರಾರಂಭಿಸಿಯೇ ಇಲ್ಲ. ಮಳೆ ಬರುವುದನ್ನು ಕಾಯುತ್ತಿರುವಂತಿದೆ. ಈ ಬಗ್ಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಲ್ಲಿ ಮನವಿ ಮಾಡಿಕೊಳ್ಳುತ್ತಾ ವಿಜಯನಗರ 4ನೇ ಹಂತದಲ್ಲಿ ಸ್ಥಗಿತಗೊಂಡಿರುವ ಯುಜಿಡಿ ಮತ್ತು ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಮಳೆಗಾಲ ಪ್ರಾರಂಭವಾಗುವ ಮುನ್ನ ಮುಗಿಸಲು ತುರ್ತು ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

–ಬಿ.ಜಿ.ರಂಗೇಗೌಡ, ಮೈಸೂರು

ಮೆಮು ರೈಲಿನಲ್ಲಿ ವಾಶ್ ರೂಮುಗಳ ಅವ್ಯವಸ್ಥೆ

ಮಾನ್ಯರೆ,

ಮೆಮು ರೈಲಿನಲ್ಲಿ ಪ್ರತಿದಿನ ಸಾವಿರಾರು ಪ್ರಯಾಣಿಕರು ಪ್ರಯಾಣಿಸುತ್ತಾರೆ. ಈ ರೈಲಿನಲ್ಲಿ ವಾಶ್ ರೂಮುಗಳ ಸಂಖ್ಯೆ ತುಂಬಾ ಕಡಿಮೆ ಇದೆ. ಮಾಮೂಲಿ ರೈಲಿನಲ್ಲಿ ಇರುವಂತೆ ವಾಶ್ ರೂಮಿನ ಹೊರಗಡೆ ಕೈ ತೊಳೆಯುವ ಬೇಸಿನ್‌ಗಳು ಇರುವುದಿಲ್ಲ. ವಾಶ್ ರೂಮಿನ ಒಳಗಡೆ ಇರುವ ಕೈ ತೊಳೆಯುವ ಬೇಸಿನ್‌ಗಳಿಗೆ ನಲ್ಲಿಗಳೇ ಇಲ್ಲ. ಸ್ವಚ್ಛ ಮಾಡುವ ಸಿಬ್ಬಂದಿ ವಾಶ್ ರೂಮನ್ನು ಸ್ವಚ್ಛ ಮಾಡುತ್ತಿಲ್ಲ. ಇವೆಲ್ಲಾ ಕಾರಣಗಳಿಂದ ವಾಶ್ ರೂಮುಗಳು ಕೆಟ್ಟ ವಾಸನೆಯಿಂದ ಕೂಡಿರುತ್ತವೆ. ಮಹಿಳೆಯರಿಗೆ ವಾಶ್ ರೂಮುಗಳನ್ನು ಉಪಯೋಗಿಸಲು ತುಂಬಾ ಕಷ್ಟವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗಳನ್ನು ನಿವಾರಿಸಬೇಕೆಂದು ಮನವಿ.

–ಜಿ. ಜನಾರ್ಧನ್, ಜೆ.ಪಿ. ನಗರ, ಮೈಸೂರು.

ಶೈಕ್ಷಣಿಕ ಪ್ರಗತಿಗೆ ಇದು ಮಾರಕ

ಮಾನ್ಯರೆ,

ದೇಶದಲ್ಲಿ ಶೈಕ್ಷಣಿಕ ಪ್ರಗತಿ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಕೊರೊನಾ ಹಾವಳಿ ನಂತರ ಸಾಕಷ್ಟು ರೀತಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಶೈಕ್ಷಣಿಕ ಪ್ರಗತಿಯು ಕುಂಠಿತವಾಗಿದೆ. ಇಂತಹ ಸಂದರ್ಭದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಶೇ. 10ರಷ್ಟು ಕೃಪಾಂಕ ನೀಡಲು ಮುಂದಾಗಿರುವುದು ಶೈಕ್ಷಣಿಕ ಪ್ರಗತಿಗೆ ಮಾರಕ ವಾಗಿದೆ. ಇದರಿಂದ ಅನುತ್ತೀರ್ಣಗೊಳ್ಳುವ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ. ಜೊತೆಗೆ ಇದು ಚುನಾವಣೆ ತಂತ್ರ ಎನ್ನಲಾಗುತ್ತಿದೆ. ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳನ್ನು ಸದೃಢ ಮಾಡುವಲ್ಲಿ ಮುಂದಾಗದೆ ಇನ್ನೂ ವಂಚಿತರನ್ನಾಗಿ ಮಾಡಲಾಗುತ್ತಿದೆ ಈ ಕೃಪಾಂಕದಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಕೊರೊನಾ ಕಾಲದಲ್ಲಿ ಪರೀಕ್ಷೆ ಮತ್ತು ಆನ್‌ಲೈನ್ ಕ್ಲಾಸ್‌ಗಳಿಂದಾದ ಅನಾನುಕೂಲವೇ ಸಾಕು. ಮತ್ತೆ ಈ ವ್ಯವಸ್ಥೆ ಬೇಡ. ಇನ್ನಾದರೂ ಒಳ್ಳೆ ಮಾರ್ಗದಲ್ಲಿ ಶಿಕ್ಷಣವಂತರನ್ನಾಗಿಸಲು ಪ್ರಯತ್ನಿಸದೆ ಕೃಪಾಂಕಗಳಿಂದ ಓದಿನ ಗೋಜಿಗೆ ಹೋಗದಿರುವಂತೆ ಮಾಡುವುದು ಎಷ್ಟು ಸರಿ. ಶಿಕ್ಷಣ ವ್ಯವಸ್ಥೆ ಈಗಾಗಲೇ ಹದಗೆಟ್ಟಿದ್ದು, ಈ ನಿಟ್ಟಿನಲ್ಲಿ ಶಿಕ್ಷಣ ತಜ್ಞರು ಹಾಗೂ ಶಿಕ್ಷಣ ಇಲಾಖೆ ಜಾಗೃತಿ ವಹಿಸಿ ಕ್ರಮ ಕೈಗೊಳ್ಳಬೇಕು. ಓದಿನ ಕಡೆ ವಿದ್ಯಾರ್ಥಿಗಳನ್ನು ಸೆಳೆಯಬೇಕೇ ಹೊರತು ನಿರಾಸಕ್ತಿ ತೋರುವ ನಿರ್ಧಾರಗಳನ್ನು ಮಾಡಬಾರದು.

– ಗಾಯತ್ರಿ ಮಾಲಿಪಾಟೀಲ್, ಮಾನಸಗಂಗೋತ್ರಿ, ಮೈಸೂರು


ಅಸಡ್ಡೆ ತೋರುವ ಮೃಗಾಲಯ

ಮಾನ್ಯರೆ,

ಮೈಸೂರಿನ ಮೃಗಾಲಯದ ಪ್ರವೇಶ ದರವನ್ನು ಕಡಿಮೆ ಮಾಡಬೇಕೆಂಬ ಸರಗೂರಿನ ಎನ್.ಪಿ. ಪರಶಿವಮೂರ್ತಿಯವರ ಪತ್ರವನ್ನು ಮೃಗಾಲಯ ಪ್ರಾಧಿಕಾರ ಗಮನಿಸಿ ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯ.

ಮೃಗಾಲಯಕ್ಕೆ ಹತ್ತಾರು ವರುಷ ಪ್ರಾಣಿಗಳನ್ನು ದತ್ತು ತೆಗೆದುಕೊಂಡವರಲ್ಲಿ ನಾನೂ ಒಬ್ಬ. ವರ್ಷಕ್ಕೆ ಹತ್ತು ಸಾವಿರದಷ್ಟು ಹಣವನ್ನು ನೀಡುತ್ತಿದ್ದೆ. ಅಲ್ಲಿನ ಸಿಬ್ಬಂದಿ ಆರಂಭದಲ್ಲಿ ನಮ್ಮ ದತ್ತು ಅವಧಿ ಮುಗಿಯುತ್ತಾ ಬಂದ ಹಾಗೆ ನವೀಕರಿಸಲು ಪತ್ರವನ್ನು ಬರೆಯುತ್ತಿದ್ದವರು ಕ್ರಮೇಣ ಅಸಡ್ಡೆ ತೋರಿ ಪತ್ರ ಬರೆಯುವುದನ್ನೇ ನಿಲ್ಲಿಸಿಬಿಟ್ಟರು. ನಾನೂ ಕೆಲವು ಸಲ ಕರೆ ಮಾಡಿ ತಿಳಿಸಿದರೂ ಸೂಕ್ತ ಸ್ಪಂದನೆ ಬಾರದಿದ್ದಾಗ ನಾನು ದತ್ತು ನವೀಕರಣವನ್ನೇ ನಿಲ್ಲಿಸಿದೆ. ಆದ್ದರಿಂದ ಮೃಗಾಲಯದ ಸಿಬ್ಬಂದಿಗೇನೂ ನಷ್ಟವಾಗಲಿಲ್ಲ. ಆದದ್ದು ಪ್ರಾಣಿಗಳ ಪೋಷಣೆಗೆ ಹತ್ತು ಸಾವಿರ ದಷ್ಟು ನಷ್ಟವಾಯಿತು. ಸರಕಾರಿ ಅವ್ಯವಸ್ಥೆಗೆ ಇದೊಂದು ಉದಾಹರಣೆಯಷ್ಟೇ.!

–ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ನಮ್ಮ ದೇಶವನ್ನು ನಾವೇ ವಿಶ್ವಾಸದಿಂದ ಕಾಣದಿದ್ದರೆ ಹೇಗೆ...

ಕರ್ನಾಟಕದಲ್ಲಿ ಮತ್ತೆ ಚುನಾವಣೆ ಬಂದಿದೆ. ಚುನಾವಣೆಯನ್ನು ಪ್ರಜಾಪ್ರಭುತ್ವದ ಹಬ್ಬ ಎಂದು ಕರೆಯಲಾಗುತ್ತದೆ. ಅದನ್ನು ಎಲ್ಲರೂ ಉತ್ಸಾಹದಿಂದ ಆಚರಿಸಬೇಕು. ನಮ್ಮ ಸರ್ಕಾರ ಹೇಗಿರಬೇಕೆಂದರೆ ಅದು ಜನರಿಂದ, ಜನರಿಗಾಗಿ, ಜನರೇ ಆರಿಸುವ ಸರ್ಕಾರವಾಗಿರಬೇಕು ಎಂದು ನಮ್ಮ ಸಂವಿಧಾನದಲ್ಲಿ ಹೇಳಲಾಗಿದೆ. ಬ್ರಿಟಿಷರು ಭಾರತದಲ್ಲಿದ್ದಾಗ ಅವರದ್ದೇ ಕಾರುಬಾರು. ಹಿಡಿಯಷ್ಟು ಜನರು ಇಡೀ ದೇಶದ ಆಡಳಿತ ನಡೆಸುತ್ತಿದ್ದರು. ಅವರ ಬಳಿ ಸಂಬಳಕ್ಕಾಗಿ ನಮ್ಮವರು ಕೆಲಸ ಮಾಡಿಕೊಂಡು, ನಮ್ಮವರ ವಿರುದ್ಧವೇ ಬ್ರಿಟಿಷರು ಹೇಳಿದಂ ನಮ್ಮನ್ನೇ ದಮನ ಮಾಡುತ್ತಿದ್ದರು. ಆಗ ಬಹುತೇಕ ಜನರಿಗೆ ಬ್ರಿಟಿಷರು ಈ ದೇಶದಿಂದ ತೊಲಗಿ ನಮ್ಮ ದೇಶಕ್ಕೆ ಸ್ವಾತಂತ್ರ ಸಿಕ್ಕಿ, ನಮ್ಮ ಆಡಳಿತವನ್ನು ನಾವೇ ಮಾಡಿಕೊಳ್ಳುವಂತಾದರೆ ಎಷ್ಟು ಚೆನ್ನಾಗಿರುತ್ತದೆ ಎಂದು ಯೋಚಿಸಿ ರೋಮಾಂಚಿತರಾಗುತ್ತಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂತು, ನಮ್ಮದೇ ಸಂವಿಧಾನವೂ ಸಿದ್ಧವಾಯ್ತು. ಜನರಿಂದ ಜನರಿಗಾಗಿ ಜನರೇ ಸರ್ಕಾರ ರಚಿಸಿಕೊಳ್ಳುವ ಅವಕಾಶವೂ ಒದಗಿಬಂದಿತು. ಆದರೆ ಇಂದಿನ ರಾಜಕೀಯ ಪರಿಸ್ಥಿತಿ ನೋಡಿದಾಗ, ಈಗಲೂ ಬದುಕಿರುವ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಇದಕ್ಕಾಗಿ ನಾವು ಅಷ್ಟು ಹೋರಾಡಬೇಕಾಯಿತೇ ಎಂದು ಪ್ರಶ್ನಿಸಿಕೊಳ್ಳುವಂತಾಗಿದೆ. ನಮ್ಮ ಪ್ರತಿನಿಧಿಯಾಗುವವನು ಜನರ ಪ್ರತಿನಿಧಿಯಾಗಿರಬೇಕು. ಅವನು ಜನರ ಸೇವಕನಂತೆ ಇರಬೇಕು, ಜನರ ಆಗುಹೋಗುಗಳಿಗೆ ಬದ್ಧನಾಗಿರಬೇಕು. ಕೇಳದೆಯೇ ಜನರ ಕೆಲಸ ಮಾಡಿಕೊಡಬೇಕು. ಇದು ಪ್ರಜಾಪ್ರಭುತ್ವದ ಆಶಯವಾಗಿದೆ. ಈಗಲೂ ಚುನಾವಣೆ ಸಮಯದಲ್ಲಿ ಚುನಾವಣೆಗೆ ಸ್ಪರ್ಧಿಸುವವರು ವಿಧೇಯತೆಯಿಂದ ಕೈಮುಗಿದು ಮತ ಕೇಳುತ್ತಾರೆ, ನಿಮ್ಮ ಸೇವೆ ಮಾಡಲು ಒಂದು ಅವಕಾಶ ಮಾಡಿಕೊಡಿ ಎಂದೂ ಕೇಳುತ್ತಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಜನಪ್ರತಿನಿಧಿ ಜನರ ಆಳಾಗುವ ಬದಲು ಅರಸರಂತೆ ಮೆರೆಯುತ್ತಿರುವುದು ಕಂಡುಬರುತ್ತದೆ. ಇಂದಿಗೂ ಉತ್ತರ ಕರ್ನಾಟಕದಲ್ಲಿ ಪ್ರವಾಸ ಮಾಡಿದಾಗ ಅಲ್ಲಿ ಅಂತಹ ಹೇಳಿಕೊಳ್ಳಬಹುದಾದ ಯಾವ ಅಭಿವೃದ್ಧಿಯನ್ನು ಕಾಣಲಾಗದು. ದಕ್ಷಿಣ ಕರ್ನಾಟಕದಲ್ಲಿ ಕೆಲವು ಪಟ್ಟಣಗಳು ಅಭಿವೃದ್ಧಿ ಹೊಂದಿವೆಯಾದರೂ ಗ್ರಾಮೀಣ ಪ್ರದೇಶಗಳು ತ್ರಿಶಂಕು ಸ್ಥಿತಿಯಲ್ಲೇ ಇವೆ. ಇವನ್ನೆಲ್ಲಾ ಕಂಡಾಗ ಜನರು ಏಕೆ ಉತ್ತಮ ಪ್ರತಿನಿಧಿಯನ್ನು ಆರಿಸಿ ಕಳುಹಿಸುವುದಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಅನೇಕ ಜನ ಪ್ರತಿನಿಧಿಗಳು ತಮ್ಮ ಕ್ಷೇತ್ರ, ಊರಿನಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ರಾಜಧಾನಿ ಬೆಂಗಳೂರಿನಲ್ಲೇ ಹೆಚ್ಚಾಗಿ ಉಳಿದುಕೊಂಡಿರುತ್ತಾರೆ. ಇದು ಬದಲಾಗಬೇಕಾದರೆ ಜನರಲ್ಲಿ ಜಾಗೃತಿ ಮೂಡಬೇಕು.

ಪ್ರಜಾಪ್ರಭುತ್ವ ಹಬ್ಬ ಇಡೀ ನಾಡಿನಲ್ಲಿ ಆಚರಣೆಯಾಗಬೇಕು. ಆದರೆ ನಗರ ಪ್ರದೇಶಗಳಲ್ಲಿ ಮತದಾನದ ಪ್ರಮಾಣ ಸದಾ ಕಡಿಮೆ ಇರುತ್ತದೆ. ಇದಕ್ಕೆ ಕಾರಣವೂ ಇದೆ. ಇತ್ತೀಚಿನ ಜನಪ್ರತಿನಿಧಿಗಳನ್ನು ಕಂಡ ವಿದ್ಯಾವಂತರು ಇಂತಹವರಿಗೆ ಏಕೆ ಮತ ಹಾಕಬೇಕು? ಚುನಾವಣೆಗೆ ನಿಂತಿರುವವರೆಲ್ಲರೂ ಅಂತಹವರೇ ಆಗಿರುವಾಗ ನಾನು ಯಾರಿಗೆ ಮತಹಾಕಬೇಕು? ಎಂದು ಬೇಸರಗೊಂಡು ಮತಗಟ್ಟೆಗೇ ಹೋಗುವುದಿಲ್ಲ. ಇಂತಹ ಮತದಾರರಿಗೆಂದೇ ಚುನಾವಣಾ ಆಯೋಗ 'ನೋಟಾ' (ಇರುವವರಲ್ಲಿ ಯಾರನ್ನೂ ಒಲ್ಲೆ) ಎಂಬುದನ್ನು ಮತಯಂತ್ರಗಳಲ್ಲಿ ಪರಿಚಯಿಸಿದೆ. ಮತದಾರರು ಮತಗಟ್ಟೆಗೆ ಹೋಗಲು ಮನಸ್ಸು ಮಾಡುತ್ತಿಲ್ಲ, ನಾವು ಮತದಾನ ಮಾಡದಿದ್ದರೆ, ಮುಂದೆ ಸರ್ಕಾರಗಳನ್ನು ಟೀಕಿಸುವ ಹಕ್ಕನ್ನು ನಾವು ಹೊಂದಿರುವುದಿಲ್ಲ. ನೋಟಾದ ಮೂಲಕವೂ ನಮ್ಮ ಹಕ್ಕು ಚಲಾಯಿಸಬಹುದು. ಇದ್ದಿದರಲ್ಲಿ ಉತ್ತಮ ಎಂದು ಕಂಡುಬರುವವರಿಗಾದರೂ ಮತ ಚಲಾಯಿಸಬೇಕು. ಮತ ಚಲಾವಣೆ ನಮ್ಮ ಹಕ್ಕು ಎಂಬುದನ್ನು ಮರೆಯಬಾರದು. ಹಾಗೆಯೇ ಮತ ಚಲಾವಣೆ ನಮ್ಮ ಕರ್ತವ್ಯವೂ ಹೌದು. ಹಕ್ಕಿನ ಬಗ್ಗೆಯೂ ವಾದಿಸುವವರು ಕರ್ತವ್ಯದ ಬಗ್ಗೆ ಮರೆಯಬಾರದು.



> ಇಂದು ಪರಿಸ್ಥಿತಿ ಬದಲಾದಂತೆ ಕಂಡುಬರುತ್ತಿದೆ. ಜನಕ್ಕೆ ಎಲ್ಲವೂ ತಿಳಿಯುತ್ತದೆ ಎಂಬುದು ಜನಪ್ರತಿನಿಧಿಗಳಿಗೆ ಗೊತ್ತಾಗುತ್ತಿದೆ. ಆದರೆ ನೇರವಾಗಿ ಪ್ರಶ್ನಿಸುವವರಿಲ್ಲದೇ, ವ್ಯವಸ್ಥೆಯಲ್ಲಿ ಶಿಥಿಲತೆ ಕಂಡುಬರುತ್ತಿದೆ. ಆದರೆ ದೇಶ ಇದ್ದರೆ, ದೇಶಕ್ಕೆ ಉತ್ತಮ ಆಡಳಿತವಿದ್ದರೆ ಮಾತ್ರ ನಾವು ಸುಗಮ ಜೀವನ ನಡೆಸಬಹುದು ಎಂಬುದು ಇಂದು ಜನರಿಗೆ ಅರ್ಥವಾಗುತ್ತಿದೆ. ಹಾಗಾಗಿ ರಾಜ್ಯದಲ್ಲೂ ಸ್ಥಿರ ಸರ್ಕಾರ ಬರುವಂತಾಗಬೇಕು, ಅದು ಜನಹಿತಕ್ಕಾಗಿ ಕೆಲಸ ಮಾಡುವಂತಾಗಬೇಕು. ಯಾವುದೇ ಆಸೆ, ಆಮಿಷಗಳಿಗೆ ನಮ್ಮ ಮತ ಮಾರಾಟವಾಗದಂತೆ ಎಚ್ಚರ ವಹಿಸುವುದು ಇಂದಿನ ಅಗತ್ಯವಾಗಿದೆ.

ಇಂದು ಪರಿಸ್ಥಿತಿ ಬದಲಾದಂತೆ ಕಂಡುಬರುತ್ತಿದೆ. ಜನಕ್ಕೆ ಎಲ್ಲವೂ ತಿಳಿಯುತ್ತದೆ ಎಂಬುದು ಜನಪ್ರತಿನಿಧಿಗಳಿಗೆ ಗೊತ್ತಾಗುತ್ತಿದೆ. ಆದರೆ ನೇರವಾಗಿ ಪ್ರಶ್ನಿಸುವವರಿಲ್ಲದೇ, ವ್ಯವಸ್ಥೆಯಲ್ಲಿ ಶಿಥಿಲತೆ ಕಂಡುಬರುತ್ತಿದೆ. ಆದರೆ ದೇಶ ಇದ್ದರೆ, ದೇಶಕ್ಕೆ ಉತ್ತಮ ಆಡಳಿತವಿದ್ದರೆ ಮಾತ್ರ ನಾವು ಸುರಕ್ಷಿತ ಜೀವನ ನಡೆಸಬಹುದು ಎಂಬುದು ಇಂದು ಜನರಿಗೆ ಅರ್ಥವಾಗುತ್ತಿದೆ. ಹಾಗಾಗಿ ರಾಜ್ಯದಲ್ಲೂ ಸ್ಥಿರ ಸರ್ಕಾರ ಬರುವಂತಾಗಬೇಕು, ಅದು ಜನಹಿತಕ್ಕಾಗಿ ಕೆಲಸ ಮಾಡುವಂತಾಗಬೇಕು. ಯಾವುದೇ ಆಸೆ, ಆಮಿಷಗಳಿಗೆ ನಮ್ಮ ಮತ ಮಾರಾಟವಾಗದಂತೆ ಎಚ್ಚರ ವಹಿಸಬೇಕು ಎಂಬ ಜಾಗೃತಿ ಇರಬೇಕು.

ದೇಶ ಸುಭದ್ರವಾಗಿದ್ದರೆ ರಾಜ್ಯಗಳು, ರಾಜ್ಯದ ಜನರೂ ಸುರಕ್ಷಿತವಾಗಿರಬಹುದು. ಈ ಹಂತದಲ್ಲಿ ದೇಶದ ಬಗ್ಗೆ ಹೆಮ್ಮೆ, ಗೌರವ ಮೂಡುವಂತಹ ನಡವಳಿಕೆ ಅವಶ್ಯಕ. ಇಂದು ಪ್ರಪಂಚದಲ್ಲಿ ಯಾವ ದೇಶಗಳು ಮುಂದುವರೆದಿವೆಯೋ, ಆ ದೇಶಗಳಲ್ಲಿ ಅಲ್ಲಿನ ಜನರು ರಾಷ್ಟ್ರಪ್ರೇಮದಿಂದ ಕೂಡಿದವರಾಗಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅಂತಹ ರಾಷ್ಟ್ರಪ್ರೇಮ ನಮ್ಮಲ್ಲೂ ಜಾಗೃತವಾದರೆ, ನಮ್ಮ ದೇಶವೂ ಖಂಡಿತಾ ಪ್ರಪಂಚದ ಮುಂಚೂಣಿ ರಾಷ್ಟ್ರಗಳಲ್ಲಿ ಒಂದಾಗಿರಬಹುದು.

ರಷ್ಯಾದ ಅಧ್ಯಕ್ಷ ಮಿಖಾಯಿಲ್ ಗೊರ್ಬಚೇವ್ ತಮ್ಮ ಆತ್ಮ ಕಥೆಯಲ್ಲಿ ಒಂದು ಘಟನೆಯನ್ನು ವಿವರಿಸಿದ್ದಾರೆ. ಅದು ಅವರು ವಿದ್ಯಾಭ್ಯಾಸ ಮಾಡುತ್ತಿದ್ದಾಗಿನ ಪ್ರಸಂಗ. ಆಗ ಯುರೋಪಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಅಲ್ಲಿ ಇಬ್ಬರು ಜಪಾನಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಆಗ ತಾನೇ ದ್ವಿತೀಯ ವಿಶ್ವ ಮಹಾಸಮರ ಅಂತ್ಯಗೊಂಡಿತ್ತು. ಜಪಾನ್ ದೇಶ ಹೆಚ್ಚೂ ಕಡಿಮೆ ನಿರ್ನಾಮವಾಗಿತ್ತು. ಆ ದೇಶ ಆರ್ಥಿಕವಾಗಿ ದುರ್ಬಲವಾಗಿ ತೆವಳುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂತಹ ಸಮಯದಲ್ಲಿ ಗೊರ್ಬಚೇವ್ ಅವರೊಡನೆ ವಿದ್ಯಾಭ್ಯಾಸ ಮಾಡುತ್ತಿದ್ದ ಇಬ್ಬರು ಜಪಾನಿ ಯುವಕರ ಬಗ್ಗೆ ಅವರು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅವರು ಕಾಲೇಜಿನಲ್ಲಿ ಓದುವಾಗ ಟಿಪ್ಪಣಿ ಮಾಡಿಕೊಳ್ಳಬೇಕಾಗಿತ್ತು. ಆ ಇಬ್ಬರು ಜಪಾನಿಯರ ಬಳಿ ಕೇವಲ ಪೆನ್ಸಿಲ್‌ಗಳಿತ್ತು. ಒಬ್ಬ ಬರೆದುಕೊಳ್ಳುವಾಗ ಮತ್ತೊಬ್ಬ ಪೆನ್ಸಿಲನ್ನು ಚೂಪು ಮಾಡಿ ಬರವಣಿಗೆಗೆ ಸಿದ್ಧ ಮಾಡಿಕೊಳ್ಳುತ್ತಿದ್ದ. ಅವರು ಬಳಸುತ್ತಿದ್ದುದು ಜಪಾನಿನ ಪೆನ್ಸಿಲುಗಳನ್ನು. ಆಗ ಆರ್ಥಿಕ ಕಾರಣದಿಂದಾಗಿ ಜಪಾನಿನಲ್ಲಿ ಉತ್ಪನ್ನವಾಗುತ್ತಿದ್ದ ವಸ್ತುಗಳು ಅಂತಹ ಕಳಪೆ ಗುಣಮಟ್ಟದಿಂದ ಕೂಡಿರುತ್ತಿತ್ತು. ಅದು ಪೆನ್ಸಿಲ್‌ಗೂ ಅನ್ವಯವಾಗಿತ್ತು. ಅದರಲ್ಲಿ ಬರೆಯುವುದು ಕಷ್ಟಕರವಾಗಿತ್ತು. ಬರೆಯುತ್ತಿದ್ದಂತೆಯೇ ಸೀಸ ತುಂಡಾಗುತ್ತಿತ್ತು. ಆಗ ಅವರೊಡನಿದ್ದ ಇತರೆ ವಿದ್ಯಾರ್ಥಿಗಳು ನೀವೇಕೆ ಒಳ್ಳೆಯ, ಇಂಗ್ಲೆಂಡಿನಲ್ಲಿ ತಯಾರಾಗುವ ಪೆನ್ಸಿಲ್ ಬಳಸಬಾರದು? ಎಂದು ಕೇಳಿದರು. ಅದನ್ನು ಕೇಳಿದ ಆ ಜಪಾನಿನ ವಿದ್ಯಾರ್ಥಿಗಳು ಕಣ್ಣೀರು ಹಾಕುತ್ತಾ ಕೊಟ್ಟ ಉತ್ತರ, ಅವರ ದೇಶಾಭಿಮಾನವನ್ನು ಬಿಂಬಿಸುವಂತಿತ್ತು. 'ನಾವೂ ನಮ್ಮ ದೇಶದ ಪೆನ್ಸಿಲನ್ನು ಖರೀದಿಸ, ಬರೆಯದಿದ್ದರೆ, ಅದನ್ನು ಇನ್ನಾರು ಖರೀದಿಸುತ್ತಾರೆ? ಈಗ ನಮ್ಮ ದೇಶದ ಪೆನ್ಸಿಲ್ ಉತ್ತಮ ಗುಣಮಟ್ಟ ಹೊಂದಿಲ್ಲದಿರಬಹುದು, ಆದರೆ ಮುಂದೊಂದು ದಿನ ಇಡೀ ವಿಶ್ವವೇ ನಮ್ಮ ಜಪಾನಿನ ಪೆನ್ಸಿಲ್ ಉಪಯೋಗಿಸುವ ಸಮಯ ಒಂದೇ ಬರುತ್ತೆ ಎಂದು ಹೇಳಿದರು. ಇದು ದೇಶಾಭಿಮಾನ. ನಮ್ಮ ದೇಶದ ಬಗ್ಗೆ ನಾವೇ ಪ್ರೇಮ ವಿಶ್ವಾಸ ಹೊಂದಿಲ್ಲದಿದ್ದರೆ, ಇನ್ನಾರು ವಿಶ್ವಾಸದಿಂದ ಕಾಣುತ್ತಾರೆ? ನಮ್ಮಲ್ಲಿ ಈ ಗುಣ ಬೆಳೆಯಬೇಕು.

ಪ್ರತಿ ವರ್ಷ ದೀಪಾವಳಿ ಸಮಯದಲ್ಲಿ ಒಂದು ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತದೆ. ನಾವು ಈ ವರ್ಷ ಚೀನಾದ ಪಟಾಕಿ ಖರೀದಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಬೇಕು. ನಾವು ನಮ್ಮ ದೇಶದ ಪಟಾಕಿಯನ್ನು ಮಾತ್ರ ಖರೀದಿಸಬೇಕು. ಹೀಗೆ ಒಂದೆರಡು ವರ್ಷ ಮಾಡಿದರೆ, ನಮ್ಮ ದೇಶದ ಆರ್ಥಿಕ ಸ್ಥಿತಿ ವಿಶ್ವಮಟ್ಟದಲ್ಲಿ ಉನ್ನತ ಸ್ಥಾನದಲ್ಲಿ ಇರುತ್ತದೆ ಎಂದು ಆ ಸಂದೇಶದ ಸಾರ. ಆದರೆ ದೇಶದ ಬಗ್ಗೆ ನಮಗಿನ್ನು ವಿಶ್ವಾಸ ವೃದ್ಧಿಯಾಗದಿರುವುದು ಹಾಗೂ ಚೀನಾದ ಪಟಾಕಿಯ ದರ ಕಡಿಮೆ ಇರುವ ಕಾರಣ ನಾವು ಅವುಗಳನ್ನು ಖರೀದಿಸುತ್ತೇವೆ. ಅಂತಹ ಸಮಯದಲ್ಲಿ ಜಪಾನಿನ ಯುವಕರ ಮಾತುಗಳು ನಮಗೆ ನೆನಪಾಗಬೇಕು. ನಮ್ಮ ದೇಶದ ಬಗ್ಗೆ ನಾವು ಕಾಳಜಿ ವಹಿಸಬೇಕು. ಇರಬಹುದು, ಬೇರೆ ದೇಶಗಳ ಉತ್ಪನ್ನಕ್ಕಿಂತ ನಮ್ಮ ಕೆಲವು ವಸ್ತುಗಳ ಬೆಲೆ ಹೆಚ್ಚಾಗಿರಬಹುದು. ಆದರೆ ದೇಶದ ಹಿತದೃಷ್ಟಿಯಿಂದ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ನಮ್ಮಲ್ಲಿ ಇಂತಹ ಸಮಾಜಮುಖಿ ಭಾವನೆ ಬೆಳೆಯಬೇಕು. ಎಂದಿಗೂ ನಾನೊಬ್ಬ ಮಾಡದಿದ್ದಲ್ಲ ದೇಶವೇನೂ ಮುಳುಗಿಹೋಗುವುದಿಲ್ಲ ಎಂಬ ನಿರ್ಲಕ್ಷ್ಯ, ಬೇಜವಾಬ್ದಾರಿ ಭಾವನೆ ತೆಗೆದುಹಾಕಬೇಕಾಗುತ್ತದೆ.

ಈಗ ಚುನಾವಣೆಯ ಸಮಯದಲ್ಲಿ ದೇಶದ ಹಿತಕ್ಕಾಗಿ ನಾನು ಮತದಾನ ಮಾಡೇ ಮಾಡುತ್ತೇನೆ ಎಂಬ ಭಾವನೆ ನಮ್ಮಲ್ಲಿ ಮೂಡಬೇಕು. ನಾನೊಬ್ಬ ಓಟು ಹಾಕದಿದ್ದರೆ ಏನಾಗುತ್ತದೆ? ದೇಶವೇನು ಮುಳುಗಿಹೋಗುವುದಿಲ್ಲ ಎಂಬ ತಾತ್ಸಾರ ಮನೋಭಾವ ಬಿಡಬೇಕು. ಇಂದಿಗೂ ದೇಶದಲ್ಲಿ ಲಕ್ಷಾಂತರ ಜನ ತಮ್ಮ ಊರಿನಲ್ಲಿ ಮತ ಚಲಾಯಿಸುವುದಕ್ಕೆ ಬರುತ್ತಾರೆ. ಆ ದಿನ ಕೆಲವರಂತೂ ಸಾವಿರಾರು ರೂಪಾಯಿ ಖರ್ಚು ಮಾಡಿಕೊಂಡು ಊರಿಗೆ ಬಂದು ಮತ ಚಲಾಯಿಸುತ್ತಾರೆ. ಅದು ಅವರ ಕಾಳಜಿ ಸೂಚಿಸುತ್ತದೆ. ನಾವು ನಮ್ಮ ಮನೆಯಿಂದ ಒಂದೆರಡು ಕಿಲೋಮೀಟರು ದೂರವಿರುವ ಮತಗಟ್ಟೆಗೆ ತೆರಳಿ ಏಕೆ ಮಾತದಾನ ಮಾಡಬಾರದು? ನಾವು ನಮ್ಮ ಹಕ್ಕು ಹಾಗೂ ಕರ್ತವ್ಯವನ್ನು ಏಕೆ ನೆನಪಿಸಿಕೊಂಡು, ನಿರ್ವಹಿಸಬಾರದು? ಹಾಗೆ ಮಾಡದಿದ್ದಲ್ಲಿ ಮತ್ತೆ ಮುಂದಿನ ಐದು ವರ್ಷ ಪಶ್ಚಾತ್ತಾಪಪಡಬೇಕಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡುವುದು ಬೇಡ.

ಬಾಕಿ ಇರುವ ಪ್ರಕರಣದ ಬಗ್ಗೆ ಮಾಧ್ಯಮಗಳಿಗೆ ಸಂದರ್ಶನ

ನವದೆಹಲಿ: ಹೈಕೋರ್ಟ್ ನ್ಯಾಯಾಧೀಶರೊಬ್ಬರು ಬಾಕಿ ಇರುವ ಪ್ರಕರಣಗಳ ಬಗ್ಗೆ ಮಾಧ್ಯಮಗಳಿಗೆ ಸಂದರ್ಶನ ನೀಡಿರುವುದಕ್ಕೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶ ಡಿ.ವೈ ಚಂದ್ರಚೂಡ್ ಗರಂ ಆಗಿದ್ದಾರೆ.

ಕೋಲ್ಕತ್ತಾ ಹೈಕೋರ್ಟ್ ನ್ಯಾಯಾಧೀಶ ಅಭಿಜಿತ್ ಗಂಗೋಪಾಧ್ಯಾಯ ಅವರು ಬಾಕಿ ಇರುವ ಪ್ರಕರಣವೊಂದರ ಬಗ್ಗೆ ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿದ್ದರು.

ಬಾಕಿ ಇರುವ ಪ್ರಕರಣದ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರು ಸಂದರ್ಶನ ನೀಡಬೇಕಿಲ್ಲ. ಅದು ನಿಜವಾದರೆ, ಈ ಪ್ರಕರಣವನ್ನು ಅವರು ವಿಚಾರಣೆ ನಡೆಸಬೇಕಿಲ್ಲ. ಅವರು ಈ ರೀತಿ ಮಾಡಿದ್ದರೆ, ವಿಚಾರಣೆಯಲ್ಲಿ ಭಾಗವಹಿಸಬೇಕಿಲ್ಲ.

ಬಾಕಿ ಉಳಿದಿರುವ ವಿಷಯಗಳ ಕುರಿತು ಸುದ್ದಿ ವಾಹಿನಿಗಳಿಗೆ ಸಂದರ್ಶನ ನೀಡುವುದು ನ್ಯಾಯಾಧೀಶರ ಕೆಲಸವಲ್ಲ. ಇದು ನಿಜವಾಗಿದ್ದರೆ, ಅವರು ಇನ್ನು ಮುಂದೆ ಈ ಪ್ರಕರಣದ ವಿಚಾರಣೆ ನಡೆಸಲು ಸಾಧ್ಯವಿಲ್ಲ. ನಾವು ತನಿಖೆಯನ್ನು ಮಾಡುವುದಿಲ್ಲ. ಆದರೆ ಟಿವಿ ಚರ್ಚೆಯಲ್ಲಿ ಅರ್ಜಿದಾರರ ಬಗ್ಗೆ ನ್ಯಾಯಾಧೀಶರು ಅಭಿಪ್ರಾಯವನ್ನು ನೀಡಿದರೆ, ಅವರು ಆ ಪ್ರಕರಣದ ವಿಚಾರಣೆ ನಡೆಸಲು ಸಾಧ್ಯವಿಲ್ಲ. ನಂತರ ಹೈಕೋರ್ಟ್ ಮುಖ್ಯಸ್ಥರು ಹೊಸ ಪೀಠವನ್ನು ರಚಿಸಬೇಕು ಎಂದು ಸಿಜೆಐ ಹೇಳಿದ್ದಾರೆ.



ಉದ್ಯಮಿ ಜಾಕೀರ್ ಹುಸೇನ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಮುಖಂಡರಾದ ನಿರಂಜನ್, ಶರಾವತಿ ವೆಂಕಟೇಶ್, ಉದ್ಯಮಿ ಪ್ರದೀಪ್ ಸಿಂಗ್, ಮಹದೇವ್, ಪಾರ್ಶ್ವನಾಥ್, ಮಹೇಶ್ ಇತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಕನ್ನಡ ನಟ–ನಿರ್ದೇಶಕ 'ಟಪೋರಿ ಸತ್ಯ' ನಿಧನ

ಬೆಂಗಳೂರು: ಸ್ಯಾಂಡಲ್‌ವುಡ್‌ನಲ್ಲಿ ಪೋಷಕ ಪಾತ್ರಗಳಲ್ಲಿ ನಟಿಸಿ, ಸಿನಿಮಾ ನಿರ್ದೇಶಕನಾಗಿಯೂ ಗುರುತಿಸಿಕೊಂಡಿದ್ದ ಟಪೋರಿ ಸತ್ಯ(46) ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಫಲಿಸದೆ ನಿಧನರಾಗಿದ್ದಾರೆ. ಕಳೆದ ಕೆಲ ದಿನಗಳಿಂದ ಶ್ವಾಸಕೋಶದ ಸಮಸ್ಯೆಯಿಂದ ಬಳಲುತ್ತಿದ್ದ ಟಪೋರಿ ಸತ್ಯ, ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಭಾನುವಾರ ರಾತ್ರಿ ನಿಧನರಾಗಿದ್ದಾರೆ. ಲೂಸ್ ಮಾದ ಯೋಗಿ ಅಭಿನಯದ 'ನಂದ ಲವ್ಸ್ ನಂದಿತಾ' ಚಿತ್ರದಲ್ಲಿ 'ಕ್ವಾಟ್ರು' ಎಂಬ ಪಾತ್ರದಲ್ಲಿ ನಟಿಸಿ ಗಮನ ಸೆಳೆದಿದ್ದರು.

ಇನ್ನೇನು ಹೊಸ ಚಿತ್ರ ಮಾಡುವ ತಯಾರಿಯಲ್ಲಿದ್ದ ಅವರು ಇದಕ್ಕಾಗಿ ಅಡಿಷನ್ ನಡೆಸುತ್ತಿದ್ದರು. ಪತ್ನಿ ಮತ್ತು ಮಕ್ಕಳನ್ನು ಸತ್ಯ ಅಗಲಿದ್ದಾರೆ. ಅವರ ಹಠಾತ್ ನಿಧನಕ್ಕೆ ಅನೇಕರು ಕಂಬನಿ ಮಿಡಿದಿದ್ದಾರೆ.

'ಶಂಕರರ ಹೆಜ್ಜೆ ಗುರುತುಗಳು' ಆಧ್ಯಾತ್ಮಿಕ ಪುಸ್ತಕ ಬಿಡುಗಡೆ ಇಂದು



ಮೈಸೂರು,ಏ.24(ಪಿಎಂ)– ಮಹಾರಾಜ ಎಜುಕೇಷನ್ ಟ್ರಸ್ಟ್ (ಎಂಇಟಿ) ಅಂಗಸಂಸ್ಥೆಯಾಗಿ ಇತ್ತೀಚೆಗಷ್ಟೆ ಕಾರ್ಯಾರಂಭ ಮಾಡಿದ 'ಮಹಾರಾಜ ಪಬ್ಲಿಕೇಷನ್ಸ್' ಪುಸ್ತಕ ಪ್ರಕಾಶನ ಸಂಸ್ಥೆ ವತಿಯಿಂದ ಮೊದಲ ಪುಸ್ತಕವಾಗಿ 'ಶಂಕರರ ಹೆಜ್ಜೆ ಗುರುತುಗಳು' ಹೊರತಂದಿದ್ದು, ಏ.25ರಂದು ಇದರ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪುಸ್ತಕದ ಕರ್ತೃ ಹಾಗೂ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಮುರಳಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೊಂದು ಆಧ್ಯಾತ್ಮಿಕ ಪುಸ್ತಕವಾಗಿದ್ದು, ಶ್ರೀ ಶಂಕರ ಮತ್ತು ಶ್ರೀರಾಮಾನುಜ ಜಯಂತಿ ಪ್ರಯುಕ್ತ ಅಂದು ಸಂಜೆ 6.30ಕ್ಕೆ ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆ ಸಭಾಂಗಣದಲ್ಲಿ ಪುಸ್ತಕ ಬಿಡುಗಡೆಗೊಳ್ಳಲಿದೆ. ಶ್ರೀ ರಾಮಕೃಷ್ಣ ಮಠ ಹಾಗೂ ಮಿಷನ್‌ನ ಪ್ರಕಟಣಾ ವಿಭಾಗದ ಮುಖ್ಯಸ್ಥ ಶ್ರೀ ಸ್ವಾಮಿ ಸರ್ವಜಯ ನಂದಜಿ ಮಹಾರಾಜ್ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಲಿದ್ದಾರೆ ಎಂದರು.

ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಪುಸ್ತಕ ಕುರಿತು ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಾಲ್ ಮಾತನಾಡಲಿದ್ದಾರೆ. ಮಹಾರಾಜ ಪಬ್ಲಿಕೇಷನ್ಸ್ ನಾಡಿನ ಉದಯೋನ್ಮುಖ ಬರಹಗಾರರಿಗೆ ತಾಂತ್ರಿಕ ಮತ್ತು ಇತರ ಎಲ್ಲಾ ಕ್ಷೇತ್ರಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳ ಪ್ರಕಾಶನಕ್ಕೆ ಸೂಕ್ತ ವೇದಿಕೆ ಕಲ್ಪಿಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದರು. ಎಂಐಟಿ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಜಿ.ನರೇಶ್‌ಕುಮಾರ್, ಆಡಳಿತಾಧಿಕಾರಿ ಅನಿರುದ್ಧ್ ಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

4 ದಿನ ಮದ್ಯ ಮಾರಾಟ ನಿಷೇಧ

ಮೇ 8ರ ಸಂಜೆ 6 ಗಂಟೆಯಿಂದ ಮೇ 10ರ ಮಧ್ಯರಾತ್ರಿವರೆಗೆ ಹಾಗೂ ಮೇ 12ರ ಮಧ್ಯರಾತ್ರಿಯಿಂದ ಮೇ 13ರ ಮಧ್ಯರಾತ್ರಿವರೆಗೆ ಎಲ್ಲಾ ಬಗೆಯ ಮದ್ಯದಂಗಡಿ ಬಂದ್



ಮೈಸೂರು, ಏ.24(ಆರ್‌ಕೆ)– ಮುಕ್ತ, ಶಾಂತಿಯುತ, ನ್ಯಾಯಸಮ್ಮತ ಮತದಾನಕ್ಕಾಗಿ ಮೈಸೂರು ಜಿಲ್ಲಾಡಳಿತವು ಮೇ 8ರ ಸಂಜೆ 6 ಗಂಟೆಯಿಂದ ಮೇ 10ರ ಮಧ್ಯ ರಾತ್ರಿವರೆಗೆ (ಚುನಾವಣೆಗಾಗಿ) ಹಾಗೂ ಮೇ 12ರ ಮಧ್ಯ ರಾತ್ರಿಯಿಂದ ಮೇ 13ರ ಮಧ್ಯ ರಾತ್ರಿವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧ ಘೋಷಿಸಿದೆ. ಆ ಅವಧಿಯಲ್ಲಿ ಎಲ್ಲಾ ಮದ್ಯದಂಗಡಿ ವೈನ್‌ಸ್ಟೋರ್, ಬಾರ್, ರೆಸ್ಟೋರೆಂಟ್ಸ್, ಕ್ಲಬ್‌ಗಳನ್ನು ಬಂದ್ ಮಾಡುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಆದೇಶ ಹೊರಡಿಸಿದ್ದಾರೆ. ನಿಷೇಧಿತ ಸಮಯದಲ್ಲಿ ಪರವಾನಗಿ ಪಡೆದಿರುವ ಎಲ್ಲಾ ಮದ್ಯದಂಗಡಿ, ವೈನ್‌ಸ್ಟೋರ್ಸ್ ಬಾಗಿಲಿಗೆ ಬೀಗ ಹಾಕಿ ಕೀಲಿಯನ್ನು ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ವಶಕ್ಕೆ ಒಪ್ಪಿಸುವಂತೆಯೂ ಸೂಚಿಸಿದ್ದಾರೆ.

ಶಾಂತಿಯುತ ಮತದಾನಕ್ಕೆ ಅನುಕೂಲವಾಗುವಂತೆ ಹಾಗೂ ಕಾನೂನು–ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸಿಆರ್‌ಪಿಸಿ ಸೆಕ್ಷನ್ 144 ರೀತ್ಯಾ ಮೇ 8ರ ಸಂಜೆ 6 ಗಂಟೆಯಿಂದ ಮೇ 10 ರಂದು ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 5 ಮಂದಿಗಿಂತ ಹೆಚ್ಚು ಮಂದಿ ಒಂದೆಡೆ ಗುಂಪು ಸೇರುವಂತಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಆ ಅವಧಿಯಲ್ಲಿ ಸಭೆ, ಸಮಾರಂಭ, ರ‍್ಯಾಲಿ, ಶಸ್ತ್ರಾಸ್ತ್ರ ಹಿಡಿದು ಓಡಾಡುವುದು, ಸ್ಫೋಟಕ ವಸ್ತು ಸಾಗಣೆ ಮುಂತಾದ ಕೃತ್ಯಗಳು ಕಂಡು ಬಂದಲ್ಲಿ ಕಾನೂನು ರೀತಿಯ ಕ್ರಮಕೈಗೊಳ್ಳಲಾಗುವುದು. ಅದೇ ರೀತಿ ಚುನಾವಣೆ ದಿನ ಮತಗಟ್ಟೆ ಬಳಿ 100 ಮೀಟರ್ ವ್ಯಾಪ್ತಿಯಲ್ಲಿ ಮತ ಪ್ರಚಾರ ಮಾಡುವುದನ್ನು ನಿಷೇಧಿಸಲಾಗಿದೆ. ಜೆರಾಕ್ಸ್ ಅಂಗಡಿ, ಲೇಖನ ಸಾಮಗ್ರಿ, ಬುಕ್ ಸ್ಟಾಲ್, ಸೈಬರ್ ಕೆಫೆಗಳನ್ನು ಮತಗಟ್ಟೆ ಸುತ್ತ ಬಂದ್ ಮಾಡುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಕ್ವಾರಿಗಳಲ್ಲಿ ಸ್ಫೋಟಕ ಸಂಗ್ರಹಣೆ ಮತ್ತು ಸಾಗಣೆ, ಕಲ್ಲು ಸಾಗಣೆ, ಪ್ರತಿಕೃತಿ ದಹನ, ಘೋಷಣೆ ಕೂಗುವುದು ಸೇರಿದಂತೆ ಮತಗಟ್ಟೆಗಳ ಸುತ್ತ ಸಾರ್ವಜನಿಕರಿಗೆ ತೊಂದರೆಯಾಗುವಂತಹ ಯಾವುದೇ ಚಟುವಟಿಕೆಗಳನ್ನು ನಡೆಸಬಾರದು. ಯಾವುದೇ ವ್ಯಕ್ತಿಯ ಘನತೆಗೆ ಕುಂದು ತರುವ ಹಾಡುಗಳು, ಘೋಷಣೆ, ಫೋಟೋ, ಚಿಹ್ನೆ, ಸೂಚನಾ ಫಲಕ ಅಳವಡಿಸಲಾಗಿದ್ದು, ಅಂತ್ಯಕ್ರಿಯೆ, ಮದುವೆ, ಧಾರ್ಮಿಕ ಕಾರ್ಯಗಳಿಗೆ ಯಾವುದೇ ಅಡ್ಡಿ ಇಲ್ಲ. ಆದರೆ, ಕಾನೂನು ಸುವ್ಯವಸ್ಥೆಗೆ ಭಂಗ ತಾರದಂತೆ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಎಚ್ಚರವಹಿಸಬೇಕೆಂದೂ ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಯುದ್ಧಪೀಡಿತ ಸೂಡಾನ್‌ನಲ್ಲಿ ಸಿಲುಕಿರುವ

ಭಾರತೀಯರ ಸ್ಥಳಾಂತರಕ್ಕೆ ಆಪರೇಷನ್ ಕಾವೇರಿ ಶುರು

ನವದೆಹಲಿ: ಯುದ್ಧ ಪೀಡಿತ ಸೂಡಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ದೇಶಕ್ಕೆ ಕರೆ ತರಲು ಆಪರೇಷನ್ ಕಾವೇರಿ ಶುರುವಾಗಿದೆ.



ಈ ಕುರಿತು ಟ್ವೀಟ್ ಮಾಡಿರುವ ವಿದೇಶಾಂಗ ಸಚಿವ ಜೈಶಂಕರ್, ಸುಮಾರು 500 ಭಾರತೀಯರು ಪೋರ್ಟ್ ಸುಡಾನ್ ತಲುಪಿದ್ದಾರೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರು ಆಗಮಿಸುತ್ತಿದ್ದಾರೆ. ಭಾರತೀಯರನ್ನು ತಾಯ್ನಾಡಿಗೆ ಕರೆತರಲು ನಮ್ಮ ಹಡಗುಗಳು ಮತ್ತು ಏರ್‌ಕ್ರಾಫ್ಟ್‌ಗಳು ಸಿದ್ಧವಾಗಿವೆ. ಸುಡಾನ್‌ನಲ್ಲಿರುವ ನಮ್ಮ ಎಲ್ಲ ಸಹೋದರರಿಗೆ ಸಹಾಯ ಮಾಡಲು ನಾವು ಬದ್ಧವಾಗಿದ್ದೇವೆ ಎಂದು ಹೇಳಿದ್ದಾರೆ. ಸುಡಾನ್‌ನಲ್ಲಿ ಯುದ್ಧ ತೀವ್ರಗೊಳ್ಳುತ್ತಿದ್ದಂತೆ ಭಾರತೀಯರು ಸೇರಿದಂತೆ 28 ರಾಷ್ಟ್ರಗಳ ಸುಮಾರು 388 ಜನರನ್ನು ಫ್ರಾನ್ಸ್ ಸೋಮವಾರ ಸ್ಥಳಾಂತರ ಮಾಡಿದೆ. ಸುಡಾನ್‌ನ ಮಿಲಿಟರಿ ಮತ್ತು ಪ್ರಬಲ ಅರೆಸೈನಿಕ ಗುಂಪಿನ ನಡುವೆ ವಾರಾಂತ್ಯದಲ್ಲಿ ಸಂಘರ್ಷ ಭುಗಿಲೆದ್ದ ನಂತರ ರಾಜಧಾನಿ ಖಾರ್ಟೌಮ್‌ನಿಂದ ಸ್ಥಳಾಂತರಿಸುವಿಕೆಯು ಅಪಾಯಕಾರಿ ಎಂದು ಸಾಬೀತಾಗಿದೆ ಎಂದು ನ್ಯೂಯಾರ್ಕ್ ಟೈಮ್ಸ್ ಮತ್ತಿತರ ಪತ್ರಿಕೆಗಳು ವರದಿ ಮಾಡಿವೆ.

ಸುಡಾನ್‌ನಲ್ಲಿ ಕರ್ನಾಟಕದ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದ ಜನರೇ ಹೆಚ್ಚಿಗೆ ಸಿಲುಕಿದ್ದಾರೆ. ಶಿವಮೊಗ್ಗ, ಮೈಸೂರು, ದಾವಣಗೆರೆ, ಚಾಮರಾಜನಗರ ಸೇರಿ ಹಲವು ಕಡೆಯಿಂದ ಆಯುರ್ವೇದ ಔಷಧ, ಗಿಡಮೂಲಿಕೆ ಹಾಗೂ ನಾಟಿ ಔಷಧ ಮಾರಾಟ ಮಾಡಲು ಸುಡಾನ್‌ಗೆ ತೆರಳಿದ್ದರು. ಇದೇ ಕಾರಣಕ್ಕೆ ಪ್ರತಿ ವರ್ಷ ಆಫ್ರಿಕಾದ ಹಲವು ದೇಶಗಳಿಗೆ ಹಕ್ಕಿಪಿಕ್ಕಿ ಸಮುದಾಯದ ಜನರು ಭೇಟಿ ನೀಡುತ್ತಾರೆ. ಆದರೆ, ಸುಡಾನ್‌ನಲ್ಲಿ ದಿಢೀರ್ ಆರಂಭವಾದ ಸಂಘರ್ಷದಿಂದ ಸಂಕಷ್ಟಕ್ಕೆ ಸಿಲುಕಿದ್ದು, ಅವರನ್ನು ಕರೆತರುವ ನಿಟ್ಟಿನಲ್ಲಿ ಕೇಂದ್ರ–ರಾಜ್ಯ ಸರ್ಕಾರ ಕಾರ್ಯೋನ್ಮುಖವಾಗಿವೆ.

ರಾಹುಲ್ ವಿರುದ್ಧದ ಮೋದಿ ಉಪನಾಮ ಪ್ರಕರಣ

ಕೆಳ ಹಂತದ ನ್ಯಾಯಾಲಯದ ಆದೇಶಕ್ಕೆ ಪಾಟ್ನಾ ಹೈ ತಡೆ



ಪಾಟ್ನಾ: ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಮೋದಿ ಉಪನಾಮ ಪ್ರಕರಣದಲ್ಲಿ ಕೆಳಹಂತದ ನ್ಯಾಯಾಲಯದ ಆದೇಶವನ್ನು ಪಾಟ್ನಾ ಹೈಕೋರ್ಟ್ ತಡೆ ನೀಡಿದೆ. ಪಾಟ್ನಾದ ಕೆಳಹಂತದ ನ್ಯಾಯಾಲಯ ರಾಹುಲ್ ಗಾಂಧಿ ಅವರಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಏ.12ರಂದು ಕೋರ್ಟ್ ಎದುರು ಹಾಜರಾಗುವಂತೆ ಸೂಚಿಸಿತ್ತು. ಕೆಳಹಂತದ ಈ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಪಾಟ್ನಾ ಹೈಕೋರ್ಟ್ ಮೊರೆ ಹೋಗಿದ್ದರು.

ಬಿಜೆಪಿಯ ರಾಜ್ಯಸಭಾ ಸದಸ್ಯ ಸುಶೀಲ್‌ಕುಮಾರ್ ಮೋದಿ ರಾಹುಲ್ ಗಾಂಧಿ ವಿರುದ್ಧ ಪಾಟ್ನಾದ ಎಂಪಿ/ ಎಂಎಲ್‌ಎ ಕೋರ್ಟ್‌ನಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಮಾ.18ರಂದು ಎಂಪಿ/ ಎಂಎಲ್‌ಎ ಕೋರ್ಟ್‌ನ ವಿಶೇಷ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಆದಿದೇವ್ ರಾಹುಲ್ ಗಾಂಧಿ ಅವರಿಗೆ ಏ.12ರಂದು ಹಾಜರಾಗುವಂತೆ ಸೂಚಿಸಿದ್ದರು.

ಆದಾಗ್ಯೂ, ವಿಚಾರಣೆಯ ಸಂದರ್ಭದಲ್ಲಿ, ಪ್ರತಿವಾದಿ ವಕೀಲರು ಇಡೀ ತಂಡವು ಸೂರತ್ ಪ್ರಕರಣದಲ್ಲಿ ನಿರತವಾಗಿದೆ, ಇದರಲ್ಲಿ ಗಾಂಧಿಗೆ 2 ವರ್ಷಗಳ ಜೈಲು ಶಿಕ್ಷೆ ಮತ್ತು ಲೋಕಸಭೆಯಿಂದ ಅನರ್ಹಗೊಳಿಸಲಾಗಿದೆ ಎಂದು ತಿಳಿಸಿ ಮತ್ತೊಂದು ದಿನಾಂಕವನ್ನು ಕೋರಿದರು. ಇದಕ್ಕೆ, ನ್ಯಾಯಾಧೀಶರು ಏಪ್ರಿಲ್ 25 ರಂದು ಪ್ರಕರಣದ ಮುಂದಿನ ವಿಚಾರಣೆಯ ದಿನಾಂಕದಂದು ನ್ಯಾಯಾಲಯದ ಮುಂದೆ ರಾಹುಲ್ ಗಾಂಧಿ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಲು ವಕೀಲರಿಗೆ ಸೂಚನೆ ನೀಡಿದ್ದಾರೆ.

ಲಿಂಗಾಯತರ ಎದುರಾಕಿಕೊಂಡು ಸಿದ್ದರಾಮಯ್ಯ ಗೆಲ್ಲೋದು ಕಷ್ಟ



ಬೆಂಗಳೂರು, ಏ. 24 (ಕೆಎಂಶಿ)– ಲಿಂಗಾಯತರನ್ನು ಎದುರಾಕಿಕೊಂಡಿರುವ ಸಿದ್ದರಾಮಯ್ಯ ತಮ್ಮ ವರುಣ ಕ್ಷೇತ್ರದಲ್ಲೇ ಗೆಲುವು ಸಾಧಿಸುವುದು ಕನಸಿನ ಮಾತು ಎಂದು ಬಿಜೆಪಿಯ ಹಿರಿಯ ಮುಖಂಡ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹರಿಹಾಯ್ದಿದ್ದಾರೆ.

ಅವರೇ ಗೆಲ್ಲುವುದು ಕಷ್ಟಕರವಾಗಿರುವಾಗ ಇನ್ನು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ಹೇಗೆ ತರುತ್ತಾರೆ ಎಂದು ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ವೀರಶೈವ ಸಮಾಜವನ್ನು ವಿಭಜಿಸಲು ಹೋಗಿ, ಅದರ ಫಲಿತಾಂಶ ಅರಿವಿದ್ದರೂ, ಮತ್ತೆ ಅದೇ ಜೇನು ಗೂಡಿಗೆ ಕಲ್ಲು ಹಾಕಿದ್ದಾರೆ ಎಂದರು.

ಸಿದ್ದರಾಮಯ್ಯನವರು ಲಿಂಗಾಯತ ಸಮಾಜದ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಆದ್ದರಿಂದ ಈ ಬಾರಿಯ ಚುನಾವಣೆಯಲ್ಲಿ ಗೆಲ್ಲೋದು ಕಷ್ಟ, ತಾವು ಪ್ರತಿಪಕ್ಷದ ನಾಯಕ ಎನ್ನುವ ಬಗ್ಗೆ ಅರಿವಿಲ್ಲದೇ ಮಾತನಾಡುತ್ತಿದ್ದಾರೆ ಎಂದರು.

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಸಿದ್ದರಾಮಯ್ಯ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ. ಕಾಂಗ್ರೆಸ್ ಮಾಡಿರುವ ತಂತ್ರಗಾರಿಕೆಗೆ ನಾವು ಪ್ರತಿತಂತ್ರಗಾರಿಕೆ ಮಾಡಿದ್ದೇವೆ. ಚುನಾವಣಾ ಕಣದಲ್ಲಿ ಎಲ್ಲವೂ ಸಹಜ ಎಂದರು.

ಚುನಾವಣೆ ದೃಷ್ಟಿಯಿಂದ ನಾವು ಬೇರೆ ಬೇರೆ ರೀತಿಯ ಸಮಾಜದ ಸಭೆ ಮಾಡುತ್ತಿದ್ದೇವೆ. ಅಮಿತ್ ಶಾ, ಪ್ರಧಾನಿ ಮೋದಿ ರಾಜ್ಯ ಪ್ರವಾಸಕ್ಕೆ ಬರುತ್ತಾರೆ. ನಮಗೆ 125 ರಿಂದ 130 ಸ್ಥಾನ ಬರುತ್ತದೆ, ಮತ್ತೆ ನಾವೇ ರಾಜ್ಯದಲ್ಲಿ ಸರ್ಕಾರ ರಚನೆ ಮಾಡುತ್ತೇವೆ.

ಏ.29ರಂದು 'ಸಕುಬಾಯಿ' ಏಕವ್ಯಕ್ತಿ ನಾಟಕ ಪ್ರದರ್ಶನ



ಮೈಸೂರು,ಏ.24(ಪಿಎಂ)– ನುಡಿರಂಗದ ವತಿಯಿಂದ ಏ.29ರಂದು 'ಸಕುಬಾಯಿ' ಏಕವ್ಯಕ್ತಿ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ನುಡಿರಂಗದ ಅಧ್ಯಕ್ಷ ಸ.ರ.ಸುದರ್ಶನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಅಂದು ಸಂಜೆ 7ಕ್ಕೆ ನಾಟಕ ಪ್ರದರ್ಶನ ನಡೆಯಲಿದ್ದು, ಇದಕ್ಕೂ ಮುನ್ನ 6.15ಕ್ಕೆ ಸಭಾ ಕಾರ್ಯಕ್ರಮದಲ್ಲಿ ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರೂ ಆದ ಹಿರಿಯ ರಂಗಕರ್ಮಿ ನಾದಿರಾ ಬಬ್ಬರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ನಾಟಕವನ್ನು ಕನ್ನಡಕ್ಕೆ ಅನುವಾದಿಸಿರುವ ನಾಟಕಕಾರ ಡಿ.ಎಸ್. ಚೌಗಲೆ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕನ್ನಡದಲ್ಲಿ ಪ್ರದರ್ಶನಗೊಳ್ಳುವ ಈ ನಾಟಕದಲ್ಲಿ ಮೈಸೂರಿನ ನುಡಿ ಸುದರ್ಶನ ಅವರು ಏಕವ್ಯಕ್ತಿ ಪಾತ್ರಾಭಿನಯವಿದೆ ಎಂದು ತಿಳಿಸಿದರು.


ದಶಕಕ್ಕೂ ಹೆಚ್ಚು ಕಾಲದಿಂದ ಇಂಜಿನಿಯರ್ ವೃತ್ತಿಯಲ್ಲಿ ನಿರತರಾಗಿರುವ ನುಡಿ ಸುದರ್ಶನ ಅವರು ಇದೀಗ ಈ ನಾಟಕದ ಮೂಲಕ ಪ್ರವೃತ್ತಿಗೆ ಹಿಂದಿರುಗುತ್ತಿದ್ದಾರೆ. ಈ ನಾಟಕ 1 ಗಂಟೆ 20 ನಿಮಿಷ ಪ್ರದರ್ಶನದ ಅವಧಿ ಒಳಗೊಂಡಿದ್ದು, ನಾಟಕಕ್ಕೆ 100 ರೂ. ಟಿಕೆಟ್ ನಿಗದಿಮಾಡಲಾಗಿದೆ ಎಂದರು. ನಾಟಕದ ನಿರ್ದೇಶಕ ಹುಲುಗಪ್ಪ ಕಟ್ಟಿಮನಿ, ನಟಿ ನುಡಿ ಸುದರ್ಶನ, ನುಡಿರಂಗ ಕಾರ್ಯದರ್ಶಿ ರಾಮಚಂದ್ರ ಗಿರಿ, ಲೇಖಕಿ ಶ್ರೀವಿದ್ಯಾ ಗೋಷ್ಠಿಯಲ್ಲಿದ್ದರು.

'ಚಾಂದಿನಿ ಬಾರ್' ಚಿತ್ರತಂಡಕ್ಕೆ ಅಭಿನಂದನೆ, ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ



ಮೈಸೂರು,ಏ.24(ಪಿಎಂ)– ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ 'ಚಾಂದಿನಿ ಬಾರ್' ಚಿತ್ರ ತಂಡವನ್ನು ಅಭಿನಂದಿಲಾಯಿತು. ಅಲ್ಲದೇ, ವರನಟ ಡಾ.ರಾಜಕುಮಾರ್ ಅವರ 94ನೇ ಹುಟ್ಟುಹಬ್ಬದ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಹಿರಿಯ ಸಾಹಿತಿ ಬನ್ನೂರು ಕೆ.ರಾಜು, ಈ ಚಿತ್ರದ ಶೀರ್ಷಿಕೆಯಲ್ಲಿ 'ಬಾರ್' ಎಂಬುದಿದ್ದರೂ ಮದ್ಯವನ್ನು ಉತ್ತೇಜಿಸುವ ಯಾವುದೇ ಅಂಶ ಚಿತ್ರದಲ್ಲಿಲ್ಲ. ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ವಿಶಿಷ್ಟ ಚಿತ್ರವಿದು. ಬದುಕಿನಲ್ಲಿ ಏನಾದರೂ ಸಾಧಿಸಬೇಕೆಂದು ಯುವಕನೊಬ್ಬ ಸಿನಿಮಾ ಕ್ಷೇತ್ರದಲ್ಲಿ ವಿಫಲನಾದರೂ ನಂತರ 'ಚಾಂದಿನಿ ಬಾರ್' ಎಂಬಲ್ಲಿ ಹೊಟ್ಟೆಪಾಡಿಗಾಗಿ ದುಡಿಯುತ್ತಾ ಒಳ್ಳೆ ಗೆಳೆಯರನ್ನು ಕೂಡಿಸಿಕೊಂಡು ಒಳ್ಳೆಯ ಬದುಕನ್ನು ಕಟ್ಟಿಕೊಳ್ಳುವ ಸಂಗತಿಯು ಸಮಾಜಕ್ಕೊಂದು ಸಂದೇಶ ನೀಡಲಿದೆ ಎಂದು ಹೇಳಿದರು.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ನಗರದ ಗನ್‌ಹೌಸ್ ಬಳಿಯಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬಸವ ಜಯಂತಿ ಆಚರಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಜಿಲ್ಲಾ ಕಾಂಗ್ರೆಸ್ ಐಎನ್‌ಬಿಸಿಡಬ್ಲ್ಯೂಎಸ್ ಉಪಾಧ್ಯಕ್ಷ ಜಟ್ಟಿಹುಂಡಿ ಸುನಿಲ್, ಹುಯಿಲಾಳು ಮಂಜುನಾಥ ಪ್ರಸಾದ್ ಉಪಸ್ಥಿತರಿದ್ದರು.



ಬಸವ ಜಯಂತಿ ಪ್ರಯುಕ್ತ ಸಮಾಜ ಸೇವಕ ಎಸ್.ಶ್ರೀಕಾಂತ್ ಮೈಸೂರಿನ ಗನ್‌ಹೌಸ್ ವೃತ್ತದಲ್ಲಿರುವ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಬಿಜೆಪಿ, ಕಾಂಗ್ರೆಸ್‌ಗೆ ಬಂಡಾಯದ ಬಿಸಿ

● ಪರಸ್ಪರ ಲಾಭ ಪಡೆಯಲು ಹವಣಿಕೆ ● ಬಂಡಾಯದ ಲಾಭದ ನಿರೀಕ್ಷೆಯಲ್ಲಿ ಜೆಡಿಎಸ್

ಬೆಂಗಳೂರು,ಏ.24(ಕೆಎಂಶಿ)–ಅಧಿಕಾರದ ಚುಕ್ಕಾಣಿ ಹಿಡಿಯಲು ಹವಣಿಸುತ್ತಿರುವ ಆಡಳಿತಾರೂಢ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಬಂಡಾಯ ಅಭ್ಯರ್ಥಿಗಳು ಬಿಸಿ ತುಪ್ಪವಾಗಿ ಪರಿಣಮಿಸಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಕಡೇ ದಿನವಾದ ಇಂದು ಸುಮಾರು 40 ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಬಂಡುಕೋರರೇ ಪಕ್ಷದ ಗೆಲುವಿಗೆ ಅಡ್ಡಿಯಾಗಲಿದ್ದಾರೆ.

ಮೇ 10ರಂದು ನಡೆಯಲಿರುವ ರಾಜ್ಯ ವಿಧಾನಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯುವ ಕಾರ್ಯ ಪೂರ್ಣಗೊಂಡಿದ್ದು, ನಾಳೆಯಿಂದ ಚುನಾವಣಾ ಅಖಾಡ ಬಿಸಿಯಾಗಲಿದೆ. ಬಂಡಾಯ ಅಭ್ಯರ್ಥಿಗಳನ್ನು ಕಣದಿಂದ ಹಿಂದೆ ಸರಿಸಲು ಕಳೆದ ಮೂರು ದಿನಗಳಿಂದ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ನಿರಂತರ ಪ್ರಯತ್ನ ನಡೆಸಿದರೂ, ಅದರ ಪೂರ್ಣ ಯಶಸ್ಸು ಸಾಧಿಸಲು ಸಾಧ್ಯವಾಗಿಲ್ಲ. ಚುನಾವಣಾ ಪೂರ್ವವೇ ಕಾಂಗ್ರೆಸ್‌ನ ಬಂಡಾಯದ ಬಿಸಿ ಲಾಭ ಪಡೆದುಕೊಳ್ಳಲು ಬಿಜೆಪಿ ನಡೆಸಿದ ತಂತ್ರ ಸ್ವಲ್ಪ ಮಟ್ಟಿಗೆ ಯಶಸ್ಸು ಕಂಡಿದೆ. ಚುನಾವಣಾ ಪೂರ್ವ ಸಮೀಕ್ಷಾ ವರದಿ ಆಧಾರದ ಮೇಲೆ ಎಲ್ಲಿ ಕಾಂಗ್ರೆಸ್ ಅಲ್ಪ ಮತಗಳ ಅಂತರದಿಂದ ಗೆಲುವು ಸಾಧಿಸುತ್ತದೆ ಎಂದು ಹೇಳಲಾಗಿತ್ತೋ ಇಂತಹ ಕ್ಷೇತ್ರಗಳಲ್ಲಿ ಆ ಪಕ್ಷದ ಆಕಾಂಕ್ಷಿಗಳನ್ನು ಪತ್ತೆ ಹಚ್ಚಿ ಬಂಡಾಯ ನಿಲ್ಲಲು ಪ್ರೇರೇಪಿಸಿತ್ತು. ಅದು ಕಾಂಗ್ರೆಸ್‌ನ ಓಟಕ್ಕೆ ಕಡಿವಾಣ ಹಾಕಿದಂತಿದೆ. ಇದೇ ತಂತ್ರವನ್ನು ಕಾಂಗ್ರೆಸ್, ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ ವಿರುದ್ಧ ಮಾಡಿದೆ. ಆದರೆ ಒಟ್ಟಾರೆ ಯಶಸ್ಸು ಆಡಳಿತಾರೂಢ ಪಕ್ಷಕ್ಕೆ ದೊರೆತಿದೆ. ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಟಿಕೆಟ್ ವಂಚಿತ 67 ಮಂದಿ ಜೆಡಿಎಸ್ ಪಕ್ಷದ ಜೊತೆ ಕೈ ಜೋಡಿಸಿ, ಟಿಕೆಟ್ ಪಡೆದು, ಕಣಕ್ಕಿಳಿದಿದ್ದಾರೆ. ಇದು ಕೂಡ ಆ ಪಕ್ಷಗಳಿಗೆ ಒಂದು ರೀತಿ ಬಂಡಾಯದ ಬಿಸಿ ತಟ್ಟಿದೆ. ಅದರಲ್ಲಿ 7ರಿಂದ 9 ಮಂದಿ ಗೆಲುವಿನ ದಡ ಸೇರುತ್ತಾರೆ ಎಂಬ ವರದಿಗಳೂ ಇವೆ.

ಒಂದೆಡೆ ಜೆಡಿಎಸ್ ಜೊತೆ ಕೈ ಜೋಡಿಸಿದರೆ, ಮತ್ತೊಂದೆಡೆ ಪ್ರಬಲರೇ ತಮ್ಮ ಅಧಿಕೃತ ಅಭ್ಯರ್ಥಿಗಳ ಮುಂದೆ ಕಣಕ್ಕಿಳಿದಿರುವುದು ಎರಡೂ ರಾಷ್ಟ್ರೀಯ ಪಕ್ಷಗಳಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಬಂಡಾಯದ ಬಿಸಿ ಯಾವ ಪಕ್ಷಕ್ಕೆ ಲಾಭ ತಂದು ಕೊಡುತ್ತದೆ ಎಂದು ಕಾದು ನೋಡಬೇಕಿದೆ. ಮಲೆನಾಡು, ಕರಾವಳಿ ಹಾಗೂ ಮುಂಬೈ ಕರ್ನಾಟಕದಲ್ಲಿ ಬಂಡಾಯದ ಬಿಸಿ ಇದ್ದರೆ, ಮುಂಬೈ, ಮಧ್ಯ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಬಂಡುಕೋರರು ದೊಡ್ಡ ಬಿಸಿಯನ್ನೆ ಮುಟ್ಟಿಸಲು ಹೊರಟಿದ್ದಾರೆ. ಜೆಡಿಎಸ್‌ಗೂ ಎರಡು ಮೂರು ಕ್ಷೇತ್ರಗಳಲ್ಲಿ ಇಂತಹ ಬಿಸಿ ತಟ್ಟಿದೆ. ಆದರೆ ಆ ಪಕ್ಷ ರಾಷ್ಟ್ರೀಯ ಪಕ್ಷಗಳಲ್ಲಿ ಎದ್ದಿರುವ ಬಂಡಾಯವನ್ನು ಈ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳಲು ಮುಂದಾಗಿದೆ.

ಸಾಧ್ಯವಾದಷ್ಟು ಮಟ್ಟಿಗೆ ಒಂದು ಕ್ಷೇತ್ರದಲ್ಲಿ ಒಬ್ಬರೇ ಸ್ಪರ್ಧಿಸುವಂತೆ ನೋಡಿಕೊಳ್ಳುವುದು ರಾಷ್ಟ್ರೀಯ ಪಕ್ಷಗಳ ಉದ್ದೇಶವಾಗಿತ್ತಾದರೂ, ಅದು ದೊಡ್ಡ ಮಟ್ಟದಲ್ಲಿ ಯಶಸ್ಸು ಕಂಡಿಲ್ಲ. ಏಪ್ರಿಲ್ 13ರಂದು ನಾಮಪತ್ರ ಸಲ್ಲಿಸುವ ಕಾರ್ಯ ಆರಂಭಗೊಂಡಿದ್ದು, ಏಪ್ರಿಲ್ 20ರಂದು ಕೊನೆಗೊಂಡಿತ್ತು. ನಾಮಪತ್ರ ಪರಿಶೀಲನೆ ಕಾರ್ಯ ಏಪ್ರಿಲ್ ಇಪ್ಪತ್ತೊಂದರಂದು ಪೂರ್ಣಗೊಂಡಿತ್ತಲ್ಲದೆ, ನಾಮಪತ್ರ ಹಿಂಪಡೆಯುವ ಪ್ರಕ್ರಿಯೆ ಇಂದು ಪೂರ್ಣಗೊಂಡಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಪಾಳೆಯಗಳಲ್ಲಿ ಅಸಮಾಧಾನಿತರ ಜೊತೆ ಚರ್ಚಿಸುವ ಕಾರ್ಯ ನಿರಂತರವಾಗಿ ನಡೆದಿತ್ತು. ಆದರೆ ಈ ಕಸರತ್ತು ದೊಡ್ಡ ಮಟ್ಟದಲ್ಲಿ ಫಲ ಕೊಡದೆ ಇರುವುದರಿಂದ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್‌ಗೆ ಮತ್ತಷ್ಟು ತಲೆ ಬಿಸಿ ಆರಂಭವಾಗಿದೆ.

ಬಿಬಿಎಂಪಿ ಅಧಿಕಾರಿ ಗಂಗಾಧರಯ್ಯ ನಿವಾಸದಲ್ಲಿ ಕಂತೆ ಕಂತೆ ಹಣ

ದಂಗಾದ ಲೋಕಾಯುಕ್ತ ಅಧಿಕಾರಿಗಳು



ಬೆಂಗಳೂರು: ಬೆಳ್ಳಂಬೆಳಗ್ಗೆ ಲೋಕಾಯುಕ್ತ ಅಧಿಕಾರಿಗಳು ಬಿಬಿಎಂಪಿ ಅಧಿಕಾರಿ ಗಂಗಾಧರಯ್ಯ ಅವರ ನಿವಾಸ, ಕಚೇರಿ ಮೇಲೆ ದಾಳಿ ನಡೆಸಿದ್ದು, ದಾಳಿ ವೇಳೆ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಕಂತೆ ಕಂತೆ ನೋಟುಗಳನ್ನು ನೋಡಿ ಲೋಕಾಯುಕ್ತ ಅಧಿಕಾರಿಗಳು ದಂಗಾಗಿದ್ದಾರೆ. ಗಂಗಾಧರಯ್ಯರಿಗೆ ಸೇರಿದ ಯಲಹಂಕದಲ್ಲಿನ ಕಚೇರಿ, ಮಹಾಲಕ್ಷ್ಮಿ ಲೇಔಟ್‌ನಲ್ಲಿನ ಸಂಬಂಧಿಗಳ ನಿವಾಸ ಹಾಗೂ ಕುರುಬರಹಳ್ಳಿ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದು, ಈ ವೇಳೆ 1.5 ಕೋಟಿ ಹಣ, ವಿದೇಶಿ ಕರೆನ್ಸಿ, 2 ಕೋಟಿ ರೂ.ಗಳಿಗೂ ಹೆಚ್ಚಿನ ಚಿನ್ನಾಭರಣ, ಬೆಳ್ಳಿಯ ವಸ್ತುಗಳು ಪತ್ತೆಯಾಗಿವೆ ಎಂದು ತಿಳಿದುಬಂದಿದೆ.


ಎಸ್‌ಪಿ. ಅಶೋಕ್ ನೇತೃತ್ವದಲ್ಲಿ ಈ ದಾಳಿ ನಡೆಸಲಾಗಿದ್ದು, ಅಂದಾಜು ಮೊತ್ತ 1.5 ಕೋಟಿ ರೂಪಾಯಿ ನಗದು, 2 ಕೋಟಿ ರೂ.ಗಳಿಗೂ ಹೆಚ್ಚಿನ ಚಿನ್ನಾಭರಣ, ಬೆಳ್ಳಿಯ ವಸ್ತುಗಳು ಪತ್ತೆಯಾಗಿವೆ ಎಂದು ವರದಿಗಳು ತಿಳಿಸಿವೆ. ಅಲ್ಲದೇ, ವಿದೇಶಿ ಕರೆನ್ಸಿ ಕೂಡ ಮನೆಯಲ್ಲಿ ಸಿಕ್ಕಿವೆ. ಅಧಿಕಾರಿಗಳು ಇನ್ನೂ ಅವರ ನಿವಾಸ, ಕಚೇರಿಯಲ್ಲಿ ಪರಿಶೀಲನೆ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಬಿಬಿಎಂಪಿ ಅಧಿಕಾರಿ ಗಂಗಾಧರಯ್ಯ ಚುನಾವಣೆಯ ಕಾರ್ಯಕ್ಕೆ ನೇಮಕವಾಗಿದ್ದು, ಇವರ ಕಾರಿನ ಮೇಲೆ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಸ್ಟಿಕ್ಕರ್ ಇರುವುದಾಗಿ ತಿಳಿದು ಬಂದಿದೆ.

ಸಂಸತ್ತಿನಲ್ಲಿ ನನಗೆ ಕಣ್ಣೀರು ಹಾಕಿಸಿದ ವ್ಯಕ್ತಿಗೆ ನಾನು ಕಣ್ಣೀರು ತರಿಸಬೇಕು; ಆಗಲೇ ನನ್ನ ಆತ್ಮಕ್ಕೆ ಶಾಂತಿ

ಕೆ.ಎನ್.ರಾಜಣ್ಣ ವಿರುದ್ಧ ಮಾಜಿ ಪ್ರಧಾನಿ ದೇವೇಗೌಡ ಪರೋಕ್ಷ ವಾಗ್ದಾಳಿ

ತುಮಕೂರು: ಸಂಸತ್ತಿನಲ್ಲಿ ಕಣ್ಣೀರು ಹಾಕಿಸಿದ ನಾಯಕನಿಗೆ ಕಣ್ಣೀರು ತರಿಸಿದರಷ್ಟೇ ತನ್ನ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಹೇಳಿದರು.

ಜಿಲ್ಲೆಯ ಮಧುಗಿರಿಯಲ್ಲಿ ಮಾತನಾಡಿದ ಅವರು, ನಾನು ಹಿಂದೆ ನಡೆದಿದ್ದನ್ನು ಮೆಲುಕು ಹಾಕಿ ನೋಡಲೂ ಹೋಗುವುದಿಲ್ಲ. ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದುಕೊಂಡಿರಲಿಲ್ಲ. ಚುನಾವಣಾ ರಾಜಕೀಯ ಸಾಕಾಗಿದೆ ಅಂತಾ ಹಿಂದೆಯೇ ಹೇಳಿದ್ದೆ. ತುಮಕೂರಿನ ಕೆಲವು ಮುಖಂಡರು ನನ್ನನ್ನು ಬಲಿಪಶು ಮಾಡಿದರು ಅಂತಾ ಹೇಳಲ್ಲ. ಅವರ ಹೆಸರು ಕೂಡ ಹೇಳೋಕೆ ಹೋಗಲ್ಲ. ಆದರೆ ಸಂಸತ್ತಿನಲ್ಲಿ ನಿಂತು ಕಣ್ಣೀರು ಹಾಕುವ ಕೆಟ್ಟ ಸಂದರ್ಭ ತಂದರು. ಆ ನಾಯಕನ ಕಣ್ಣಲ್ಲಿ ನೀರು ತರಿಸಬೇಕು, ಆಗ ನನ್ನ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದರು.



ನನ್ನನ್ನು ಮುಖ್ಯಮಂತ್ರಿ ಮಾಡಲು 11 ಸ್ಥಾನಗಳನ್ನು ತುಮಕೂರು ಕೊಟ್ಟಿತ್ತು. ಈಗ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಯಾವ ದೇವೇಗೌಡ ಪಾರ್ಲಿಮೆಂಟ್‌ನಲ್ಲಿ ನಿಂತು ಕಣ್ಣೀರು ಹಾಕುವ ಕೆಟ್ಟ ಸಂದರ್ಭ ತಂದರೋ ಆ ನಾಯಕನ ಕಣ್ಣಲ್ಲಿ ನೀರು ಬರಿಸಬೇಕು. ಅವತ್ತು ನನ್ನ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ಭಾವುಕರಾಗಿ ಹೇಳುವ ಮೂಲಕ ಮಾಜಿ ಶಾಸಕ ಕೆ.ಎನ್.ರಾಜಣ್ಣ ಅವರನ್ನು ಸೋಲಿಸುವಂತೆ ದೇವೇಗೌಡರು ಪರೋಕ್ಷವಾಗಿ ಹೇಳಿದರು.

ಪ್ರಸಕ್ತ ಚುನಾವಣೆಯಲ್ಲಿ ಜೆಡಿಎಸ್ 20 ಸ್ಥಾನಗಳನ್ನು ಗೆಲ್ಲುತ್ತದೆ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗೆ ತಿರುಗೇಟು ನೀಡಿದ ದಳಪತಿ, ಜೆಡಿಎಸ್‌ಗೆ 20 ಸ್ಥಾನಗಳಷ್ಟೇ ಬರುತ್ತದೆ ಅಂತಾ ಕಾಂಗ್ರೆಸ್‌ನವರು ಹೇಳುತ್ತಾರೆ. ಬಹುಶಃ ಅವರಿಗೆ ಉತ್ತರ ಕೊಡಲು ಮಧುಗಿರಿ ಒಂದೇ ಸಾಕು. ನನ್ನನ್ನು ಸಿಎಂ ಮಾಡಲು ತುಮಕೂರಿನಲ್ಲಿ 11 ಸ್ಥಾನ ಗೆಲ್ಲಿಸಿಕೊಟ್ಟಿದ್ದೀರಿ ಎಂದರು.

ಮಧುಗಿರಿಯ ಕೈಮರದ ಜೆಡಿಎಸ್ ಸಮಾವೇಶದಲ್ಲಿ ಮಾತನಾಡಿದ ದೇವೇಗೌಡರು, ವೀರಭದ್ರಯ್ಯ ಈ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಮಧುಗಿರಿ ಜಿಲ್ಲೆಯಾಗಬೇಕೆನ್ನುವುದು ವೀರಭದ್ರಯ್ಯ ಕನಸಾಗಿದೆ. ಏಕಶಿಲೆಯನ್ನು ಟೂರಿಸ್ಟ್ ಜಾಗ, ಇಂಡಸ್ಟ್ರಿಯಲ್ ಕ್ಲಸ್ಟರ್ ಮಾಡುವುದು ಅವರ ಕನಸಾಗಿದೆ. ಮುಸ್ಲಿಂ, ಗೊಲ್ಲ, ದಲಿತರಿಗೆ ಮೀಸಲಾತಿ ಕೊಟ್ಟಿದ್ದೇನೆ ಎಂದರು.

ವಿಧಾನಸಭೆ ಚುನಾವಣೆಗೆ ಭಾರೀ ಭದ್ರತೆ

ಮೈಸೂರು ಜಿಲ್ಲೆಗೆ 29 ಅರೆ ಸೇನಾಪಡೆ ತುಕಡಿ ನಿಯೋಜನೆ



ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದೆ ಮುಕ್ತ, ನ್ಯಾಯ ಸಮ್ಮತ ಹಾಗೂ ಶಾಂತಿಯುತ ಮತದಾನಕ್ಕೆ ಭಾರೀ ಭದ್ರತೆ ಒದಗಿಸಿ ಕಟ್ಟೆಚ್ಚರ ವಹಿಸಲಾಗಿದೆ.

ಮೈಸೂರು,ಏ.24(ಆರ್‌ಕೆ)–ಮೇ 10ರಂದು ನಡೆಯಲಿರುವ 2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗಾಗಿ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಒಟ್ಟು 29 ಅರೆ ಸೇನಾಪಡೆ ತುಕಡಿಗಳನ್ನು ನಿಯೋಜಿಸಲಾಗುತ್ತಿದೆ.

ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಇನ್ನಿಲ್ಲದ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ. ಮೈಸೂರು ನಗರಕ್ಕೆ ಈಗಾಗಲೇ ತಲಾ 80 ಮಂದಿ ಇರುವ 7 ಅರೆ ಸೇನಾಪಡೆ ತುಕಡಿಗಳು ಆಗಮಿಸಿದ್ದು, ಬಹುತೇಕ ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ವಾಹನ ತಪಾಸಣೆಗೆ ನಿಯೋಜಿಸಲಾಗಿದೆ. ಚುನಾವಣೆ ಸಮೀಪಿಸುತ್ತಿದ್ದಂತೆಯೇ ಇನ್ನೂ 3 ತುಕಡಿಗಳು ಮೈಸೂರು ನಗರಕ್ಕಾಗಮಿಸಲಿವೆ ಎಂದು ಪೊಲೀಸ್ ಆಯುಕ್ತ ಬಿ. ರಮೇಶ್ ತಿಳಿಸಿದ್ದಾರೆ.

ಸಿವಿಲ್, ಟ್ರಾಫಿಕ್, ಸಿಎಆರ್, ಕೆಎಸ್‌ಆರ್‌ಪಿ ಕಮಾಂಡೋ ಪಡೆ, ಅಶ್ವಾರೋಹಿ ದಳ ಸೇರಿದಂತೆ ಸುಮಾರು 4 ಸಾವಿರ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿದ್ದು, ಇದೀಗ ಸುಮಾರು 800 ಅರೆ ಸೇನಾಪಡೆ ಸಿಬ್ಬಂದಿ ಯನ್ನು ನೀಡುತ್ತಿರುವುದರಿಂದ ಚುನಾವಣಾ ಭದ್ರತೆಗೆ ಬಳಸಿಕೊಳ್ಳಲಾಗುವುದು ಎಂದರು.


ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಿಗೆ ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅರೆ ಸೇನಾ ಪಡೆ ಸಿಬ್ಬಂದಿಗೆ ವಸತಿ, ಊಟ–ತಿಂಡಿ ವ್ಯವಸ್ಥೆ ಮಾಡಿ ಮತದಾನದಂದು ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಕುರಿತು ತರಬೇತಿ ನೀಡಲಾಗಿದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಅದೇ ರೀತಿ ಮೈಸೂರು ಜಿಲ್ಲೆಗೆ ಈಗಾಗಲೇ 13 ಅರೆ ಸೇನಾಪಡೆ ತುಕಡಿಗಳು ಆಗಮಿಸಿದ್ದು, ಇನ್ನೂ 6 ತುಕಡಿಗಳು ಬರಲಿವೆ. ಜಿಲ್ಲೆಯ ಎಲ್ಲಾ ತಾಲೂಕುಗಳ ಪ್ರಮುಖ ರಸ್ತೆಗಳಲ್ಲಿರುವ ಪೊಲೀಸ್ ಚೆಕ್ ಪೋಸ್ಟ್‌ಗಳಿಗೆ ವಾಹನ ತಪಾಸಣೆ ಮಾಡಲು ನಿಯೋಜಿಸಲಾಗಿದೆ. ರಾಜಕೀಯ ಪಕ್ಷಗಳ ಪ್ರಮುಖ ನಾಯಕರು ನಡೆಸಲಿರುವ ಪ್ರಚಾರ ಸಭೆ, ರ‍್ಯಾಲಿ, ರೋಡ್ ಶೋಗಳಿಗೂ ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದೆ.

ಜಿಲ್ಲಾ ಪೊಲೀಸ್ ಘಟಕ, ಡಿಎಆರ್ ಪೊಲೀಸ್ ಸಿಬ್ಬಂದಿ ಜೊತೆಗೆ ಅರೆ ಸೇನಾಪಡೆಯು ಚುನಾವಣಾ ಭದ್ರತಾ ಕರ್ತವ್ಯಕ್ಕೆ ಸಾಥ್ ನೀಡಲಿದ್ದು, ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದೆ ಮುಕ್ತ, ನ್ಯಾಯ ಸಮ್ಮತ ಹಾಗೂ ಶಾಂತಿಯುತ ಮತದಾನಕ್ಕೆ ಭಾರೀ ಭದ್ರತೆ ಒದಗಿಸಿ ಕಟ್ಟೆಚ್ಚರ ವಹಿಸಲಾಗಿದೆ.

ಸಾರ್ವತ್ರಿಕ ವಿಧಾನಸಭಾ ಚುನಾವಣೆ ಹಿನ್ನೆಲೆ

23 ಮಂದಿ ನಾಮಪತ್ರ ವಾಪಸ್: 89 ಅಭ್ಯರ್ಥಿ ಕಣದಲ್ಲಿ



ಪುಟ್ಟರಾಜು, ದರ್ಶನ್, ಇಂದ್ರೇಶ್, ರಾಮಚಂದ್ರು, ಅಶೋಕ್, ಗಣಿಗ ರವಿಕುಮಾರ್, ಸಚ್ಚಿದಾನಂದ, ರವೀಂದ್ರ ಶ್ರೀಕಂಠಯ್ಯ, ರಮೇಶ್‌ಬಾಬು, ವೆಂಕಟೇಶ್, ಅನ್ನದಾನಿ, ನರೇಂದ್ರಸ್ವಾಮಿ, ಮುನಿರಾಜು, ಕೃಷ್ಣಮೂರ್ತಿ, ಮಧುಚಂದನ್, ಡಿ.ಸಿ. ತಮ್ಮಣ್ಣ, ಎಸ್.ಪಿ. ಸ್ವಾಮಿ, ಉದಯ್, ಸುಧಾ, ಚಲುವರಾಯಸ್ವಾಮಿ, ಸುರೇಶ್‌ಗೌಡ, ನಾರಾಯಣಗೌಡ, ದೇವರಾಜು, ಹೆಚ್.ಟಿ. ಮಂಜು

ಮಂಡ್ಯ, ಏ.24– ಮೇ 10ರಂದು ನಡೆಯುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನಾಮಪತ್ರ ಹಿಂಪಡೆಯಲು ಕೊನೆ ದಿನವಾದ ಸೋಮವಾರ 23 ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದು, 89 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

ಮಂಡ್ಯ: ಕ್ಷೇತ್ರದಲ್ಲಿ ಒಟ್ಟು 22 ಮಂದಿ ನಾಮಪತ್ರ ಸಲ್ಲಿಸಿದ್ದು, ಈ ಪೈಕಿ 7 ಮಂದಿ ವಾಪಸ್ ಪಡೆದಿದ್ದು ಅಂತಿಮವಾಗಿ 15 ಮಂದಿ ಕಣದಲ್ಲಿದ್ದಾರೆ. ಬಿ.ಆರ್.ರಾಮಚಂದ್ರ(ಜೆಡಿಎಸ್), ಅಶೋಕ್ ಜಯರಾಂ (ಬಿಜೆಪಿ), ಗಣಿಗ ರವಿಕುಮಾರ್ (ಕಾಂಗ್ರೆಸ್), ಮಧುಚಂದನ್ (ಸರ್ವೋದಯ ಕರ್ನಾಟಕ ಪಕ್ಷ), ಬೂದನೂರು ಬೊಮ್ಮಯ್ಯ(ಎಎಪಿ), ಶಿವಶಂಕರ್ (ಬಿಎಸ್ಪಿ), ನಾಗರಾಜು(ಕೆಆರ್‌ಎಸ್), ಎಂ.ಪಿ. ವಿಶ್ವ(ಆರ್‌ಪಿಐ), ಸುವರ್ಣ (ಐರಾ ನ್ಯಾಷನಲ್ ಪಾರ್ಟಿ), ಸಿ.ಎಂ.ಕೃಷ್ಣ (ಅಂಬೇಡ್ಕರ್ ಪೀಪಲ್ ಪಾರ್ಟಿ), ಕೆ.ಎಸ್.ವಿಜಯಾನಂದ, ಎಂ.ಜೆ.ಚಿಕ್ಕಣ್ಣ, ಎನ್.ಬಸವರಾಜು, ಲೋಲ, ಹೆಚ್.ಸಿ. ಶಿವರಾಮು (ಪಕ್ಷೇತರ) ಅಖಾಡದಲ್ಲಿದ್ದಾರೆ.

ಶ್ರೀರಂಗಪಟ್ಟಣ: ಕ್ಷೇತ್ರದಲ್ಲಿ ಒಟ್ಟು 20 ಮಂದಿ ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ ಮೂವರು ವಾಪಸ್ ಪಡೆದಿದ್ದು, ಅಂತಿಮವಾಗಿ 17 ಮಂದಿ ಕಣದಲ್ಲಿ ಉಳಿದಿದ್ದಾರೆ. ರಮೇಶ್ ಬಂಡಿಸಿದ್ದೇಗೌಡ(ಕಾಂಗ್ರೆಸ್), ರವೀಂದ್ರ ಶ್ರೀಕಂಠಯ್ಯ(ಜೆಡಿಎಸ್), ಸಚ್ಚಿದಾನಂದ(ಬಿಜೆಪಿ), ಪಿ.ಆನಂದ(ಬಿಎಸ್ಪಿ), ವೆಂಕಟೇಶ್(ಎಎಪಿ), ಅನಿಲ್ ಕುಮಾರ್ (ಅಖಿಲ ಭಾರತ ಮಾನವ ಹಕ್ಕುಗಳ ಪಕ್ಷ), ಅರುಣ್ ಕುಮಾರ್(ಕೆಆರ್‌ಎಸ್), ಹರೀಶ್(ಐಎಂಪಿಸಿ), ತಗ್ಗಹಳ್ಳಿ ವೆಂಕಟೇಶ್, ಗಿರೀಶ್, ಚಂದ್ರಶೇಖರ್, ಜವರೇಗೌಡ, ದೇವಿಕಾ, ಬಸವರಾಜು, ಮಹೇಶ್‌ಗೌಡ, ಮೋಹನ್‌ಕುಮಾರ್, ಶ್ರೀನಿವಾಸ್ ಹುರಿಯಾಳಾಗಿದ್ದಾರೆ.

ಮಳವಳ್ಳಿ: ಕ್ಷೇತ್ರದಲ್ಲಿ ಒಟ್ಟು 18 ಮಂದಿ ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ ನಾಲ್ವರು ನಾಮಪತ್ರ ವಾಪಸ್ ಪಡೆದಿದ್ದು, ಅಂತಿಮವಾಗಿ 14 ಮಂದಿ ಕಣದಲ್ಲಿದ್ದಾರೆ. ಡಾ.ಕೆ.ಅನ್ನದಾನಿ(ಜೆಡಿಎಸ್), ಪಿ.ಎಂ. ನರೇಂದ್ರಸ್ವಾಮಿ(ಕಾಂಗ್ರೆಸ್), ಜೆ.ಮುನಿರಾಜು(ಬಿಜೆಪಿ), ಡಾ.ಕೃಷ್ಣಮೂರ್ತಿ (ಬಿಎಸ್ಪಿ), ಬಿ.ಸಿ.ಮಹದೇವಸ್ವಾಮಿ (ಎಎಪಿ), ನಾಗರಾಜುಮೂರ್ತಿ (ಬಿಬಿಪಿ), ನಂದೀಶ್ ಕುಮಾರ್(ಕೆಆರ್‌ಎಸ್), ಅನ್ನದಾನಿ, ಉಮಾ, ಮಾಧವ್ ಕಿರಣ್, ಮೋಹನ್‌ಕುಮಾರ್, ಮಂಟ್ಯಲಿಂಗು, ಟಿ.ಎನ್.ಸತೀಶ್‌ಕುಮಾರ್, ಹೆಚ್.ಬಿ. ಸುಧಾ(ಪಕ್ಷೇತರ) ಸ್ಪರ್ಧಾ ಕಣದಲ್ಲಿದ್ದಾರೆ.

ಮದ್ದೂರು: ಕ್ಷೇತ್ರದಲ್ಲಿ ಒಟ್ಟು 12 ಮಂದಿ ನಾಮಪತ್ರ ಸಲ್ಲಿಸಿದ್ದು, ಈ ಪೈಕಿ ಇಬ್ಬರು ವಾಪಸ್ ಪಡೆದು ಅಂತಿಮ ಕಣದಲ್ಲಿ ಹತ್ತು ಮಂದಿ ಉಳಿದಿದ್ದಾರೆ. ಕೆ.ಎಂ.ಉದಯ್(ಕಾಂಗ್ರೆಸ್), ಡಿ.ಸಿ.ತಮ್ಮಣ್ಣ (ಜೆಡಿಎಸ್), ಎಸ್.ಪಿ.ಸ್ವಾಮಿ(ಬಿಜೆಪಿ), ಶಿವಕುಮಾರ್(ಬಿಎಸ್ಪಿ), ಆನಂದ (ಎಎಪಿ), ಕೆ.ಜೆ.ಮಹೇಶ್(ಕೆಆರ್‌ಎಸ್), ಚಿಕ್ಕನಂಜಾಚಾರಿ, ಕದಲೂರು ಪ್ರಜ್ವಲ್‌ಗೌಡ, ಹಳ್ಳಿಕೆರೆ ಮನೋಹರ್, ಗುಡಿಗೆರೆ ಮಂಜುನಾಥ್(ಪಕ್ಷೇತರ) ಕಣದಲ್ಲಿದ್ದಾರೆ.

ಕೆ.ಆರ್.ಪೇಟೆ: ಕ್ಷೇತ್ರದಲ್ಲಿ ಒಟ್ಟು 9 ಮಂದಿ ನಾಮಪತ್ರ ಸಲ್ಲಿಸಿದ್ದು, ಈ ಪೈಕಿ ಒಬ್ಬರು ನಾಮಪತ್ರ ಹಿಂಪಡೆದ ಹಿನ್ನೆಲೆಯಲ್ಲಿ ಅಂತಿಮ ಕಣದಲ್ಲಿ 8 ಮಂದಿ ಉಳಿದಿದ್ದಾರೆ. ಕೆ.ಸಿ.ನಾರಾಯಣಗೌಡ (ಬಿಜೆಪಿ), ಬಿ.ಎಲ್.ದೇವರಾಜು(ಕಾಂಗ್ರೆಸ್), ಹೆಚ್.ಟಿ.ಮಂಜು(ಜೆಡಿಎಸ್), ಪ್ರದೀಪ್ (ಬಿಎಸ್ಪಿ), ಶಿವಣ್ಣ(ಎಎಪಿ), ಕಿಶೋರ್ (ಕೆಆರ್‌ಎಸ್), ವಿಜಯರಾಮು(ಉತ್ತಮ ಪ್ರಜಾಕೀಯ ಪಕ್ಷ) ಕೆ.ಚಂದನ್‌ಗೌಡ (ಪಕ್ಷೇತರ) ಹುರಿಯಾಳಾಗಿದ್ದಾರೆ.

ಮೇಲುಕೋಟೆ: ಕ್ಷೇತ್ರದಲ್ಲಿ ಒಟ್ಟು 14 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು, ಈ ಪೈಕಿ ಅಂತಿಮ ಕಣದಲ್ಲಿ 11 ಮಂದಿ ಉಳಿದಿದ್ದು, ಮೂರು ಮಂದಿ ವಾಪಸ್ ಪಡೆದಿದ್ದಾರೆ. ಸಿ.ಎಸ್.ಪುಟ್ಟರಾಜು (ಜೆಡಿಎಸ್), ದರ್ಶನ್ ಪುಟ್ಟಣ್ಣಯ್ಯ (ಸರ್ವೋದಯ ಕರ್ನಾಟಕ ಪಕ್ಷ), ಇಂದ್ರೇಶ್ (ಬಿಜೆಪಿ), ಹೆಚ್.ಆರ್.ಅಶೋಕ (ಎಎಪಿ), ಯೋಗಾನಂದಗೌಡ(ಬಿಎಸ್ಪಿ), ಮಹದೇಂದ್ರ ಕುಮಾರ್(ಕೆಆರ್‌ಎಸ್), ಆರ್ಯ ಲೋಕೇಶ್(ಉತ್ತಮ ಪ್ರಜಾಕೀಯ ಪಕ್ಷ), ಕೃಷ್ಣ, ಚಿಕ್ಕಯ್ಯ, ಎಚ್. ನಾರಾಯಣ್, ರವಿಕುಮಾರ್ (ಪಕ್ಷೇತರ) ಅಂತಿಮ ಕಣದಲ್ಲಿದ್ದಾರೆ.

ನಾಗಮಂಗಲ: ಕ್ಷೇತ್ರದಲ್ಲಿ ಒಟ್ಟು 17 ಮಂದಿ ನಾಮಪತ್ರ ಸಲ್ಲಿಸಿದ್ದು, ಮೂವರು ವಾಪಸ್ ಪಡೆದಿದ್ದು, 14 ಮಂದಿ ಕಣದಲ್ಲಿದ್ದಾರೆ. ಎನ್.ಚಲುವರಾಯ ಸ್ವಾಮಿ (ಕಾಂಗ್ರೆಸ್), ಕೆ.ಸುರೇಶ್‌ಗೌಡ (ಜೆಡಿಎಸ್), ಸುಧಾ ಶಿವರಾಮೇಗೌಡ (ಬಿಜೆಪಿ), ಮಹದೇವ್(ಬಿಎಸ್ಪಿ), ಯೋಗೇಶ್ (ಎಎಪಿ), ಶ್ರೀನಿವಾಸ್ (ಯುಪಿಸಿ), ಯೋಗಾನಂದಮೂರ್ತಿ (ಇಂಡಿಯನ್ ಮೂವ್‌ಮೆಂಟ್ ಪಾರ್ಟಿ), ರಮೇಶ್ (ಕೆಆರ್‌ಎಸ್), ಅನಿಕೇತನ್‌ಗೌಡ, ಅಶೋಕ್, ಪ್ರಕಾಶ್, ಎಂ.ಬಿ.ಮಲ್ಲಿಕಾರ್ಜುನ (ಫೈಟರ್ ರವಿ), ಯೋಗೇಶ್, ಸುರೇಶ್(ಪಕ್ಷೇತರ) ಅಖಾಡದಲ್ಲಿದ್ದಾರೆ.

ನಾಮಪತ್ರ ವಾಪಸ್ ಪಡೆದವರ ವಿವರ

ಮಂಡ್ಯ, ಏ.24– ವಿಧಾನಸಭಾ ಚುನಾವಣೆ ಸಂಬಂಧ ನಾಮಪತ್ರ ಹಿಂಪಡೆಯಲು ಕೊನೆ ದಿನವಾದ ಸೋಮವಾರ ಹಲವರು ತಮ್ಮ ಉಮೇದುವಾರಿಕೆ ವಾಪಸ್ ಪಡೆದಿದ್ದಾರೆ.

ಮಂಡ್ಯ: ಡಾ.ಹೆಚ್.ಕೃಷ್ಣ, ಎಚ್.ಎನ್.ಯೋಗೇಶ್, ಮಹಾಲಿಂಗೇಗೌಡ, ಎಸ್.ಜಿ.ಮಂಜುನಾಥ, ಕೆ.ಎಸ್. ಮಲ್ಲಿಕಾರ್ಜುನ, ಕೆ.ಪಿ.ಆನಂದ, ಡಿ.ಎಸ್.ರವಿ ಕುಮಾರ್, **ನಾಗಮಂಗಲ:** ವೆಂಕಟೇಶ್, ಮುಜಾಮಿಲ್ ಪಾಷಾ, ಕೆ.ಎಂ.ಲೋಹಿತ್‌ಗೌಡ, **ಮಳವಳ್ಳಿ:** ಹೆಚ್.ಡಿ.ದೇವಪ್ರಸಾದ್, ಎಲ್.ಕೆ.ಶಿವಣ್ಣ, ಸಿದ್ದರಾಜು, ಶರತ್‌ಚಂದ್ರ, **ಶ್ರೀರಂಗಪಟ್ಟಣ:** ಕೆಂಪೇಗೌಡ, ಮಂಜುನಾಥ, ಎಂ.ಸಿ.ಚಿದಂಬರ್, **ಕೆ.ಆರ್.ಪೇಟೆ:** ಮೀನಾಕ್ಷಮ್ಮ, **ಮದ್ದೂರು:** ಪ್ರಕಾಶ್, ಸಿ.ಟಿ.ಬೀರೇಶ್, **ಮೇಲುಕೋಟೆ:** ಪಿ.ವಿ.ಸುಂದರಮ್ಮ, ಸಿ.ಎಸ್.ಪುಟ್ಟರಾಜು, ಟಿ.ವಿ.ಅರುಣ್‌ಕುಮಾರ್ ನಾಮಪತ್ರ ವಾಪಸ್ ಪಡೆದಿದ್ದು, ನಾಮಪತ್ರ ಹಿಂಪಡೆದವರೆಲ್ಲಾ ಪಕ್ಷೇತರ ಹಾಗೂ ಕೆಲ ಪ್ರಮುಖ ಪಕ್ಷಗಳ ಬಂಡಾಯ ಅಭ್ಯರ್ಥಿಗಳಾಗಿದ್ದಾರೆ.

ಕೆ.ಆರ್.ಪೇಟೆ ಸಮಗ್ರ ಅಭಿವೃದ್ಧಿಗೆ ನಾರಾಯಣಗೌಡರನ್ನು ಗೆಲ್ಲಿಸಿ

ಸಚಿವ ಡಾ.ಅಶ್ವತ್ಥನಾರಾಯಣ್ ಮನವಿ



ಕೆಆರ್.ಪೇಟೆ, ಏ.24– ಸಚಿವ ಕೆಸಿ.ನಾರಾಯಣಗೌಡರು 1800 ಕೋಟಿ ರೂ.ಗಳಿಗೂ ಹೆಚ್ಚು ಅನುದಾನ ತಂದು ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಿದ್ದಾರೆ. ಹೀಗಾಗಿ ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ಮತ್ತೊಮ್ಮೆ ನಾರಾಯಣಗೌಡರನ್ನು ಗೆಲ್ಲಿಸುವಂತೆ ಸಚಿವ ಡಾ.ಅಶ್ವತ್ಥನಾರಾಯಣ್ ಮನವಿ ಮಾಡಿದರು.

ತಾಲೂಕಿನ ಶೀಳನೆರೆ, ಹರಳಹಳ್ಳಿಯ ನೀತಿಮಂಗಲ ಸರ್ಕಲ್, ಸಿಂಧಘಟ್ಟ, ಹರಿಯಾಲದಮ್ಮನ ಗುಡಿ, ಅಗ್ರಹಾರಬಾಚಹಳ್ಳಿ ಸೇರಿದಂತೆ ವಿವಿಧೆಡೆ ಸಚಿವ ನಾರಾಯಣಗೌಡರ ಜೊತೆ ಮತಯಾಚಿಸಿ ಮಾತನಾಡಿದ ಅವರು, ಕಿತ್ತಾಟ, ಗುಂಪುಗಾರಿಕೆಯಲ್ಲಿ ತೊಡಗಿರುವ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಹಗಲುಗನಸು ಕಾಣುತ್ತಿದೆ. ಆದರೆ ಈ ಬಾರಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಹೀಗಾಗಿ ರಾಜ್ಯದ ಜನತೆ ಸುಭದ್ರ ಸರ್ಕಾರಕ್ಕಾಗಿ ಹಾಗೂ ಪ್ರಧಾನಿ ಮೋದಿ ಕೈ ಬಲಪಡಿಸಲು ಬಿಜೆಪಿ ನೇತೃತ್ವದ ಡಬಲ್ ಇಂಜಿನ್ ಸರ್ಕಾರಕ್ಕೆ ಆಶೀರ್ವಾದ ಮಾಡಲಿದ್ದಾರೆ ಎಂದು ಭವಿಷ್ಯ ನುಡಿದ ಅವರು ಕಾಂಗ್ರೆಸ್ ನೀಡುತ್ತಿರುವ ಭರವಸೆಯ ಗ್ಯಾರಂಟಿ ಕಾರ್ಡ್‌ಗೆ ಯಾವುದೇ ಬೆಲೆ ಇಲ್ಲ. ರಾಜ್ಯದ ಜನತೆ ಅದಕ್ಕೆ ಬೆಲೆ ನೀಡಲ್ಲ ಎಂದರು.

ಸಚಿವ ನಾರಾಯಣಗೌಡ ಕೆ.ಆರ್.ಪೇಟೆಯಲ್ಲಿ ಎಲ್ಲಾ ಸಮುದಾಯಗಳ ಅನುಕೂಲಕ್ಕಾಗಿ ಕೋಟ್ಯಾಂತರ ರೂ. ಅನುದಾನ ಬಿಡುಗಡೆಗೊಳಿಸಿ ಡಾ.ಬಿ.ಆರ್.ಅಂಬೇಡ್ಕರ್, ಬಾಬು ಜಗಜೀವನರಾಂ, ಮಹರ್ಷಿ ವಾಲ್ಮೀಕಿ, ದಾಸಶ್ರೇಷ್ಠ ಭಕ್ತ ಕನಕದಾಸ, ಕಾಯಕಯೋಗಿ ಕನಕ ನಾಡಪ್ರಭು ಕೆಂಪೇಗೌಡ ಭವನ ಸೇರಿದಂತೆ ಸುಸಜ್ಜಿತ ಸಮುದಾಯ ಭವನಗಳನ್ನು ನಿರ್ಮಿಸಿ ಇತಿಹಾಸ ನಿರ್ಮಿಸಿದ್ದಾರೆ. ಗ್ರಾಮೀಣ ಕ್ರೀಡಾಪಟುಗಳು ಹಾಗೂ ಯುವಜನರನ್ನು ಉತ್ತೇಜಿಸಲು 15ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಿ ಲೋಕಾರ್ಪಣೆಗೊಳಿಸಿದ್ದಾರೆ. ತಾಲೂಕಿನ ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಿಸಿ ಕ್ಷೇತ್ರದ ಜನರ ಆರೋಗ್ಯಕ್ಕೆ ಒತ್ತು ನೀಡಿದ್ದಾರೆ. ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಬಲವರ್ಧನೆಗಾಗಿ 28 ಕೋಟಿ ರೂ. ವೆಚ್ಚದಲ್ಲಿ ತಾಯಿ–ಮಗು ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ ನೀಡಿರುವ ಸಚಿವ ನಾರಾಯಣಗೌಡರು ಕೆ.ಆರ್.ಪೇಟೆ ತಾಲೂಕನ್ನು ಜಿಲ್ಲೆಯಲ್ಲಿಯೇ ಮಾದರಿ ತಾಲೂಕನ್ನಾಗಿ ಮಾಡಲು ಕಂಕಣತೊಟ್ಟು ಕೆಲಸ ಮಾಡುತ್ತಿದ್ದಾರೆ. ಜನತೆಗೆ ಕೊಟ್ಟ ಮಾತಿನಂತೆ ನಡೆದುಕೊಂಡಿರುವ ನಾರಾಯಣಗೌಡರನ್ನು ಮತ್ತೊಮ್ಮೆ ಕ್ಷೇತ್ರದ ಶಾಸಕರನ್ನಾಗಿ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷರಾದ ಎಸ್.ಅಂಬರೀಶ್, ಪ್ರಭಾಕರ್, ಬಿಜೆಪಿ ಮುಖಂಡರಾದ ಪುರಸಭಾ ಸದಸ್ಯ ಬಸ್ ಸಂತೋಷ್ ಕುಮಾರ್, ಸೋಮನಹಳ್ಳಿ ಗ್ರಾಪಂ ಅಧ್ಯಕ್ಷ ಪಾಪಣ್ಣ, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಭರತ್, ಯುವ ಮುಖಂಡ ಮೋಹನ್ ಸೇರಿದಂತೆ ಇತರರಿದ್ದರು.

ಗ್ರಾಪಂ ಮಾಜಿ ಸದಸ್ಯ ಅನುಮಾನಾಸ್ಪದ ಸಾವು



ಪಾಂಡವಪುರ, ಏ.24– ತಾಲೂಕಿನ ಹಿರೇಮರಳಿ ಗ್ರಾಪಂ ಮಾಜಿ ಸದಸ್ಯರೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಹಾರೋಹಳ್ಳಿ ಗ್ರಾಮದ ಸಮೀಪದ ಫ್ರೆಂಚರ ಸಮಾಧಿ ಸ್ಥಳದ ಬಳಿ ನಡೆದಿದೆ.

ಬಳೆಅತ್ತಿಗುಪ್ಪೆ ಗ್ರಾಮದ ಬಿ.ಸಿ.ಲೋಕೇಶ್(50) ಮೃತಪಟ್ಟವರು. ಭಾನುವಾರ ರಾತ್ರಿ 8.30ಕ್ಕೆ ಮನೆಯಿಂದ ಹೋದವರು ವಾಪಸ್ ಬಂದಿರಲಿಲ್ಲ. ಇಂದು ಬೆಳಗ್ಗೆ ಲೋಕೇಶ್ ಶವ ಪಟ್ಟಣದ ಹಾರೋಹಳ್ಳಿ ಗ್ರಾಮದ ಫ್ರೆಂಚರ ಸಮಾಧಿ ಸ್ಥಳದ ಬಳಿ ಪತ್ತೆಯಾಗಿದೆ. ಶವದ ಸಮೀಪ ಲೋಕೇಶ್ ಅವರ ಬೈಕ್ ಸಹ ದೊರಕಿದೆ.

ಶವದ ಮೇಲೆ ಕೆಲವು ಗಾಯದ ಗುರುತುಗಳು ಕಂಡು ಬಂದಿವೆ. ಬಹಿರ್ದೆಸೆಗೆ ಹೋಗಲು ಈ ಸ್ಥಳಕ್ಕೆ ಬಂದಿದ್ದು, ಕಿರಿದಾದ ರಸ್ತೆಯಲ್ಲಿ ಬೈಕ್‌ನಿಂದ ಬಿದ್ದು ಗಾಯಗೊಂಡು ಮೃತಪಟ್ಟಿರಬಹುದು ಎಂಬ ಶಂಕೆಯೂ ವ್ಯಕ್ತವಾಗಿದೆ. ಪಾಂಡವಪುರ ಸಾರ್ವಜನಿಕರ ಆಸ್ಪತ್ರೆಯಲ್ಲಿ ಮೃತರ ಮರಣೋತ್ತರ ಪರೀಕ್ಷೆ ನಡೆಯಿತು. ಈ ಬಗ್ಗೆ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಬಿ.ಸಿ.ಲೋಕೇಶ್ ನಿಧನಕ್ಕೆ ಶಾಸಕ ಸಿ.ಎಸ್. ಪುಟ್ಟರಾಜು ಸಂತಾಪ ಸೂಚಿಸಿದ್ದಾರೆ.

ಏ.29ಕ್ಕೆ ಬೀದರ್‌ನಲ್ಲಿ ಪ್ರಧಾನಿ ಮೋದಿ ಪ್ರಚಾರ

ಬೀದರ್: ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿದ್ದು, ಈ ನಡುವಲ್ಲೇ ಬಿಜೆಪಿ ಅಬ್ಬರ ಪ್ರಚಾರವನ್ನು ನಡೆಸುತ್ತಿದೆ. ಪ್ರಚಾರಕ್ಕಾಗಿ ಏಪ್ರಿಲ್ 29ರಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ. ಈ ಸಂಬಂಧ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಮಾಹಿತಿ ನೀಡಿದ್ದಾರೆ. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಹುಮನಾಬಾದ್ ತಾಲೂಕಿನ ಚಂದನಕೇರಾ ಕ್ರಾಸ್‌ನಲ್ಲಿ ಪ್ರಧಾನಿ ಮೋದಿ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬೆಳಗ್ಗೆ 10 ಗಂಟೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಔರಾದ್, ಭಾಲ್ಕಿ, ಬಸವಕಲ್ಯಾಣ, ಬೀದರ್, ಹುಮನಾಬಾದ್, ಬೀದರ್ ದಕ್ಷಿಣ, ಆಳಂದ, ಚಿಂಚೋಳಿ ಹೀಗೆ ಎಂಟು ವಿಧಾನಸಭಾ ಕ್ಷೇತ್ರಗಳ ಜನರು ಭಾಗವಹಿಸುತ್ತಾರೆಂದು ತಿಳಿಸಿದ್ದಾರೆ. ಇದೇ ವೇಳೆ ಲಿಂಗಾಯತ ಸಮುದಾಯದ ಮುಖಂಡರನ್ನು ಬಿಜೆಪಿ ನಿರ್ಲಕ್ಷಿಸಿದೆ ಎಂಬ ಆರೋಪವನ್ನು ನಿರಾಕರಿಸಿದ ಅವರು, ಕಾಂಗ್ರೆಸ್ ಪಕ್ಷಕ್ಕಿಂತ ಬಿಜೆಪಿ ಲಿಂಗಾಯತ ಸಮುದಾಯಕ್ಕೆ ಹೆಚ್ಚು ಟಿಕೆಟ್ ನೀಡಿದೆ ಎಂದರು.



ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಶಿವಾನಂದ ಮಂಠಾಳಕರ, ಬಿಜೆಪಿ ಕಾರ್ಯಕಾರಿಣಿ ಸದಸ್ಯ ಸೋಮನಾಥ ಪಾಟೀಲ, ರಾಷ್ಟ್ರೀಯ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜೈಕುಮಾರ ಕಾಂಗೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ ಗಡಗಿ, ಜಿಲ್ಲಾ ಉಪಾಧ್ಯಕ್ಷ ಪ್ರಕಾಶ ಟೊಣ್ಣೆ, ಬೀದರ್ ನಗರ ಅಧ್ಯಕ್ಷ ಶಶಿ ಹೊಸಳಿ, ಬುಡಾ ಅಧ್ಯಕ್ಷ ಬಾಬು ವಾಲಿ, ಜಿಲ್ಲಾ ವಕ್ತಾರ ಶಿವಪುತ್ರ ವೈದ್ಯ ಹಾಜರಿದ್ದರು.

ಬೊಕ್ಕಸ ಲೂಟಿ ಮಾಡುವ ಬಿಜೆಪಿ ಸರ್ಕಾರಕ್ಕೆ ಅಂತ್ಯ ಹಾಡಿ

ರಾಜ್ಯದ ಜನತೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆ

ಬೆಂಗಳೂರು, ಏ.24(ಕೆಎಂಶಿ)–ಬಿಜೆಪಿ ಸರ್ಕಾರ ಅಭಿವೃದ್ಧಿ ಎನ್ನುವ ಪದ ಮುಂದಿಟ್ಟು ಬೊಕ್ಕಸ ಲೂಟಿ ಮಾಡುತ್ತಿದೆ. ಈ ಪಕ್ಷವನ್ನು ಬುಡ ಸಮೇತ ಕಿತ್ತು ಹಾಕುವ ಮೂಲಕ ದೇಶಕ್ಕೆ ಒಳ್ಳೆಯ ಸಂದೇಶವನ್ನು ರಾಜ್ಯ ನೀಡಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಅಭಿವೃದ್ಧಿ ಎನ್ನುವ ಪದ ಮುಂದಿಟ್ಟುಕೊಂಡು ಬೊಕ್ಕಸವನ್ನು ಲೂಟಿ ಮಾಡುತ್ತಿದೆ. ಜನರು ಬದಲಾವಣೆ ಬಯಸಿದ್ದು, ಕರ್ನಾಟಕದಲ್ಲಿ ಬಿಜೆಪಿ ಕಿತ್ತು ಹಾಕುವ ಮೂಲಕ ದೇಶಕ್ಕೆ ಒಳ್ಳೆಯ ಸಂದೇಶ ಕೊಡಲಿದ್ದಾರೆ ಎಂದರು. ಈ ಚುನಾವಣೆ ಇಡೀ ದೇಶದಲ್ಲೇ ಮಹತ್ವ ಪಡೆದಿದೆ. ಕೇವಲ ರಾಜ್ಯದ ದೃಷ್ಟಿಯಿಂದ ಮಾತ್ರವಲ್ಲ. ದೇಶದ ದೃಷ್ಟಿಯಿಂದ ಒಳ್ಳೆಯ ಸಂದೇಶ ಕೊಡಲು ರಾಜ್ಯದ ಪ್ರಜ್ಞಾವಂತ ಜನರಿಗೆ ಅವಕಾಶ ಸಿಕ್ಕಿದೆ ಎಂದರು. ಶಾಸಕರನ್ನೇ ಕಳ್ಳತನ ಮಾಡುವ ಸಂಸ್ಕೃತಿ ಬಿಜೆಪಿಯಲ್ಲಿ ಬೇರೂರಿದೆ. ಬಹುತೇಕ ಕಳ್ಳತನದ ಮೂಲಕವೇ ಬಿಜೆಪಿ ನಾನಾ ರಾಜ್ಯಗಳಲ್ಲಿ ಸರ್ಕಾರ ರಚನೆ ಮಾಡಿದೆ. ಹೀಗಾಗಿ ಕಳ್ಳರ ಹಾವಳಿ ಜಾಸ್ತಿ ಇದ್ದು, ಬಹುಮತಕ್ಕೆ ಬೇಕಾದ ಸಂಖ್ಯೆ ಕೊಟ್ಟರೂ ಈ ಬಿಜೆಪಿಗರು ಕಳ್ಳತನ ಮಾಡುವ ಸಾಧ್ಯತೆ ಹೆಚ್ಚಿರುತ್ತದೆ.

ನಾಲ್ಕೈದು ಸ್ಥಾನ ಹೆಚ್ಚು ಬಂದರೂ ಆ ಶಾಸಕರು ಬ್ಲ್ಯಾಕ್ ಮೇಲ್ ಮಾಡುವ ಸಾಧ್ಯತೆ ಇರುತ್ತದೆ. ಹೀಗಾಗಿ ಯಾವುದೇ ಅತಂತ್ರ ಸ್ಥಿತಿ ನಿರ್ಮಾಣವಾಗದಂತೆ ಕಾಂಗ್ರೆಸ್ಸಿಗೆ 140–150 ಸ್ಥಾನಗಳನ್ನು ನೀಡುವ ಮೂಲಕ ಸುಭದ್ರ ಸರ್ಕಾರಕ್ಕೆ ಅವಕಾಶ ಮಾಡಿಕೊಡಿ ಎಂದು ಖರ್ಗೆ ಕೋರಿದರು. ಕರ್ನಾಟಕ ಪ್ರಗತಿಪರ ವಿಚಾರಧಾರೆ ಹೊಂದಿರುವ ರಾಜ್ಯ. ಆಡಳಿತ ಮತ್ತು ಅಭಿವೃದ್ಧಿ ವಿಚಾರದಲ್ಲಿ ದೇಶದಲ್ಲಿ ಗಮನ ಸೆಳೆದಿದೆ. ಕೆಲವೇ ರಾಜ್ಯಗಳ ಪೈಕಿ ಕರ್ನಾಟಕ ಕೂಡ ಒಳ್ಳೆ ಆಡಳಿತ ಕಂಡ ರಾಜ್ಯ. ಆದರೆ ಇಂದು ರಾಜ್ಯದ ಆಡಳಿತದಲ್ಲಿ ಸಾಕಷ್ಟು ವ್ಯತ್ಯಾಸ ಆಗಿದೆ. ಜನರ ಅಪೇಕ್ಷೆಯಂತೆ ಬಿಜೆಪಿ ಸರ್ಕಾರ ನಡೆದುಕೊಳ್ಳುತ್ತಿಲ್ಲ. ಆಡಳಿತದಲ್ಲಿ ಪಾರದರ್ಶಕತೆ ಇಲ್ಲ 40 ಪರ್ಸೆಂಟ್ ಕಮಿಷನ್ ಸರ್ಕಾರ ರಾಜ್ಯದಲ್ಲಿದೆ. ಇಂತಹ ಕೆಟ್ಟ ಸರ್ಕಾರವನ್ನು ನಾನು ಹಿಂದೆಂದೂ ನೋಡಿರಲಿಲ್ಲ ಎಂದರು. ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಕುರಿತು ಪ್ರಧಾನಿ ಮೋದಿ, ರಾಷ್ಟ್ರಪತಿ, ರಾಜ್ಯಪಾಲರಿಗೆ ಗುತ್ತಿಗೆದಾರರು ಪತ್ರ ಬರೆದರೂ ಅವರೆಲ್ಲರೂ ಕಿವುಡರಾಗಿ ನಡೆದುಕೊಂಡರು. ಕೆಲವು ಮಠಾಧೀಶರು ಕೂಡ ಭ್ರಷ್ಟಾಚಾರದ ಬಗ್ಗೆ ಪತ್ರ ಬರೆದರು. ಇದೆಲ್ಲವೂ ನಾನು ಹೇಳುತ್ತಿಲ್ಲ, ಮಾಧ್ಯಮಗಳಲ್ಲಿ ವರದಿಯಾಗಿದೆ.



ಇಂತಹ ಸರ್ಕಾರ ಕಿತ್ತುಹಾಕಬೇಕು ಎಂಬುದು ಜನರ ಇಚ್ಛೆ, ಕಾಂಗ್ರೆಸ್ ಕೂಡ ಅಷ್ಟೇ ಹೋರಾಟ ಮಾಡಿದೆ ಎಂದು ಹೇಳಿದರು. ಕೇಂದ್ರ ಸರ್ಕಾರವು ರಾಜ್ಯದ ಭ್ರಷ್ಟಾಚಾರ ವಿಚಾರವಾಗಿ ಈವರೆಗೂ ತುಟಿ ಬಿಚ್ಚಿಲ್ಲ. ಈ ಸರ್ಕಾರಕ್ಕೆ ಕೋಮುವಾದಿ ಚಟುವಟಿಕೆಯಲ್ಲಿ ತೋರಿಸುವ ಆಸಕ್ತಿ ಅಭಿವೃದ್ಧಿ ವಿಚಾರಗಳಿಗೆ ಇಲ್ಲ. ಮೋದಿ ಮತ್ತು ಶಾಗೆ ರಾಜ್ಯದ ಭ್ರಷ್ಟಾಚಾರ ಗೊತ್ತಿದ್ದು ಮೌನವಾಗಿದ್ದಾರೆ. ಅವರಿಗೆ ಒಂದು ಮಾತು ಹೇಳಲು ಇಷ್ಟಪಡುವೆ; ಕರ್ನಾಟಕಕ್ಕೆ ನಿಮ್ಮ ಕೊಡುಗೆ ಏನೂ ಇಲ್ಲ. ಎಕ್ಸ್‌ಪ್ರೆಸ್ ರೋಡ್ ಉದ್ಘಾಟನೆ ಎಂಬುದು ಹಳೆ ರೋಡ್ ಉದ್ಘಾಟನೆ ಅಷ್ಟೇ ಎಂದು ಟೀಕಿಸಿದರು.

ಡಬಲ್ ಎಂಜಿನ್ ಸರ್ಕಾರ ಎಂಬುದು ಕೆಟ್ಟ ಎಂಜಿನ್ ಅದು. ನಾವು ನಾಲ್ಕು ಗ್ಯಾರಂಟಿ ಯೋಜನೆಗಳ ಮೂಲಕ ಜನರ ಮುಂದೆ ಹೋಗಿದ್ದೇವೆ. ಜನರು ನಮಗೆ ಆಶೀರ್ವಾದ ಮಾಡುತ್ತಾರೆ ಎಂಬ ಭರವಸೆಯನ್ನು ರಾಜ್ಯದ ಜನ ತಾವೇ ಮುಂದೆ ಬಂದು ತೋರುತ್ತಿದ್ದಾರೆ ಎಂದರು.

ಪ್ರಣಾಳಿಕೆಯಲ್ಲಿ 20 ಅಂಶ ಸೇರ್ಪಡೆಗೆ ಆಗ್ರಹಿಸಿ 'ರೈತರ ನಡಿಗೆ ಜಾಗೃತಿ ಕಡೆಗೆ' ಅಭಿಯಾನ



ಮೈಸೂರು, ಏ.24(ಎಸ್‌ಪಿಎನ್)– ರೈತರ ಜೀವನ ಹಸನುಗೊಳಿಸುವ 20 ಅಂಶಗಳನ್ನು ತಮ್ಮ ಪ್ರಣಾಳಿಕೆಗಳಲ್ಲಿ ಅಳವಡಿಸಿ, ಅವುಗಳ ಈಡೇರಿಸುವಂತೆ ಒತ್ತಾಯಿಸಿ 'ರೈತರ ನಡಿಗೆ ಜಾಗೃತಿ ಕಡೆಗೆ' ಅಭಿಯಾನವನ್ನು ತಿ.ನರಸೀಪುರ ವಿಧಾನಸಭಾ ಕ್ಷೇತ್ರದಿಂದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಸೋಮವಾರ ಆರಂಭಿಸಿದ್ದಾರೆ.


ಈ ಅಭಿಯಾನದಲ್ಲಿ ರಾಜ್ಯದಲ್ಲಿ ಜಾರಿಗೆ ತಂದಿರುವ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ರದ್ದುಗೊಳಿಸುವ ಭರವಸೆ ನೀಡಬೇಕು. 60 ವರ್ಷ ತುಂಬಿದ ರೈತರಿಗೆ ತಿಂಗಳಿಗೆ ಕನಿಷ್ಠ 5000 ಪಿಂಚಣಿ ಯೋಜನೆ ಜಾರಿಗೆ ತರಬೇಕು. ಹಾಲು ಉತ್ಪಾದಕರಿಗೆ ಲೀಟರಿಗೆ ಕನಿಷ್ಠ 50 ರೂ. ದರ ನಿಗದಿ ಮಾಡಿ, ಹೈನುಗಾರಿಕೆ ರೈತರನ್ನು ಬಲವರ್ಧನೆ ಮಾಡುವ ಬೇಡಿಕೆಯೂ ಸೇರಿದಂತೆ ಒಟ್ಟು 20 ಅಂಶಗಳ ಬೇಡಿಕೆ ಪಟ್ಟಿ ಜಾರಿಗೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಅಭಿಯಾನ ಆರಂಭಿಸಲಾಗಿದೆ ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಳ್ಳಿ ದೇವರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಗ್ರಾಮೀಣ ಪ್ರದೇಶಗಳಿಗೆ ತೆರಳಿ ರೈತರ ಮತ ಭಿಕ್ಷೆ ಬೇಡುವ ರಾಜಕೀಯ ಪಕ್ಷಗಳಿಗೆ ರೈತರ ಪ್ರಣಾಳಿಕೆ ಜಾರಿ ಬಗ್ಗೆ ನಿಮ್ಮ ನಿಮ್ಮ ಪಕ್ಷದ ಪ್ರಣಾಳಿಕೆಗಳಲ್ಲಿ ಅಳವಡಿಸದೇ ಇರುವುದನ್ನು ಪ್ರಶ್ನಿಸುವಂತೆ ರೈತ ಮತ ದಾರರಲ್ಲಿ ಜಾಗೃತಿ ಮೂಡಿಸುವುದು ಈ ಅಭಿಯಾ ನದ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾಡಂಚಿನ ಪ್ರದೇಶದಲ್ಲಿ ಕಾಡು ಪ್ರಾಣಿಗಳ ದಾಳಿಯಿಂದ ರೈತನ ಬದುಕು ದಿನೇದಿನೆ ಹಾಳಾಗುತ್ತಿದೆ. ಇದಕ್ಕೆ ಸೂಕ್ತ ಪರಿಹಾರ ಒದಗಿಸಬೇಕು. ಹಗಲು ವೇಳೆ ಕೃಷಿ ಪಂಪಸೆಟ್‌ಗಳಿಗೆ 12 ಗಂಟೆಗಳ ನಿರಂತರ ವಿದ್ಯುತ್ ನೀಡುವ ಭರವಸೆ ನೀಡಬೇಕು. ಅತಿವೃಷ್ಟಿ ಹಾನಿ, ಕೊರೊನಾ ಸಂಕಷ್ಟದಿಂದ ತತ್ತರಿಸಿರುವ ರೈತರ ಸಂಪೂರ್ಣ ಕೃಷಿ ಸಾಲ ಮನ್ನಾ ಆಗಬೇಕು ಹಾಗೂ ರೈತನಿಗೆ ಬಡ್ಡಿ ರಹಿತವಾಗಿ ಕೃಷಿ ಸಾಲವನ್ನು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನೀಡುವಂತಹ ಯೋಜನೆ ಜಾರಿಗೆ ಬರಬೇಕು ಎಂದು ಒತ್ತಾಯಿಸಲಾಗಿದೆ ಎಂದು ತಿಳಿಸಿದರು.

ನಾಳೆ(ಏ.25) ನಂಜನಗೂಡಿನಲ್ಲಿ ಅಭಿಯಾನ: ಮಂಗಳವಾರ ನಂಜನಗೂಡು ವಿಧಾನಸಭಾ ವ್ಯಾಪ್ತಿಯಲ್ಲಿ 'ರೈತರ ನಡಿಗೆ ಜಾಗೃತಿ ಕಡೆಗೆ' ಅಭಿಯಾನ ಹಮ್ಮಿಕೊಂಡಿದ್ದು, ಏ.26 ಹುಣಸೂರು, ಏ.27 ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಹಮ್ಮಿಕೊಳ್ಳಲಾಗುವುದು ಹಾಗೂ ಇತರೆ ಜಿಲ್ಲೆಗಳಲ್ಲೂ ಈಗಾಗಲೇ ಈ ಅಭಿಯಾನ ಯಶಸ್ವಿಯಾಗಿ ಸಾಗಿದೆ ಎಂದು ತಿಳಿಸಿದರು. ಅಭಿಯಾನದ ವೇಳೆ ರೈತ ಮುಖಂಡರಾದ ಕುರುಬೂರು ಸಿದ್ದೇಶ್, ಅತ್ತಳ್ಳಿ ದೇವರಾಜ್ ಕಿರುಗಸೂರ್ ಶಂಕರ. ಬರಡನಪುರ ನಾಗರಾಜ್. ಅಪ್ಪಣ್ಣ. ಪ್ರದೀಪ್. ರೂಪ. ಮಂಜುನಾಥ್. ಗೌರಿ ಶಂಕರ್, ಗುರುಸ್ವಾಮಿ, ಆದಿ ಬೆಟ್ಟಹಳ್ಳಿ ನಂಜುಂಡಸ್ವಾಮಿ,, ರಾಜೇಂದ್ರ, ಲಿಂಗರಾಜು, ರಾಜೇಶ್, ಪಿ ರಾಜು, ಅಂಬಳೆ ಮಂಜುನಾಥ್, ಹೆಗ್ಗೋಟಾರ ಶಿವಸ್ವಾಮಿ, ಕರುಹಟ್ಟಿ ಉಮೇಶ್, ಮಲ್ಲಣ್ಣ, ಕುಂತನಹಳ್ಳಿ ಸ್ವಾಮಿ, ಕುಳ್ಳೇಗೌಡ, ಬನ್ನೂರು ಶ್ರೀನಿವಾಸ್, ಸುರೇಶ್, ಅತ್ತಹಳ್ಳಿ ರಾಮಕೃಷ್ಣ, ಚೇತನ್, ರಾಮ ಇದರು.

ಮುಸ್ಲಿಂ ಸಮಾಜವನ್ನು ಬಿಟ್ಟುಕೊಡಲ್ಲ: ಎಚ್‌ಡಿಡಿ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಚ್‌ಡಿ ಕುಮಾರಸ್ವಾಮಿ ಆಸ್ಪತ್ರೆ ಸೇರಿದ್ದು, ಪುತ್ರನ ಅನುಪಸ್ಥಿತಿಯಲ್ಲಿ ಜೆಡಿಎಸ್ ಮುಖಂಡ ಹಾಗೂ ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡರು ವೈದ್ಯರ ಸಲಹೆಗೆ ವಿರುದ್ಧವಾಗಿ ತಮ್ಮ 92ನೇ ವಯಸ್ಸಿನಲ್ಲಿಯೂ ಪೂರ್ಣ ಪ್ರಮಾಣದ ಚುನಾವಣಾ ಪ್ರಚಾರ ಕೈಗೊಂಡಿದ್ದಾರೆ. ತುಮಕೂರಿನ ಶಿರಾದಲ್ಲಿ ಮಾತನಾಡಿದ ಎಚ್.ಡಿ.ದೇವೇಗೌಡ ಅವರು, ಕುಮಾರಸ್ವಾಮಿ ಹೇಳಿದ ಕಡೆ ಪ್ರಚಾರ ಮಾಡುತ್ತೇನೆ. ಇಲ್ಲಿ ಕೆಲವು ಅಭಿಮಾನಿಗಳು ನನ್ನ ಹೆಗಲ ಮೇಲೆ ಕುರಿ ಹೊರಿಸಿದರು. ನನಗೆ 92 ವರ್ಷ ವಯಸ್ಸಾದ್ರೂ ನಿಮ್ಮ ಮುಂದೆ ಅದನ್ನು ಪ್ರದರ್ಶಿಸಿದ್ದೇನೆ. ಕುಮಾರಸ್ವಾಮಿ ಆಸ್ಪತ್ರೆಯಲ್ಲಿದ್ದಾರೆ, ಅದೆಲ್ಲ ದೇವರ ಇಚ್ಛೆ, ಕುಮಾರಸ್ವಾಮಿ ಮತ್ತೆ ಪ್ರಚಾರಕ್ಕೆ ಬರುತ್ತಾರೆ ಎಂದರು. ಪಂಚರತ್ನ ಯೋಜನೆ ಜಾರಿ ಮಾಡಲು ಹೋರಾಟ ಮಾಡುತ್ತಿದ್ದೇವೆ. ಮುಸ್ಲಿಂ ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ನಾವು ಎಂದಿಗೂ ಮುಸ್ಲಿಂ ಸಮಾಜವನ್ನು ಬಿಟ್ಟುಕೊಟ್ಟಿಲ್ಲ, ಮುಂದೆಯೂ ಬಿಟ್ಟುಕೊಡೋದು ಇಲ್ಲ. ಬಿಸಿಲಿನಲ್ಲಿ ನಿಲ್ಲಿಸಿದ್ದಕ್ಕೆ ತಾಯಂದಿರ ಬಳಿ ಕ್ಷಮೆ ಕೇಳುತ್ತೇನೆ ಎಂದು ಹೇಳಿದರು.

ಚುನಾವಣೆ ಘೋಷಣೆಯಾದಾಗಿನಿಂದಲೂ ತೀವ್ರ ಪ್ರಚಾರ ನಡೆಸುತ್ತಿದ್ದ ಕುಮಾರಸ್ವಾಮಿ ಅವರು ನಿಶ್ಯಕ್ತಿಯೊಂದಿಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಎರಡು ರಾಷ್ಟ್ರೀಯ ಪಕ್ಷಗಳ ಅಬ್ಬರದ ಪ್ರಚಾರದ ವಿರುದ್ಧ ಏಕಾಂಗಿಯಾಗಿ ನಿಂತು ಪ್ರಚಾರದಲ್ಲಿ ತೊಡಗಿದ್ದ ಅವರು, ಇದೀಗ ಆಸ್ಪತ್ರೆಯಿಂದಲೇ ರಣತಂತ್ರ ರೂಪಿಸುತ್ತಿದ್ದಾರೆ.

ವೈದ್ಯರ ಸಲಹೆಗೆ ವಿರುದ್ಧವಾಗಿ ದೇವೇಗೌಡರು ಪ್ರಚಾರಕ್ಕೆ ಮುಂದಾಗುತ್ತಿದ್ದಂತೆ ವೈದ್ಯಕೀಯ ತಜ್ಞರ ತಂಡವೂ ಅವರನ್ನು ಹಿಂಬಾಲಿಸುತ್ತಿದೆ. ದೇವೇಗೌಡರು ಭಾನುವಾರ ಬೆಂಗಳೂರಿನ ಪದ್ಮನಾಭನಗರ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ್ದರು. ಇತ್ತೀಚೆಗಷ್ಟೇ ನಡೆದ ಜೆಡಿ(ಎಸ್)ನ ಸಾರ್ವಜನಿಕ ರ್‍ಯಾಲಿಗೆ ಗಾಲಿ ಕುರ್ಚಿಯ ಮೇಲೆ ಕರೆತರಲಾಗಿತ್ತು ಮತ್ತು ಅಪಾರ ಜನಸ್ತೋಮ ನೆರೆದಿತ್ತು. ಕೊನೆಯ ಬಾರಿಗೆ ಜೆಡಿಎಸ್ ಅಧಿಕಾರದಲ್ಲಿರಬೇಕೆಂಬ ಅವರ ಮನವಿಗೆ ಒಕ್ಕಲಿಗರೇ ಅಧಿಕವಾಗಿರುವ ಅಲ್ಲಿ ಭಾರೀ ಜನಸ್ಪಂದನೆ ವ್ಯಕ್ತವಾಗುತ್ತಿದೆ.

2 ದಿನ ರಾಜ್ಯಾದ್ಯಂತ ಬಿಜೆಪಿ ಮಹಾ ಪ್ರಚಾರ ಅಭಿಯಾನ

■ ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮಾಹಿತಿ ■ ಮತಗಟ್ಟೆ ಆಧಾರದಡಿ ಇಂದು, ನಾಳೆ ಕೇಂದ್ರ, ರಾಜ್ಯ, ಜಿಲ್ಲಾ ಮಟ್ಟದ ನಾಯಕರಿಂದ ಪ್ರಚಾರ

ಬೆಂಗಳೂರು, ಏ. 24 (ಕೆಎಂಶಿ)– ರಾಜ್ಯದ 224 ಕ್ಷೇತ್ರಗಳಲ್ಲಿ ಬಿಜೆಪಿ ಮುಂದಿನ ಎರಡು ದಿನ ವಿಶೇಷ 'ಮಹಾ ಪ್ರಚಾರ ಅಭಿಯಾನ'ವನ್ನು ಹಮ್ಮಿಕೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಸಂಸದ ನಳಿನ್‌ಕುಮಾರ್ ಕಟೀಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಎಲ್ಲ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಕೇಂದ್ರ ನಾಯಕರಾದ ಅಮಿತ್ ಶಾ, ಜೆ.ಪಿ. ನಡ್ಡಾ ಚುನಾವಣಾ ಪ್ರವಾಸ ಆರಂಭಿಸಿದ್ದಾರೆ. ಒಂದು ತಿಂಗಳ ಹಿಂದೆ ಆರಂಭಿಸಿದ ಬೂತ್ ವಿಜಯ್ ಅಭಿಯಾನದಲ್ಲಿ ಡಬಲ್ ಇಂಜಿನ್ ಸರ್ಕಾರದ ಸಾಧನೆಗಳು ಮತ್ತು ಯೋಜನೆಗಳನ್ನು, ಕಾರ್ಯಕರ್ತರು ಮನೆ–ಮನೆಗೆ ತಲುಪಿಸಿದ್ದಾರೆ. ನಾಮಪತ್ರ ಸಲ್ಲಿಕೆ ನಂತರ ಅಭ್ಯರ್ಥಿಗಳ ಪರಿಚಯದೊಂದಿಗೆ ಕಾರ್ಯಕರ್ತರು ಪ್ರಚಾರ ನಡೆಸಲಿದ್ದಾರೆ ಎಂದು ಹೇಳಿದರು.

ಮತಗಟ್ಟೆ ಆಧಾರದಡಿ ಏ.25, 26 ರಂದು 'ವಿಶೇಷ ಮಹಾ ಪ್ರಚಾರ ಅಭಿಯಾನ'ವನ್ನು ಬಿಜೆಪಿ ಹಮ್ಮಿಕೊಂಡಿದೆ. ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ನಾಯಕರು ಈ ಅಭಿಯಾನದಲ್ಲಿ ಪಾಲ್ಗೊಳ್ಳಲಿದ್ದಾರೆ. ಎಲ್ಲ 224 ಕ್ಷೇತ್ರಗಳಲ್ಲಿ ಸಾರ್ವಜನಿಕ ಸಭೆ, ರೋಡ್ ಶೋ, ಸುದ್ದಿಗೋಷ್ಠಿ, ಮನೆ–ಮನೆಗೆ ಭೇಟಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿವರ ನೀಡಿದರು. ಜೆ.ಪಿ.ನಡ್ಡಾ, ಅಮಿತ್ ಶಾ, ರಾಜನಾಥ್ ಸಿಂಗ್, ಅರುಣ್ ಸಿಂಗ್, ಸ್ಮೃತಿ ಇರಾನಿ, ಧರ್ಮೇಂದ್ರ ಪ್ರಧಾನ್ ನಿರ್ಮಲಾ ಸೀತಾರಾಮನ್. ಮನ್ಸುಖ್ ಮಾಂಡವೀಯ, ಯೋಗಿ ಆದಿತ್ಯನಾಥ್, ದೇವೇಂದ್ರ ಫಡ್ನವೀಸ್, ಸಿ.ಟಿ.ರವಿ, ಅಣ್ಣಾಮಲೈ ಸೇರಿದಂತೆ 98 ಮಂದಿ ಬಿಜೆಪಿ ಕೇಂದ್ರ ನಾಯಕರು ಮತ್ತು ಕೇಂದ್ರ ಸಚಿವರು, ಪಕ್ಷದ ರಾಜ್ಯದ ನಾಯಕರು, ಸಚಿವರು, ಸಂಸದರು ಸೇರಿದಂತೆ 150 ರಾಜ್ಯ ನಾಯಕರು ಈ ಅಭಿಯಾನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ನಳಿನ್ ಕುಮಾರ್ ಕಟೀಲ್ ಅವರು ತಿಳಿಸಿದರು.



150ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಗುರಿಯೊಂದಿಗೆ ನಾಯಕರು ಮತ್ತು ಕಾರ್ಯಕರ್ತರು ಬೆಳಿಗ್ಗೆಯಿಂದ ಸಂಜೆವರೆಗೆ ಮನೆ–ಮನೆಗೆ ಭೇಟಿ ನೀಡಿ ಬಿಜೆಪಿ ಸರ್ಕಾರಗಳ ಕಾರ್ಯಯೋಜನೆಗಳು ಮತ್ತು ಸಾಧನೆಗಳನ್ನು ತಿಳಿಸಲಿದ್ದಾರೆ.

ಬೆಳಿಗ್ಗೆ ಮಂದಿರ ದೇವಸ್ಥಾನಗಳಿಗೆ ಭೇಟಿ ನೀಡಿ ಬಳಿಕ ರಾಷ್ಟ್ರ ನಾಯಕರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ, ಆ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಫಲಾನುಭವಿಗಳು ಮತ್ತು ಸಮುದಾಯಗಳ ಮುಖಂಡರೊಂದಿಗೆ ಸಂವಾದ ನಡೆಸಲಿದ್ದಾರೆ. ಕಾರ್ಯಕರ್ತರ ಆಧಾರದಡಿ ಬಿಜೆಪಿ ಚುನಾವಣೆ ಎದುರಿಸಲಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಅಭಿಯಾನದಡಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಹಿಂದುಳಿದ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ ಭೇಟಿ ನೀಡಿ ಸರ್ಕಾರ ಒದಗಿಸಿರುವ ಮೀಸಲಾತಿಯ ಬಗ್ಗೆ ತಿಳಿಸಲಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ನಾಲ್ಕು ದಿನ ದಕ್ಷಿಣ ಕನ್ನಡ, ಕರಾವಳಿ, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕದಲ್ಲಿ ಪ್ರಚಾರ ನಡೆಸಲಿದ್ದಾರೆ. ಅಮಿತ್ ಶಾ ಅವರು 35 ರಿಂದ 40 ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ ಎಂದು ವಿವರಿಸಿದರು.

ರಾಹುಲ್ ಗಾಂಧಿ ಬಡವರ ಬಗ್ಗೆ ಮಾತನಾಡುತ್ತಾರೆ. ಆದರೆ ಅವರಿಗೆ ಬಡವರ ಬಗ್ಗೆ ಗೊತ್ತಿಲ್ಲ. ಕಾಂಗ್ರೆಸ್‌ಗೆ 60 ವರ್ಷ ಆಡಳಿತ ನಡೆಸಲು ಅವಕಾಶ ನೀಡಿದರೂ ಗರೀಬಿ ಹಟಾವೋ ಮಾಡಲಿಲ್ಲ. ಮನೆ, ಶೌಚಾಲಯ ಕಟ್ಟಿಸಿಕೊಡುವುದಕ್ಕೆ, ಅಡುಗೆ ಅನಿಲ ನೀಡುವುದಕ್ಕೆ ಮೋದಿಯವರು ಬರಬೇಕಾಯಿತು. ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಸಂದೇಶ ನೀಡಿರುವ ಬಸವೇಶ್ವರರ ಬಗ್ಗೆ ರಾಹುಲ್ ಗಾಂಧಿಯವರಿಗೆ ಗೊತ್ತಿಲ್ಲ ಎಂದು ಟೀಕಿಸಿದರು.



ಮೈಸೂರಿನ ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಬೋಗಾದಿಯ ಶಾರದಾನಗರ ರೈಲ್ವೆ ಬಡಾವಣೆಯ ಶರಣು ಕುಟೀರದಲ್ಲಿ ಬಸವ ಜಯಂತಿ ಆಚರಿಸಲಾಯಿತು. ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ರೂಪ ಕುಮಾರಸ್ವಾಮಿ, ಮೈಸೂರು ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ ಕೇಂದ್ರೀಯ ಸಂಚಾಲಕರಾದ ವಿ. ಲಿಂಗಣ್ಣ ಕಾವೇರಿ ವಾಜಂತ್ರಿ ರತ್ನ ಬಸವರಾಜು, ವಚನ, ಬಸವರಾಜ್ ವಾಜಂತ್ರಿ, ನಿಜಗುಣ ಉಪಸ್ಥಿತರಿದ್ದರು.



ಕಡಕೊಳ ಕನ್ನಡ ಗೆಳೆಯರ ಬಳಗದ ವತಿಯಿಂದ ಬಸವೇಶ್ವರ ಜಯಂತಿ ಆಚರಿಸಲಾಯಿತು. ಬಳಗದ ಅಧ್ಯಕ್ಷರಾದ ಲಕ್ಷ್ಮೀಕಾಂತ್ ಗೋವಿಂದರಾಜು, ಜವರನಾಯಕ, ಶಿವಪ್ಪ, ವಿಶ್ವ, ಸಿದ್ದೇಶ, ಅತಾವುಲ್ಲ, ಸ್ವಾಮಿನಾಯ್ಕ, ವೇದಾಂತ, ರಮೇಶ್ ಕೆವಿ, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಮಹಾದೇವು, ಕಡಕೊಳ ರಮೇಶ್, ಡೈರಿ ಮಹಾದೇವ, ಜಗದೀಶ್ ಹಾಗೂ ಗ್ರಾಮಸ್ಥರು ಹಾಜರಿದ್ದರು.



ಅಂಬಾ ಭವಾನಿ ಮಹಿಳಾ ಸಮಾಜದ ವತಿಯಿಂದ ಚಾಮುಂಡಿಬೆಟ್ಟದ ಪಾದದಲ್ಲಿರುವ ಶಿವಾನಂದ ಆಶ್ರಮದಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ಸಮಾಜದ ಅಧ್ಯಕ್ಷರಾದ ಸವಿತಾ ಘಾಟ್ಕೆ, ಚಿತ್ರ ಬಿಳಿಗಿರಿ, ಅಂಬಿಕಾ, ಗಾಯತ್ರಿ, ಪಾಂಡು ರೂಪ, ಶಶಿ, ಮೀನಾಕ್ಷಿ, ಲೀಲಾವತಿ, ಶೈಲಜಾ, ಶ್ವೇತಾ , ಶುಭ, ಪಾರ್ವತಿ, ಸುಮಾ, ಆಶಾ ಮತ್ತು ಇತರರು, ಮಕ್ಕಳು ಆಗಮಿಸಿದ್ದರು.



ಮೈಸೂರಿನ ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯತಾಣ ವಾತ್ಸಲ್ಯ ಸೇವಾಶ್ರಮದಲ್ಲಿ ಕ್ರಾಂತಿಕಾರಿ, ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಆಚರಿಸಲಾಯಿತು. ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ವೆಂಕಟೇಶ್ ಅವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಟ್ರಸ್ಟ್ ಅಧ್ಯಕ್ಷರಾದ ಎ.ಸಿ.ರವಿಕುಮಾರ್, ಕಾರ್ಯದರ್ಶಿ ಸಿಸ್ಟರ್ ನಾಗರತ್ನ, ಶಶಿಕಲಾ, ಲಕ್ಷ್ಮಿ, ಜಯ, ವಿಜಯ, ಜೆಕೆ ಮತ್ತಿತರರು ಹಾಜರಿದ್ದರು.

ಚಾಮುಂಡೇಶ್ವರಿ ದರ್ಶನ ಪಡೆದ ಅಮಿತ್ ಶಾ

ಪ್ರತಾಪ್ ಸಿಂಹ, ರಾಮದಾಸ್ ಜತೆ ಒಟ್ಟಿಗೆ ತೆರಳಿದ ಕೇಂದ್ರ ಗೃಹ ಸಚಿವ

ಮೈಸೂರು, ಏ. 24(ಎಂಟಿವೈ)– ಬಿಜೆಪಿ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರಕ್ಕೆಂದು ಆಗಮಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದರ್ಶನ ಪಡೆದರು.

ಚಾಮರಾಜನಗರ ಜಿಲ್ಲೆಯ ಗುಂಡ್ಲು ಪೇಟೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ರೋಡ್ ಶೋ ನಡೆಸಲು ಬೆಂಗಳೂರಿಂದ ಖಾಸಗಿ ಹೆಲಿಕಾಪ್ಟರ್‌ನಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಚಿವ ಅಮಿತ್ ಶಾ ಬಿಗಿ ಭದ್ರತೆಯಲ್ಲಿ ರಸ್ತೆ ಮಾರ್ಗವಾಗಿ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದರು.

ಚಾಮುಂಡೇಶ್ವರಿ ದೇವಾಲಯದ ಬಳಿ ಬರುತ್ತಿದ್ದಂತೆಯೇ ದೇವಾಲಯ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಹಾಗೂ ಇನ್ನಿತರರು ಸ್ವಾಗತಿಸಿ ದೇವಾಲಯದೊಳಗೆ ಕರೆದೊಯ್ದರು. ಬಳಿಕ ಗರ್ಭಗುಡಿ ಮುಂಭಾಗದ ಪ್ರಾಂಗಣದವರೆಗೂ ತೆರಳಿದ ಅಮಿತ್ ಶಾ ದೇವಿಯ ದರ್ಶನ ಪಡೆದರು. ಅಲ್ಲದೇ ಅರ್ಚನೆ ಮಾಡಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ನಂತರ ದೇವಾಲಯದ ಹಿಂಭಾಗವಿರುವ ರುದ್ರಾಕ್ಷಿ ಮಂಟಪದ ಬಳಿ ಉತ್ಸವ ಮೂರ್ತಿಯ ದರ್ಶನ ಪಡೆದರು. ದರ್ಶನ ಮಾಡಿದ ನಂತರ 15 ನಿಮಿಷ ದೇವಾಲಯದಲ್ಲೇ ಇದ್ದರು.

ಈ ವೇಳೆ ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪಸಿಂಹ, ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ಜೋಗಿ ಮಂಜು, ಮೈಸೂರು ನಗರ ಉಸ್ತುವಾರಿ ರಾಜ್ ಬಬ್ಬರ್, ದೇವಾಲಯದ ಆಡಳಿತಾಧಿಕಾರಿ ಗೋವಿಂದ ರಾಜು, ಮಣಿಗಾರ್ ನಾಗರಾಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಚಾಮುಂಡಿಬೆಟ್ಟದ ದೇವಾಲಯಕ್ಕೆ ಕೇಂದ್ರ ಸಚಿವ ಅಮಿತ್ ಶಾ ಸೋಮವಾರ ಆಗಮಿಸಿದ ದೇವಿಯ ದರ್ಶನ ಪಡೆದರು. ಚಿತ್ರದಲ್ಲಿ ಸಂಸದ ಪ್ರತಾಪ ಸಿಂಹ, ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್, ಶಾಸಕ ಎಸ್.ಎ.ರಾಮದಾಸ್ ಅವರನ್ನು ಕಾಣಬಹುದು.

ವಿಮಾನ ನಿಲ್ದಾಣದಲ್ಲೂ ಸ್ವಾಗತ: ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಅಮಿತ್ ಶಾ ಬೆಂಗಳೂರಿಂದ ಖಾಸಗಿ ಹೆಲಿಕಾಪ್ಟರ್‌ನಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಈ ವೇಳೆ ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್‌ಸಿಂಹ, ಮೇಯರ್ ಶಿವಕುಮಾರ್, ಬಿಜೆಪಿ ಮೈಸೂರು ನಗರ ಕಾರ್ಯಾಧ್ಯಕ್ಷ ಹೆಚ್.ಜಿ.ಗಿರಿಧರ್, ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್ ಮತ್ತಿತರರು ಇದ್ದರು.

ರಾಮದಾಸ್‌ಗೆ ಅಮಿತ್ ಆಲಿಂಗನ



ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಶಾಸಕ ಎಸ್.ಎ.ರಾಮದಾಸ್ ಅವರನ್ನು ಆಲಿಂಗಿಸಿ, 'ತ್ಯಾಗ'ರಾಜ ಎಂದು ಅಮಿತ್ ಶಾ ಕೊಂಡಾಡಿದರು.

ಕೆ.ಆರ್.ಕ್ಷೇತ್ರದ ಬಿಜೆಪಿ ಟಿಕೆಟ್ ಕೈ ತಪ್ಪಿದ್ದರೂ ಶಾಸಕ ಎಸ್.ಎ.ರಾಮದಾಸ್ ವರಿಷ್ಠರ ಪ್ರೀತಿಗೆ ಪಾತ್ರರಾಗಿದ್ದಾರೆ. ಮನರಾಯ್ಕೆ ಬಯಸಿ ಟಿಕೆಟ್‌ಗಾಗಿ ಪ್ರಬಲ ಆಕಾಂಕ್ಷಿಯಾಗಿದ್ದ ಎಸ್.ಎ.ರಾಮದಾಸ್ ಟಿಕೆಟ್ ಕೈ ತಪ್ಪಿದರೂ ಪಕ್ಷದಲ್ಲೇ ಮುಂದುವರೆದು, ಪಕ್ಷದ ಅಧಿಕೃತ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಪರ ಕೆಲಸ ಮಾಡುವುದಾಗಿ ಘೋಷಿಸಿದ್ದರು. ಇಂದು ಮೈಸೂರಿಗೆ ಆಗಮಿಸಿದ ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಅಮಿತ್ ಶಾ ಹೆಲಿಕಾಪ್ಟರ್‌ನಿಂದ ಕೆಳಕ್ಕಿಳಿಯುತ್ತಿದ್ದಂತೆ ಹೂಗುಚ್ಛ ನೀಡಿದ ಎಸ್.ಎ.ರಾಮದಾಸ್ ಆತ್ಮೀಯವಾಗಿ ಬರಮಾಡಿಕೊಂಡರು. ಈ ವೇಳೆ ಅಮಿತ್ ಶಾ, ಶಾಸಕ ಎಸ್.ಎ.ರಾಮದಾಸ್ ಅವರನ್ನು ಆತ್ಮೀಯವಾಗಿ ಆಲಿಂಗಿಸಿಕೊಂಡರು. ಹೇಗಿದ್ದೀರಿ? ಎಂದು ಕುಶಲೋಪರಿ ವಿಚಾರಿಸಿ, ಬೆನ್ನು ತಟ್ಟಿದರು. ಬಳಿಕ ನನ್ನ ಜೊತೆ ಬನ್ನಿ ಎಂದು ಎಸ್.ಎ.ರಾಮದಾಸ್ ಅವರನ್ನು ಕಾರಿನಲ್ಲಿ ಕರೆದುಕೊಂಡು ಚಾಮುಂಡಿಬೆಟ್ಟಕ್ಕೆ ತೆರಳಿದರು. ಚಾಮುಂಡಿಬೆಟ್ಟದಲ್ಲೂ ಅಮಿತ್ ಶಾ ಅವರೊಂದಿಗೆ ರಾಮದಾಸ್ ಇದ್ದರು. ಈ ಬಾಂಧವ್ಯ ಎಲ್ಲರ ಗಮನ ಸೆಳೆಯಿತು.

ರಾಜ್ಯ ಮಟ್ಟದ ಬುದ್ಧಗೀತೆ ಗಾಯನ ಸ್ಪರ್ಧೆ

ಮೈಸೂರು, ಏ. 24–ಬುದ್ಧ ಪೂರ್ಣಿಮೆ ಪ್ರಯುಕ್ತ ಮೈಸೂರಿನ ತನುಮನ ಸಂಸ್ಥೆಯು ಏ. 30 ರಂದು ಬೆಳಗ್ಗೆ 10.30 ಗಂಟೆಗೆ ಅಶೋಕ ವೃತ್ತದಲ್ಲಿರುವ ವಿಶ್ವ ಮೈತ್ರಿ ಬುದ್ಧ ವಿಹಾರದಲ್ಲಿ ರಾಜ್ಯ ಮಟ್ಟದ ಬುದ್ಧಗೀತೆ ಗಾಯನ ಸ್ಪರ್ಧೆ ಆಯೋಜಿಸಿದ್ದು, 14 ರಿಂದ 25 ವರ್ಷ ವಯೋಮಾನದವರು ಇದರಲ್ಲಿ ಭಾಗವಹಿಸಬಹುದು. 4 ನಿಮಿಷಗಳ ಅವಧಿಯಲ್ಲಿ ಸ್ಪರ್ಧಿಗಳು ಕನ್ನಡ ಭಾಷೆಯಲ್ಲಿ ಬುದ್ಧ ಗೀತೆಯನ್ನು ಪ್ರಸ್ತುತಪಡಿಸಬೇಕು. ಪ್ರಥಮ ಬಹುಮಾನ 3000 ರೂ., ದ್ವಿತೀಯ ಬಹುಮಾನ 2000 ರೂ., ತೃತೀಯ ಬಹುಮಾನ 1000 ರೂ. ಹಾಗೂ ಭಾಗವಹಿಸಿದ ಎಲ್ಲರಿಗೂ ಪ್ರಶಂಸನಾ ಪತ್ರ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9901313740 ಸಂಪರ್ಕಿಸಬಹುದು.



ವರನಟ ಡಾ.ರಾಜಕುಮಾರ್ ಜನ್ಮದಿನದ ಪ್ರಯುಕ್ತ ಮೈಸೂರು ಮತ್ತು ಚಾಮರಾಜ ನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜ್, ಉಪಾಧ್ಯಕ್ಷ ರಾಜಶೇಖರ ಕದಂಬ ಅವರು ರಾಜ ಕುಮಾರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು.

ಮಕ್ಕಳ ಪ್ರತಿಭೆಗೆ ಬೇಸಿಗೆ ಶಿಬಿರ ಸಹಕಾರಿ: ಮಂಡ್ಯ ರಮೇಶ್

ಮೈಸೂರು, ಏ. 24– ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಅಡಗಿರುವ ವಿವಿಧ ಕಲಾ ಪ್ರತಿಭೆಗಳನ್ನು ಗುರುತಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ಚಲನಚಿತ್ರ ನಟ ಮಂಡ್ಯ ರಮೇಶ್ ತಿಳಿಸಿದರು. ಮೈಸೂರಿನ ಕುವೆಂಪುನಗರದಲ್ಲಿ ಆಯೋಜಿಸಿರುವ ಶ್ರೀ ಗುರುಕಲಾ ಶಾಲೆಯ ಪುಟಾಣಿ ಪರ್‌ಪಂಚ ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡು ಸಂವಾದ ನಡೆಸಿದ ಅವರು, ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕದ ಜೊತೆಗೆ ಒತ್ತಡವಿರುತ್ತದೆ. ಇಲ್ಲಿ ಭಯವಿಲ್ಲದೆ ಮಕ್ಕಳು ತಮಗೆ ಆಸಕ್ತಿಯಿರುವ ಸಂಗೀತ, ನೃತ್ಯ, ರಂಗಕಲೆ, ಕೋಲಾಟ, ನಾಟಕ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳಲು ಉಪಯುಕ್ತವಾದ ವೇದಿಕೆಯಾಗುತ್ತದೆ ಎಂದು ಅಭಿಪ್ರಾಯಿಸಿದರು.

ಅನೇಕ ಮಕ್ಕಳಿಗೆ ವೇದಿಕೆಯಲ್ಲಿ ನಿಂತು ಮಾತನಾಡುವುದಕ್ಕೆ ಭಯ ಹಾಗೂ ಹಿಂಜರಿಕೆ ಇರುತ್ತದೆ. ಅದನ್ನು ಹೋಗಲಾಡಿಸಲು ಇಂತಹ ವಿಶೇಷ ಶಿಬಿರಗಳು ನೆರವಾಗುತ್ತವೆ ಎಂದು ಸಂವಾದದಲ್ಲಿ ಪಾಲ್ಗೊಂಡು ರಂಗಭೂಮಿ ಮತ್ತು ಕಲೆಗಳಲ್ಲಿ ಮಕ್ಕಳು ಹೆಚ್ಚು ಆಸಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಶೂನ್ಯ ನೆರಳು ದಿನವನ್ನು ಅಮೋಘ ವರ್ಷ ಮತ್ತು ತಂಡ, ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಕುತೂಹಲವನ್ನು ಮೂಡಿಸುವ ಪ್ರಯತ್ನವನ್ನು ತೋರಿಸಿದರು. ನಂತರ ಶ್ವಾನಗಳ ಪ್ರದರ್ಶನ, ಅವುಗಳ ಜಾಣ್ಮೆ, ಶಿಸ್ತು, ಚಾಣಾಕ್ಷತೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲಾಯಿತು. ವೇದಿಕೆಯಲ್ಲಿ ಶ್ರೀ ಗುರುಕಲಾ ಶಾಲೆಯ ಅಧ್ಯಕ್ಷರಾದ ಎನ್.ಧನಂಜಯ, ಕಾರ್ಯದರ್ಶಿ ಹೆಚ್.ಎಸ್.ಕವಿತಾ, ಶಿಬಿರದ ನಿರ್ದೇಶಕರಾದ ಅರಸೀಕೆರೆ ಯೋಗಾನಂದ ಹಾಗೂ ನೂರಾರು ಚಿಣ್ಣರು ಭಾಗವಹಿಸಿದ್ದರು.



ಮೈಸೂರಿನ ಕುವೆಂಪುನಗರದಲ್ಲಿ ಆಯೋಜಿಸಿರುವ ಶ್ರೀ ಗುರುಕಲಾ ಶಾಲೆಯ ಪುಟಾಣಿ ಪರ್‌ಪಂಚ ಬೇಸಿಗೆ ಶಿಬಿರದಲ್ಲಿ ಚಲನಚಿತ್ರ ನಟ ಮಂಡ್ಯ ರಮೇಶ್ ಸಂವಾದ ನಡೆಸಿದರು.

ವಾದ್ಯ ಸಂಗೀತ ತರಬೇತಿ

ಮೈಸೂರು, ಏ. 25– ಮೈಸೂರಿನ ಶಕ್ತಿನಗರದ ಶ್ರೀನಿಕೇತನ ಸಂಗೀತ ಸಂಸ್ಥೆ ವತಿಯಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ಕೀಬೋರ್ಡ್, ಮ್ಯಾಂಡೋಲಿನ್ ಮತ್ತು ಗಿಟಾರ್ ವಾದ್ಯ ಸಂಗೀತ ತರಬೇತಿಯನ್ನು ಆರಂಭಿಸಲಾಗಿದೆ. ಹಾಗೂ ಆನ್‌ಲೈನ್ ಸಂಗೀತ ತರಬೇತಿಯು ಸಹ ಲಭ್ಯವಿದೆ. ತರಬೇತಿಯು ವಾರದಲ್ಲಿ ಎರಡು ದಿನ ಸಂಜೆ 6ರಿಂದ 7 ಗಂಟೆಯವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 78924 98367 ಸಂಪರ್ಕಿಸಬಹುದು.

ದಂತ ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು, ಏ. 24– ಮೈಸೂರಿನ ಗ್ಲೋಬಲ್ ಡಿಜಿಟಲ್ ಮಾರ್ಕೆಟಿಂಗ್ ಕಂಪನಿ ಥಿಯರಮ್, ವನ್ಯಜೀವಿ ಸಂರಕ್ಷಣಾ ಪ್ರತಿಷ್ಠಾನದೊಂದಿಗೆ ಗುಂಡ್ಲುಪೇಟೆ ತಾಲೂಕಿನ ಮಂಗಲ ಗ್ರಾಮ – ಬಂಡೀಪುರ ರಾಷ್ಟ್ರೀಯ ಅರಣ್ಯದಲ್ಲಿ ದಂತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿತ್ತು. ವೈದ್ಯರ ತಂಡ ಉಚಿತ ಸಮಾಲೋಚನೆ ಮತ್ತು ತಪಾಸಣೆಗಳನ್ನು ನಡೆಸಿತು. ಮೂಲಭೂತ ಆರೋಗ್ಯ ಸೇವೆಗಳ ಕೊರತೆ ಇರುವ ಗ್ರಾಮಸ್ಥರಿಗಾಗಿ ಶಿಬಿರವನ್ನು ವಿಶೇಷವಾಗಿ ಆಯೋಜಿಸಲಾಗಿತ್ತು. ಸುಮಾರು 300 ಗ್ರಾಮಸ್ಥರು ವೈದ್ಯಕೀಯ ಶಿಬಿರದ ಪ್ರಯೋಜನ ಪಡೆದರು.

ಈ ವೇಳೆ ಸಿಇಒ ಮತ್ತು ಥಿಯರಮ್ ಸಂಸ್ಥಾಪಕ ಜಯ್ ಕುಲಕರ್ಣಿ ಮಾತನಾಡಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವಾಗಿದ್ದು, ಜನರ ಸಹಭಾಗಿತ್ವದ ಮೂಲಕ ಅರಣ್ಯವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಏ. 24–ಮೈಸೂರಿನ ಲಕ್ಷ್ಮಿಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ.27ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮೋಹನ್‌ಕುಮಾರಿಗೆ ಶೇ. 97.16 ಅಂಕ

ಮೈಸೂರು, ಏ. 24– ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಗೋಕುಲಂ ಮೂರನೇ ಹಂತದಲ್ಲಿರುವ ಕೆ ಪುಟ್ಟಸ್ವಾಮಿ ಪಿಯು ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ಎಸ್.ಮೋಹನ್ ಕುಮಾರಿ 583 (97.16) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ–98,ಇಂಗ್ಲಿಷ್‌ನಲ್ಲಿ–91, ಅರ್ಥಶಾಸ್ತ್ರದಲ್ಲಿ–96, ಬಿಸಿನೆಸ್ ಸ್ಟಡೀಸ್–100, ಅಕೌಂಟೆನ್ಸಿ–98, ಕಂಪ್ಯೂಟರ್ ಸೈನ್ಸ್‌ನಲ್ಲಿ–100 ಅಂಕ ಗಳಿಸಿದ್ದಾರೆ. ಈಕೆ ನಗರದ ಗೋಕುಲಂ ನಾಲ್ಕನೇ ಹಂತದ ಮಂಜುನಾಥ್‌ಪುರದ ನಿವಾಸಿ ಬಿ.ಸಿದ್ದರಾಜು, ಪುಷ್ಪ ದಂಪತಿ ಪುತ್ರಿ.



ಕೆ.ಗಗನಶ್ರೀ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ. 24–ಮೈಸೂರಿನ ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕೆ.ಗಗನಶ್ರೀ ವಿಜ್ಞಾನ ವಿಭಾಗದಲ್ಲಿ 553 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಮೈಸೂರಿನ ಬೋಗಾದಿ ನಿವಾಸಿ ಆರ್. ಕುಮಾರ್ ಮತ್ತು ಎಸ್. ಶೋಭ ದಂಪತಿ ಪುತ್ರಿ.

ಗಂಗೋತ್ರಿ ಪಿಯು ಕಾಲೇಜಿಗೆ ಶೇ.100 ಫಲಿತಾಂಶ

ಮೈಸೂರು, ಏ.24– ನಗರದ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪದವಿ ಪೂರ್ವ ಕಾಲೇಜಿಗೆ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದ ಕುನಾಲ್ 583 (ಶೇ.97.16), ಎಸ್.ಬಿಂದು 575 (ಶೇ.95.83) ಹಾಗೂ ಡಿ.ಆರ್.ರುಚಿತಾ 562 (ಶೇ. 93.66) ಅಂಕಗಳನ್ನು ವಿದ್ಯಾರ್ಥಿಗಳು ಗಳಿಸಿದರೆ, ವಿಜ್ಞಾನ ವಿಭಾಗದ ಎಂ.ಲಾಂಚನ 557 (ಶೇ.92.83), ಕೆ.ಪರೀಕ್ಷಿತ್ ಅರಸ್ 539 (ಶೇ.89.83) ಹಾಗೂ ಪಿ.ದರ್ಶನ್ 537 (ಶೇ.89.50) ಅಂಕಗಳನ್ನು ಪಡೆದಿದ್ದಾರೆ.



ಕುನಾಲ್ (97.16%) ಎಸ್.ಬಿಂದು (95.83%) ಡಿ.ಆರ್.ರುಚಿತಾ (93.66%)



ಎಂ.ಲಾಂಚನ (92.83%) ಕೆ.ಪರೀಕ್ಷಿತ್ ಅರಸ್ (89.83%) ಪಿ.ದರ್ಶನ್ (89.50%)

ಅಮಿತ್ ಶಾ ಭೇಟಿ: ಮಿತಿ ಮೀರಿದ ಭದ್ರತೆಗೆ ಸಾರ್ವಜನಿಕರು ಹೈರಾಣ

■ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದ ಆಂಬುಲೆನ್ಸ್; ನರಳಾಡಿದ ರೋಗಿಗಳು ■ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧ ■ ಪರ್ಯಾಯ ಮಾರ್ಗದಲ್ಲಿ ವಾಹನಗಳ ದಟ್ಟಣೆ

ಮೈಸೂರು,ಏ.24(ಎಂಟಿವೈ)– ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸಲು ಮೈಸೂರಿಗೆ ಆಗಮಿಸಿದ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರಿಗೆ ಝೆಡ್ ಪ್ಲಸ್ ಭದ್ರತೆ ಪರಿಣಾಮ ವಿವಿಧ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿ ಆಂಬುಲೆನ್ಸ್‌ಗಳು ಸಿಲುಕಿ ಪರದಾಡಿದ ಘಟನೆ ಜರುಗಿತು.

ಬೆಂಗಳೂರಿಂದ ಖಾಸಗಿ ಹೆಲಿಕಾಪ್ಟರ್‌ನಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಸೋಮವಾರ ಬೆಳಗ್ಗೆ ಆಗಮಿಸಿದ ಕೇಂದ್ರ ಸಚಿವ ಅಮಿತ್ ಶಾ, ರಸ್ತೆ ಮಾರ್ಗವಾಗಿ ಚಾಮುಂಡಿಬೆಟ್ಟಕ್ಕೆ ತೆರಳಿದರು. ಇದರಿಂದ ಮಂಡಕಳ್ಳಿ ವಿಮಾನದ ನಿಲ್ದಾಣದಿಂದ ಗನ್‌ಹೌಸ್‌ವರೆಗೆ ಮೈಸೂರು–ನಂಜನಗೂಡು ರಸ್ತೆಯಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು. ಅಲ್ಲದೇ, ರೇಸ್‌ಕೋರ್ಸ್ ಹಿಂಭಾಗದ ರಸ್ತೆಯಿಂದ ಕುರುಬಾರಹಳ್ಳಿ ವೃತ್ತದ ಮೂಲಕ ಚಾಮುಂಡಿಬೆಟ್ಟವರೆಗೂ ವಾಹನ ಸಂಚಾರ ನಿಷೇಧಿಸಲಾಗಿತ್ತು.

ಅಲ್ಲದೇ ಈ ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳನ್ನು ಪರ್ಯಾಯ ರಸ್ತೆಯಲ್ಲಿ ತೆರಳಲು ಸೂಚಿಸಲಾಗಿತ್ತು. ಇದರಿಂದ ಬೇರೆ ಬೇರೆ ರಸ್ತೆಯಲ್ಲಿ ವಾಹನಗಳ ಸಂಚರಿಸಲು ಮುಂದಾದ ಹಿನ್ನೆಲೆಯಲ್ಲಿ ವಾಹನ ದಟ್ಟಣೆ ಉಂಟಾಗಿ ಕೆಲ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಯಿತು. ಸಾಲುಗಟ್ಟಿ ನಿಂತಿದ್ದ ವಾಹನಗಳಲ್ಲಿದ್ದ ಪ್ರಯಾಣಿಕರು ಸಕಾಲಕ್ಕೆ ತೆರಳಲಾಗದೆ ಪರದಾಡಿದರು.

ಎಲ್ಲೆಲ್ಲಿ ಜಾಮ್: ಕೇಂದ್ರ ಸಚಿವ ಅಮಿತ್ ಶಾ ಆಗಮನದಿಂದಾಗಿ ಗನ್ ಹೌಸ್ ರಸ್ತೆ, ಹಾರ್ಡಿಂಗ್ ವೃತ್ತ, ನಜರ್ ಬಾದ್, ಎಸ್ಪಿ ಕಚೇರಿ ಬಳಿ, ಇಟ್ಟಿಗೆ ಗೂಡು, ಮೃಗಾಲಯದ ರಸ್ತೆ ಮೈಸೂರು–ಬನ್ನೂರು ರಸ್ತೆಯಲ್ಲಿ ನಜರ್‌ಬಾದ್‌ನಿಂದ ಡಿಎಫ್‌ಆರ್‌ಎಲ್‌ವರೆಗೂ ಟ್ರಾಫಿಕ್ ಜಾಮ್ ಉಂಟಾಗಿತ್ತು. ಲಲಿತ ಮಹಲ್ ರಸ್ತೆಯಲ್ಲಿ ಸಂಚರಿಸಬೇಕಾದ ವಾಹನಗಳೆಲ್ಲವೂ ಬನ್ನೂರು ರಸ್ತೆಯಲ್ಲಿ ಸಂಚರಿಸಿದ್ದರಿಂದ ಟ್ರಾಫಿಕ್ ಜಾಮ್ ಹೆಚ್ಚಾಗಿತ್ತು. ಅಲ್ಲದೆ, ಚಾಮರಾಜ ಜೋಡಿ ರಸ್ತೆಯಿಂದ ಹಾರ್ಡಿಂಗ್ ವೃತ್ತದ ಕಡೆ ಹಾಗೂ ಹಾರ್ಡಿಂಗ್ ವೃತ್ತದ ಕಡೆಯಿಂದ ಗನ್‌ಹೌಸ್ ಕಡೆ ಪ್ರಯಾಣಿಸಬೇಕಾದ ವಾಹನಗಳೆಲ್ಲಾ ಎರಡು ಬಾರಿ 20 ನಿಮಿಷಕ್ಕೂ ಹೆಚ್ಚು ಸಮಯ ಸಂಚಾರ ತಡೆ ಹಿಡಿದಿದ್ದರಿಂದ ಟ್ರಾಫಿಕ್ ಜಾಮ್ ಕಿರಿಕಿರಿ ಹೆಚ್ಚಾಗಿತ್ತು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮನದ ಹಿನ್ನೆಲೆಯಲ್ಲಿ ಮೈಸೂರಿನ ಕೆಲ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಆಂಬುಲೆನ್ಸ್ ಸಂಚಾರಕ್ಕೂ ಕುತ್ತು: ಟ್ರಾಫಿಕ್ ಜಾಮ್‌ನಲ್ಲಿ ಕೆಲವು ಆಂಬುಲೆನ್ಸ್‌ಗಳು ಸಿಲುಕಿದ್ದರಿಂದ ಆಸ್ಪತ್ರೆಗೆ ತುರ್ತಾಗಿ ಸಾಗಿಸಬೇಕಾದ ರೋಗಿಗಳ ಸ್ಥಿತಿ ಕುರಿತು ಹಲವರು ಆತಂಕ ವ್ಯಕ್ತಪಡಿಸಿದರು. ಬನ್ನೂರು ರಸ್ತೆಯಲ್ಲಿ ಸಿದ್ಧಾರ್ಥನಗರದಿಂದ ನಜರ್ ಬಾದ್‌ವರೆಗೆ ಮೂರು ಆಂಬುಲೆನ್ಸ್‌ಗಳು ಮುಂದೆ ಸಂಚರಿಸಲಾಗದೇ ತೊಂದರೆಗೆ ಸಿಲುಕಿದ್ದವು. ಮುಂದೆ ಸಾಲುಗಟ್ಟಿ ನಿಂತಿದ್ದ ವಾಹನಗಳ ಚಾಲಕರು ಆಂಬುಲೆನ್ಸ್‌ಗೆ ಜಾಗ ಬಿಡಲು ಪ್ರಯತ್ನಿಸಿದರೂ, ಅದು ಸಾಧ್ಯವಾಗಲಿಲ್ಲ. ರಸ್ತೆ ಎರಡೂ ಬದಿಯಲ್ಲೂ ನೂರಾರು ವಾಹನಗಳು ನಿಂತಿದ್ದರಿಂದ ಆಂಬುಲೆನ್ಸ್‌ಗಳ ಸುಗಮ ಸಂಚಾರಕ್ಕೆ ಸಂಚಕಾರ ಉಂಟಾಗಿತ್ತು. ಚಾಮರಾಜ ಜೋಡಿ ರಸ್ತೆ, ಅಗ್ರಹಾರದ ಕಡೆಯಿಂದ ಬಂದ ನಾಲ್ಕೈದು ಆಂಬುಲೆನ್ಸ್‌ಗಳು ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದ್ದವು.

ಸಾರ್ವಜನಿಕರಿಂದ ಆಕ್ರೋಶ: ಚುನಾವಣಾ ಪ್ರಚಾರಕ್ಕೆ ಬರುವ ಪ್ರಭಾವಿಗಳ ಸುಗಮ ಸಂಚಾರಕ್ಕೆ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸುವುದರೊಂದಿಗೆ ವಾಹನಗಳ ಸಂಚಾರ ಮಾರ್ಗ ಬದಲಿಸಿ ಜನರಿಗೆ ತೊಂದರೆ ನೀಡಲಾಗುತ್ತಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೇವಾಲಯಕ್ಕೆ ಬಂದ ಕೇಂದ್ರ ಸಚಿವರಿಂದಾಗಿ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಿ ಜನರಿಗೆ ತೊಂದರೆ ಕೊಡುವುದು ಎಷ್ಟು ಸರಿ. ಯಾರೇ ವಿಐಪಿಗಳು ಬಂದರೂ ಜನ ಸಂಚಾರ ಹೆಚ್ಚಾಗಿರುವ ರಸ್ತೆಗಳಲ್ಲಿ ಕರೆದೊಯ್ಯದೆ, ಪರ್ಯಾಯ ರಸ್ತೆಗಳಲ್ಲಿ ಕರೆದೊಯ್ಯಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 25 ಏಪ್ರಿಲ್ 2023

ಕೊಡಗಿನ 2 ಕ್ಷೇತ್ರದಲ್ಲಿ 24 ಮಂದಿ ಸ್ಪರ್ಧಾಳು

ಮಡಿಕೇರಿಯಲ್ಲಿ 15, ವಿ.ಪೇಟೆಯಲ್ಲಿ 9 ಮಂದಿ ಸ್ಪರ್ಧೆ

ಮಡಿಕೇರಿ, ಏ.24– ಕೊಡಗು ಜಿಲ್ಲೆಯ 2 ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ 6 ಮಂದಿ ಉಮೇದುವಾರರು ತಮ್ಮ ನಾಮಪತ್ರಗಳನ್ನು ಹಿಂಪಡೆದಿದ್ದಾರೆ. ಹೀಗಾಗಿ ಮಡಿಕೇರಿ ಕ್ಷೇತ್ರದ ಚುನಾವಣಾ ಕಣದಲ್ಲಿ 15 ಮಂದಿ ಉಳಿದುಕೊಂಡಿದ್ದಾರೆ. ಅದರೊಂದಿಗೆ ಕೊಡಗು ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 24 ಮಂದಿ ಸ್ಪರ್ಧಾಳುಗಳು ಮೇ 10ರಂದು ಚುನಾವಣೆ ಎದುರಿಸಲಿದ್ದಾರೆ.

ಮಡಿಕೇರಿ ಕ್ಷೇತ್ರ: ಮಡಿಕೇರಿ ವಿಧಾನಸಭಾ ಕ್ಷೇತ್ರದಿಂದ ಒಟ್ಟು 22 ಮಂದಿ ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ ಸೋಮವಾರಪೇಟೆ ತಾಲೂಕು ಕಿರಗಂದೂರು ಗ್ರಾಮ ನಿವಾಸಿ ಎ.ಎನ್.ಪದ್ಮನಾಭ ಎಂಬವರು ಜನ ಸಂಘ ಪಾರ್ಟಿಯಿಂದ ಸಲ್ಲಿಸಿದ ನಾಮಪತ್ರ ತಿರಸ್ಕೃತವಾಗಿತ್ತು. ಆ ಬಳಿಕ ಚುನಾವಣಾ ಕಣದಲ್ಲಿ 21 ಮಂದಿ ಉಳಿದುಕೊಂಡಿದ್ದರು.

ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಸೋಮವಾರ ಒಟ್ಟು 6 ಮಂದಿ ತಮ್ಮ ಉಮೇದುವಾರಿಕೆಯಿಂದ ಹಿಂದೆ ಸರಿದಿದ್ದಾರೆ.

ವಿರಾಜಪೇಟೆ ವಿಧಾನಸಭಾ ಕ್ಷೇತ್ರ 9 ಮಂದಿ ಸ್ಪರ್ಧಿಗಳು


ಕೆ.ಜಿ. ಬೋಪಯ್ಯ


ಎ.ಎಸ್. ಪೊನ್ನಣ್ಣ


ಮನ್ಸೂರ್ ಅಲಿ


ರವೀಂದ್ರ

ಕೆ.ಜಿ.ಬೋಪಯ್ಯ(ಭಾರತೀಯ ಜನತಾ ಪಾರ್ಟಿ), ಎಂ.ಎ.ನಾಸೀರ್(ಪಕ್ಷೇತರ), ಎ.ಎಸ್.ಪೊನ್ನಣ್ಣ (ರಾಷ್ಟ್ರೀಯ ಕಾಂಗ್ರೆಸ್ ಪಕ್ಷ), ಮನ್ಸೂರ್ ಅಲಿ ಎಂ.ಎ. (ಜನತಾ ದಳ ಜಾತ್ಯಾತೀತ), ಸಿ.ಎಸ್.ರವೀಂದ್ರ (ಆಮ್ ಆದ್ಮಿ ಪಕ್ಷ), ಕೆ.ಎಸ್.ಮನು (ಸರ್ವೋದಯ ಕರ್ನಾಟಕ ಪಕ್ಷ), ದರ್ಶನ್ ಶೌರಿ ಪಿ.ಕೆ. (ಪಕ್ಷೇತರ), ಮಸೂದ್ ಫೌಜ್ದಾರ್ (ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ), ಸಜುವಿ.ಎ. (ಕರ್ನಾಟಕ ರಾಷ್ಟ್ರ ಸಮಿತಿ)

ಮಡಿಕೇರಿ ವಿಧಾನಸಭಾ ಕ್ಷೇತ್ರ 15 ಅಭ್ಯರ್ಥಿಗಳು ಸ್ಪರ್ಧೆ


ಅಪ್ಪಚ್ಚುರಂಜನ್


ಡಾ. ಮಂಥರ್‌ಗೌಡ


ಅಮೀನ್ ಮೋಹಿಸಿನ್


ದಿವಿಲ್‌ಕುಮಾರ್

ಅಮೀನ್ ಮೋಹಿಸಿನ್(ಎಸ್‌ಡಿಪಿಐ), ಮುತ್ತಪ್ಪ ಎನ್.ಎಂ.(ಜನತಾದಳ ಜಾತ್ಯಾತೀತ), ಕೆ.ಬಿ.ರಾಜು (ಆರ್‌ಪಿಐ ಕರ್ನಾಟಕ), ಜಿ.ಜಿ. ಹೇಮಂತ್ ಕುಮಾರ್(ಪಕ್ಷೇತರ), ಅಪ್ಪಚ್ಚುರಂಜನ್ ಎಂ.ಪಿ. (ಭಾರತೀಯ ಜನತಾ ಪಾರ್ಟಿ), ಡಾ.ಮಂಥರ್ ಗೌಡ (ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ), ಎಚ್.ಎಂ. ಸೋಮಪ್ಪ (ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ), ದಿವಿಲ್ ಕುಮಾರ್ ಎ.ಎ. (ಬಹುಜನ ಸಮಾಜ ಪಕ್ಷ), ಎಂ. ಖಲೀಲ್(ಪಕ್ಷೇತರ), ರಶೀದ ಬೇಗಂ(ಇಂಡಿಯನ್ ಮೂವ್‌ಮೆಂಟ್ ಪಾರ್ಟಿ), ಶ್ರೀನಿವಾಸ ರೈ ಬಿ.ಕೆ.(ಕರ್ನಾಟಕ ಪ್ರಜ್ಞಾವಂತ ಜನತಾ ಪಾರ್ಟಿ), ಬೋಪಣ್ಣ ಕೆ.ಪಿ.(ಆಮ್ ಆದ್ಮಿ ಪಾರ್ಟಿ), ಹರೀಶ್ ಆಚಾರ್ಯ (ಪಕ್ಷೇತರ), ಸಜೀರ್ ಮಜೀದ್ ನೆಲಾಟ್ (ಕರ್ನಾಟಕ ರಾಷ್ಟ್ರ ಸಮಿತಿ), ಶೃತಿ ಕೆ.ಪಿ.(ಪಕ್ಷೇತರ).


ಬೋಪಣ್ಣ ಕೆ.ಪಿ

ಎಲ್ಲರೂ ಪಕ್ಷೇತರರಾಗಿ ಗುರುತಿಸಿಕೊಂಡವರಾಗಿದ್ದು, ಮತ್ತೊಂದು ವಿಶೇಷವಾಗಿದೆ. ಸೋಮವಾರಪೇಟೆಯ ಕಲ್ಕಂದೂರು ಗ್ರಾಮದ ಅಶ್ರಫ್, ಮಡಿಕೇರಿ ತಾಲೂಕು ಕುಂದಚೇರಿ ಗ್ರಾಮದ ದರ್ಶನ್ ಶೌರಿ ಪಿ.ಕೆ., ಸುಂಟಿಕೊಪ್ಪದ ಕೆ.ಎ. ಉಸ್ಮಾನ್, ಮಡಿಕೇರಿ ನಗರ ನಿವಾಸಿ ಎಂ. ಮೊಹಮದ್ ಹನೀಫ್, ಗಣಪತಿ ಬೀದಿಯ ಕೆ.ಎ.ಹಾಶಿಮ್, ಮದೆ ಗ್ರಾಮದ ಸಿಂಧು ವೈ.ಎಂ. ಅವರುಗಳು ಕ್ರಮವಾಗಿ ನಾಮಪತ್ರಗಳನ್ನು ಹಿಂಪಡೆದಿದ್ದಾರೆ.

ವಿರಾಜಪೇಟೆ ಕ್ಷೇತ್ರ: ವಿರಾಜಪೇಟೆ ಕ್ಷೇತ್ರಕ್ಕೆ 10 ಮಂದಿಯಿಂದ ಒಟ್ಟು 12 ನಾಮಪತ್ರಗಳು ಸಲ್ಲಿಕೆಯಾಗಿತ್ತು. ಪರಿಶೀಲನೆ ಸಂದರ್ಭ 1 ನಾಮಪತ್ರ ತಿರಸ್ಕೃತವಾಗಿತ್ತು. ಇದೀಗ ಕಣದಲ್ಲಿ 9 ಮಂದಿ ಸ್ಪರ್ಧಾಳುಗಳು ಚುನಾವಣೆಯಲ್ಲಿ ತಮ್ಮ ರಾಜಕೀಯ ಭವಿಷ್ಯ ಕಂಡುಕೊಳ್ಳಲು ಮುಂದಾಗಿದ್ದಾರೆ.

ಕೆಸರಲ್ಲಿ ಸಿಲುಕಿದ್ದ ಹಸು ರಕ್ಷಿಸಿದ ಬಾಲಕ



ಗೋಣಿಕೊಪ್ಪ, ಏ.24– ಕೆಸರಿನಲ್ಲಿ ಸಿಲುಕಿಕೊಂಡಿದ್ದ ಹಸುವನ್ನು 12 ವರ್ಷದ ಬಾಲಕ ರಕ್ಷಿಸಿ ಪ್ರಾಣಿದಯೆ ಮೆರೆದಿದ್ದಾನೆ. ತಿತಿಮತಿ ಸಮೀಪದ ಚೇನಿಹಡ್ಲು ಹಾಡಿ ನಿವಾಸಿ ದಿನೇಶ್ ಅವರ ಪುತ್ರ ಅರ್ಜುನ ಸಾಗರ್ ಹಸುವನ್ನು ರಕ್ಷಿಸಿದ ಬಾಲಕ.



ಸೋಮವಾರ ಮೇಯಲು ಬಿಟ್ಟಿದ್ದ ಸಂದರ್ಭ, ಆಕಸ್ಮಿಕವಾಗಿ ಗದ್ದೆಯಲ್ಲಿರುವ ಕೆಸರಿನಲ್ಲಿ ಸಿಲುಕಿ ಜೀವನ್ಮರಣ ಸ್ಥಿತಿಯಲ್ಲಿ ಹೋರಾಟ ನಡೆಸುತ್ತಿದ್ದ ಹಸುವನ್ನು ಗಮನಿಸಿದ ಬಾಲಕ ತನ್ನ ಸ್ನೇಹಿತರ ಸಹಾಯ ಪಡೆದುಕೊಂಡು ಸುಮಾರು 5 ಗಂಟೆಗಳ ಕಾಲ ಪ್ರಯತ್ನಿಸಿ ಹಸುವನ್ನು ಕೆಸರಿನಿಂದ ಹೊರ ತರುವಲ್ಲಿ ಯಶಸ್ವಿಯಾದ. ಕಾರ್ಯಾಚರಣೆ ಸಂದರ್ಭ ಹಸುವಿನ ಬಾಯಿಗೆ ಹುಲ್ಲು ನೀಡಿ ಹಸಿವು ನೀಗಿಸುವ ಪ್ರಯತ್ನ ನಡೆಸಿ ಸೈ ಎನಿಸಿಕೊಂಡಿದ್ದಾನೆ. ಹಸು ಆರೋಗ್ಯವಾಗಿದೆ.

ತಿತಿಮತಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ವಿಜಯ ಅವರ ಹಸು ಇದಾಗಿದ್ದು, ಹಸುವನ್ನು ಮೇಯಲು ಬಿಟ್ಟು ಚುನಾವಣಾ ಪ್ರಚಾರಕ್ಕೆ ತೆರಳಿದ್ದರು. ಯಾರೂ ಇಲ್ಲದ ಸಮಯದಲ್ಲಿ ಮಕ್ಕಳು ಜೀವ ರಕ್ಷಿಸುವಲ್ಲಿ ಯಶಸ್ವಿಯಾದರು.

ಸೂದನ ಈರಪ್ಪ ಜೆಡಿಎಸ್‌ಗೆ ರಾಜೀನಾಮೆ



ಮಡಿಕೇರಿ, ಏ.24– ಜಾತ್ಯಾತೀತ ಜನತಾದಳದ ಜಿಲ್ಲಾ ವಕ್ತಾರ ಸೂದನ ಎಸ್.ಈರಪ್ಪ ಅವರು ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಳೆದ 25 ವರ್ಷಗಳಿಂದ ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದು, ಇತ್ತೀಚಿನ ದಿನಗಳಲ್ಲಿ ಪಕ್ಷದಲ್ಲಿ ಸಂಘಟನೆಯ ದೌರ್ಬಲ್ಯ, ಗುಂಪುಗಾರಿಕೆ ಹಾಗೂ ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳ ಆಯ್ಕೆಯಲ್ಲಿ ಕಾರ್ಯಕರ್ತರ ಕಡೆಗಣನೆಯಿಂದ ಬೇಸತ್ತು ಪಕ್ಷಕ್ಕೆ ಮತ್ತು ವಕ್ತಾರ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ. ಇನ್ನು ಮುಂದೆ ಪಕ್ಷಾತೀತವಾಗಿ ಸಹಕಾರಿ ಕ್ಷೇತ್ರದಲ್ಲಿ ಸಕ್ರಿಯನಾಗಿರುವುದಾಗಿ ಸ್ಪಷ್ಟಪಡಿಸಿದ್ದಾರೆ. ಜೆಡಿಎಸ್ ರಾಜ್ಯಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವುದಾಗಿ ಹೇಳಿದ್ದಾರೆ.

ಚೆಂಬೆಬೆಳ್ಳೂರಲ್ಲಿ ಶ್ರದ್ಧಾಭಕ್ತಿಯ ಬೋಡ್‌ನಮ್ಮೆ



ಮಡಿಕೇರಿ, ಏ.24– ವಿರಾಜಪೇಟೆಯ ಚೆಂಬೆಬೆಳ್ಳೂರಿನ ವಾರ್ಷಿಕ ಬೋಡ್ ನಮ್ಮೆಯು ಶ್ರದ್ಧಾಭಕ್ತಿಯಿಂದ ನೆರವೇರಿತು. ತಾಲಿಪಾಟ್, ಹುಲಿ ವೇಷಧಾರಿಗಳು, ಬಂಡ್‌ಕಳಿ, ಪಿಲ್ಲ್‌ಭೂತ, ಹೆಣ್ಣಿನ ವೇಷಧಾರಿಗಳ ಕುಣಿತ ಗಮನ ಸೆಳೆಯಿತು. ಪಟ್ಟಣಿ ಹಬ್ಬದೊಂದಿಗೆ ಆರಂಭವಾದ ಬೋಡ್‌ನಮ್ಮೆಯು ಪಣಿಕರ ಡೋಲಿನ ಕೊಟ್ಟು ಹಾಗೂ ಕೊಂಬಿನ ಊದಿದ ನಂತರ ಊರಿನವರು ಸಂಪ್ರದಾಯದಂತೆ ಪಟ್ಟಣಿ ಮುರಿಯಲಾಯಿತು.

ಹಬ್ಬದ ಅಂಗವಾಗಿ ಭದ್ರಕಾಳಿ ದೇವಾಲಯವನ್ನು ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಚೇರುಳಿ ಅಂಬಲದಲ್ಲಿ ಭದ್ರಕಾಳಿಯ ಒಂದು ಮುಡಿ ತೆರೆಕಟ್ಟಿ ಪೂಜಿಸಿ ದೇವರ ನೆಲೆಗೆ ಬಂದು ಕುಣಿಯಲಾಯಿತು. ನಂತರ ಊರಿನ ಮೂರು ಕೇರಿಯಿಂದ ಬೆತ್ತದಿಂದ ಮಾಡಿ ಶೃಂಗರಿಸಿದ ಕೃತಕ ಮೂರು ಕುದುರೆಯೊಂದಿಗೆ ಊರಿನವರು ಅಂಬಲಕ್ಕೆ ಬಂದು ದೇವಾಲಯದಲ್ಲಿ ಸೇರುವ ಮೂಲಕ ಪೂಜಾ ಕೈಂಕರ್ಯವನ್ನು ನೆರವೇರಿಸಿದರು.

ಬೊಳಕಾಟ್, ತೆಂಗಿನಕಾಯಿ ಎಳೆಯುವ ಸ್ಪರ್ಧೆ ನಂತರ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ರಾತ್ರಿ ಊರಿನವರು, ಹರಕೆ ಹೊತ್ತವರು ಮೈಯಲ್ಲೆಲ್ಲ ಬಣ್ಣ ಬಳಿದು ವಿವಿಧ ವೇಷಕಟ್ಟಿ ಮನೆಮನೆಗೆ ತೆರಳಿದರು. ಸಂಜೆ ವೇಷಧಾರಿಗಳು ಅಂಬಲದಲ್ಲಿ ಸೇರಿ ಊರಿನವರೊಂದಿಗೆ ಡೋಲನ್ನು ಕೊಟ್ಟುತ್ತಾ ದೋಳ್‌ಪಾಟ್‌ನೊಂದಿಗೆ ಭದ್ರಕಾಳಿ, ಚಾಮುಂಡಿ ಹಾಗೂ ಮಕ್ಕಾಟ್ ಅಯ್ಯಪ್ಪ ಮೈಗೆ ಬಂದವರು ದೇವರ ಕಡತಲೆಯನ್ನು ಜಪಿಸುತ್ತ ಭದ್ರಕಾಳಿ ದೇವಾಲಯದೆಡೆಗೆ ನಡೆದರೆ, ಹಲವು ವೇಷಧಾರಿಗಳ ತಂಡ ಡೋಲಿನ ಕೊಟ್ಟಿಗೆ ಹೆಜ್ಜೆ ಹಾಕಿ ಕುಣಿಯುತ್ತಾ ದೇವಾಲಯದೊಳಕ್ಕೆ ಪ್ರವೇಶಿಸಿ ದೇವರ ಗರ್ಭಗುಡಿಗೆ ಪ್ರದಕ್ಷಿಣೆ ಹಾಕಿದರು.

ಪಾಲೇಮಾಡುವಿನಲ್ಲಿ ಅಹೋರಾತ್ರಿ ಹೋರಾಟ 30ನೇ ದಿನಕ್ಕೆ

ಬೇಡಿಕೆ ಈಡೇರಿಸದಿದ್ದರೆ ಚುನಾವಣಾ ಬಹಿಷ್ಕಾರದ ಎಚ್ಚರಿಕೆ



ಸಿದ್ದಾಪುರ, ಏ.24– ನಿವೇಶನ, ಮೂಲಭೂತ ಸೌಕರ್ಯ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಪಾಲೇಮಾಡು ನಿವಾಸಿಗಳು ನಡೆಸುತ್ತಿರುವ ಅಹೋರಾತ್ರಿ ಹೋರಾಟ 30ನೇ ದಿನಕ್ಕೆ ಕಾಲಿಟ್ಟಿದೆ

ಮಡಿಕೇರಿ ತಾಲೂಕಿನ ಹೊದ್ದೂರು ಗ್ರಾಪಂ ವ್ಯಾಪ್ತಿಯ ಪಾಲೇಮಾಡು ಅಂಗನವಾಡಿ ಕೇಂದ್ರದ ಸಮೀಪದಲ್ಲಿ ತಾತ್ಕಾಲಿಕ ಪ್ಲಾಸ್ಟಿಕ್ ಟೆಂಟ್ ಒಂದನ್ನು ನಿರ್ಮಿಸಿ ಹೋರಾಟ ನಡೆಸುತ್ತಿರುವ ನಿವಾಸಿಗಳು ಬೇಡಿಕೆಗಳನ್ನು ಈಡೇರಿಸದಿದ್ದರೆ 2023ರ ವಿಧಾನಸಭಾ ಚುನಾವಣೆ ಬಹಿಷ್ಕರಿಸುವುದಾಗಿ ಎಚ್ಚರಿಸಿದ್ದಾರೆ.

ಪಾಲಿಮಾಡು ಹೋರಾಟ ಸಮಿತಿ ಆನಂದ ಮಾಧ್ಯಮದೊಂದಿಗೆ ಮಾತನಾಡಿ, ರಾಜ್ಯ ಸರ್ಕಾರವು ಉದ್ಯಮಿಗಳಿಗೆ ನೂರಾರು ಎಕರೆ ಸರಕಾರಿ ಜಾಗವನ್ನು ಕಬಳಿಸಿ ಸ್ವಾಧೀನ ಪಡಿಸಿಕೊಂಡಿರುವ ಭೂ ಮಾಲೀಕರಿಗೆ 30 ವರ್ಷ ಗುತ್ತಿಗೆ ಆಧಾರದಲ್ಲಿ ಭೂಮಿ ನೀಡಲು ಮುಂದಾಗಿದ್ದು, ಬಡವರು ತಲೆಯ ಮೇಲೆ ಒಂದು ಸೂರಿಗಾಗಿ 94, 94ಸಿ ಯಡಿ ಅರ್ಜಿ ಸಲ್ಲಿಸಿ ವರ್ಷಗಟ್ಟಲೆ ಅಲೆದಾಡಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಅಲ್ಲದೇ 53, 57, ನಮೂನೆಯಲ್ಲಿ ಅರ್ಜಿ ಸಲ್ಲಿಸಿದರೂ ಅಕ್ರಮ ಸಕ್ರಮದಡಿ, ಅರ್ಜಿ ತಿರಸ್ಕೃತವಾಗುತ್ತಿರುವುದು ಕಂಡು ಬರುತ್ತಿದೆ. ಸರ್ಕಾರವು ಬಡವರಿಗೊಂದು, ಭೂ ಕಬಳಿಕೆಯವರಿಗೊಂದು ನ್ಯಾಯ ಕೊಡುತ್ತಿದ್ದು, ಇದು ಸರಕಾರದ ಮಲತಾಯಿ ಧೋರಣೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾನ್ಶಿರಾಂ ನಗರದಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳು ಶೇ 65 ರಷ್ಟಿದ್ದು, ಸಮಾಜ ಕಲ್ಯಾಣ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಅಂಬೇಡ್ಕರ್ ಭವನ, ಕಾಂಕ್ರೀಟ್ ರಸ್ತೆ, ಚರಂಡಿ ಸೇರಿದಂತೆ ಅಭಿವೃದ್ಧಿ ಕೆಲಸಕ್ಕೆ ಅನುದಾನ ವಿನಿಯೋಗಿಸಬೇಕು. ಇಲ್ಲದಿದ್ದಲ್ಲಿ 2023 ರ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಪಾಲೇಮಾಡು ನಿವಾಸಿಗಳು ಜಿಲ್ಲಾಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಿದ್ದರು. ಆದರೆ ಜಿಲ್ಲಾಡಳಿತದಿಂದ ಯಾವುದೇ ಸ್ಪಂದನೆ ಲಭಿಸಿಲ್ಲ ಎಂದು ಆರೋಪಿಸಿದ ಅವರು, ಕೂಲಿ ಕೆಲಸ ಮಾಡಿ ಜೀವನ ನಡೆಸುತ್ತಿರುವ ಕುಟುಂಬಗಳು ಕಳೆದ 30 ದಿನಗಳಿಂದ ಮಕ್ಕಳು ಮಹಿಳೆಯರು ಸೇರಿದಂತೆ ನಿವಾಸಿಗಳು ಅಹೋರಾತ್ರಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸುತ್ತಿದ್ದಾರೆ.

ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಬಂದು ನಮ್ಮ ಬೇಡಿಕೆ ಈಡೇರಿಸುವ ತನಕ ಹೋರಾಟ ಮುಂದುವರೆಯಲಿದ್ದು ಬೇಡಿಕೆ ಈಡೇರದಿದ್ದಲ್ಲಿ ಚುನಾವಣೆ ಬಹಿಷ್ಕಾರ ಮಾಡುವುದಾಗಿ ಎಚ್ಚರಿಸಿದ್ದಾರೆ. ಈ ಸಂದರ್ಭ ಪ್ರಮುಖರಾದ ಆನಂದ, ಧನಂಜಯ, ದನು, ಶೀಬಾ, ಮೀನಾ, ರಾಜಮ್ಮ, ಮಮ್ಮುಣಿ, ಸುರೇಶ, ವೀಣಾ, ರಾಜ ಸೇರಿದಂತೆ ಮತ್ತು ಇತರರು ಹಾಜರಿದ್ದರು.

ಜಿಲ್ಲೆಯ ನಾಲ್ಕು ಕ್ಷೇತ್ರದಲ್ಲಿ 61 ಮಂದಿ ಹಣಾಹಣಿ

ಚಾ.ನಗರ 15, ಗುಂಡ್ಲುಪೇಟೆ 15, ಹನೂರು 18, ಕೊಳ್ಳೇಗಾಲದಲ್ಲಿ 13 ಅಭ್ಯರ್ಥಿಗಳು ಸ್ಪರ್ಧೆ

ಚಾಮರಾಜನಗರ, ಏ.24– ವಿಧಾನಸಭಾ ಚುನಾವಣೆಗೆ ಸಲ್ಲಿಕೆಯಾಗಿದ್ದ ನಾಮಪತ್ರಗಳನ್ನು ಹಿಂದಕ್ಕೆ ಪಡೆಯುವ ಅವಧಿ ಮುಕ್ತಾಯವಾಗಿದ್ದು, ಚಾಮರಾಜನಗರದಲ್ಲಿ ಎರಡು, ಹನೂರಿನಲ್ಲಿ ಏಳು ಹಾಗೂ ಕೊಳ್ಳೇಗಾಲದಲ್ಲಿ ಮೂರು ಸೇರಿದಂತೆ ಒಟ್ಟು 12 ಮಂದಿ ನಾಮಪತ್ರಗಳನ್ನು ಹಿಂಪಡೆದಿದ್ದು, ಹನೂರು ಕ್ಷೇತ್ರದಲ್ಲಿ 18, ಕೊಳ್ಳೇಗಾಲದಲ್ಲಿ 13, ಚಾಮರಾಜನಗರ ಹಾಗೂ ಗುಂಡ್ಲುಪೇಟೆಯಲ್ಲಿ ತಲಾ 15 ಮಂದಿ ಸೇರಿದಂತೆ ಜಿಲ್ಲೆಯ 4 ಕ್ಷೇತ್ರಗಳಿಗೆ ಒಟ್ಟು 61 ಮಂದಿ ಅಂತಿಮ ಕಣದಲ್ಲಿದ್ದಾರೆ.

ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದ ನವನೀತ್ ಗೌಡ, ಎನ್. ಕೃಷ್ಣಮೂರ್ತಿ ಅವರು ತಮ್ಮ ಉಮೇದುವಾರಿಕೆ ಹಿಂದಕ್ಕೆ ಪಡೆದಿದ್ದಾರೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಓಲೆ ಮಹಾದೇವ, ಬಹುಜನ ಸಮಾಜ ಪಕ್ಷದಿಂದ ನಾಮಪತ್ರ ಸಲ್ಲಿಸಿದ್ದ ರೇಖಾ ಕಮಲ್ ಅವರು ತಮ್ಮ ಉಮೇದುವಾರಿಕೆ ಹಿಂಪಡೆದಿದ್ದಾರೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದ ವೈಆರ್. ವಿಜಯ ಉಪ್ಪಾರ, ಚೇತನ. ವಿ ಅವರು ತಮ್ಮ ಉಮೇದುವಾರಿಕೆ ಹಿಂಪಡೆದಿದ್ದಾರೆ.

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದ ಶೇಖರ್‌ರಾಜ್. ಬಿ.ಸಿ, ಎಂ.ಶಾಂತಪ್ಪ, ಅವರು ತಮ್ಮ ಉಮೇದುವಾರಿಕೆ ಹಿಂಪಡೆದಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಗುಂಡ್ಲುಪೇಟೆಯಲ್ಲಿ ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ಹಾಗೂ ಕೊಳ್ಳೇಗಾಲ ಮೀಸಲು ಕ್ಷೇತ್ರದಿಂದ ಕಿನಕಹಳ್ಳಿ ರಾಚಯ್ಯ ಅವರಿಗೆ ಬಿಜೆಪಿ ಟಿಕೆಟ್ ಕೈತಪ್ಪಿದ್ದರಿಂದ ಬಂಡಾಯವಾಗಿ ಸ್ಪರ್ಧಿಸಿದ್ದಾರೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ (13):


ಎನ್. ಮಹೇಶ್


ಎ.ಆರ್.ಕೃಷ್ಣಮೂರ್ತಿ

 ಬಿ. ಪುಟ್ಟಸ್ವಾಮಿ

ಎ.ಆರ್. ಕೃಷ್ಣಮೂರ್ತಿ (ಕಾಂಗ್ರೆಸ್), ಎನ್. ಮಹೇಶ್ (ಬಿಜೆಪಿ), ಬಿ.ಪುಟ್ಟಸ್ವಾಮಿ (ಜೆಡಿಎಸ್), ಕೆಂಪರಾಜು.ವಿ (ಆಮ್ ಆದ್ಮಿ ಪಕ್ಷ), ನಿಂಗರಾಜ್.ಜಿ. (ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವ), ನಿಂಗರಾಜು.ಎಸ್. (ಕರ್ನಾಟಕ ಜನತಾ ಪಕ್ಷ), ಎನ್. ರವಿಕುಮಾರ್ (ಕರ್ನಾಟಕ ರಾಷ್ಟ್ರ ಸಮಿತಿ), ವಿ. ವಿನಯ್‌ಕುಮಾರ್ (ಉತ್ತಮ ಪ್ರಜಾಕೀಯ ಪಾರ್ಟಿ), ವಿನೋದ್.ಎಸ್. (ಭಾರತೀಯ ಬೆಳಕು ಪಾರ್ಟಿ), ಕಂದಳ್ಳಿ ಮಹೇಶ್, ಬಿ.ರಾಚಯ್ಯ ಕಿನಕಹಳ್ಳಿ, ರಾಜು.ಕೆ. ರಾಜೇಶ್.ಎಂ. (ಪಕ್ಷೇತರ).

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ (15):


ನಿರಂಜನ್‌ಕುಮಾರ್


ಗಣೇಶ್‌ಪ್ರಸಾದ್

 ಮಂಜುನಾಥ್

ಎಚ್.ಎಂ. ಗಣೇಶ್ ಪ್ರಸಾದ್ (ಕಾಂಗ್ರೆಸ್), ಸಿ.ಎಸ್. ನಿರಂಜನ್ ಕುಮಾರ್ (ಬಿಜೆಪಿ), ಮಂಜುನಾಥ. ಕೆ.ಎಸ್ (ಜೆಡಿಎಸ್), ಡಿ. ಗೋವಿಂದರಾಜು (ಬಿಎಸ್‌ಪಿ), ಮಹದೇವಪ್ರಸಾದ್ (ಆಮ್ ಆದ್ಮಿ ಪಾರ್ಟಿ), ಎನ್. ಅಂಬರೀಶ್ (ಕರ್ನಾಟಕ ಜನತಾ ಪಕ್ಷ), ಗಿರೀಶ್.ಕೆ (ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ), ಕೆ. ಬಸವಶೆಟ್ಟಿ (ಭಾರತೀಯ ಬೆಳಕು ಪಾರ್ಟಿ), ಎಂ.ಪಿ.ಸುನೀಲ್, ಜಯಶ್ರೀ, ಟಿಪ್ಪು ಸುಲ್ತಾನ್. ಎನ್.ಎಸ್, ಎಚ್.ಎಸ್. ತೋಂಟದಾರ್ಯ ಸ್ವಾಮಿ, ಪ್ರತಾಪ್. ಎಂ, ಮಹೇಶ್, ಸಿದ್ದರಾಜು. ಎಚ್.ಎಸ್. (ಪಕ್ಷೇತರ)

ಹನೂರು ವಿಧಾನಸಭಾ ಕ್ಷೇತ್ರ (18):


ಆರ್. ನರೇಂದ್ರ


ಡಾ. ಪ್ರೀತನ್


ಮಂಜುನಾಥ್

ಆರ್. ನರೇಂದ್ರ(ಕಾಂಗ್ರೆಸ್), ಡಾ. ಪ್ರೀತನ್ ಕೆಎನ್. (ಬಿಜೆಪಿ), ಎಂ.ಆರ್. ಮಂಜುನಾಥ್ (ಜೆಡಿಎಸ್), ಮಾದೇಶ.ಎಂ (ಬಿಎಸ್‌ಪಿ), ಹರೀಶ್.ಕೆ (ಆಮ್ ಆದ್ಮಿ ಪಾರ್ಟಿ), ಟಿ. ಜಾನ್ ಪೀಟರ್ (ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ), ಎನ್. ಪ್ರದೀಪ್‌ಕುಮಾರ್ (ಉತ್ತಮ ಪ್ರಜಾಕೀಯ ಪಾರ್ಟಿ), ಜಿ. ಮುರುಗೇಶನ್ (ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ)), ಡಿ. ಶ್ರೀಕಂಠಸ್ವಾಮಿ (ಸರ್ವೋದಯ ಕರ್ನಾಟಕ ಪಕ್ಷ), ಸಿದ್ದಪ್ಪ ಆರ್. (ಕಂಟ್ರಿ ಸಿಟಿಜನ್ ಪಾರ್ಟಿ), ಸುರೇಶ.ಎಂ (ಕರ್ನಾಟಕ ರಾಷ್ಟ್ರ ಸಮಿತಿ), ಎಂ. ನಾಗರಾಜು, ಪ್ರದೀಪ್ ಕುಮಾರ್.ಎಮ್., ಮುಜಮಿಲ್ ಪಾಷ, ಟಿ.ಮುತ್ತುರಾಜು, ರಾಜಶೇಖರ್, ಸಿ. ಸಿದ್ದಾರ್ಥನ್, ಸೆಲ್ವರಾಜ್.ಎಸ್. (ಪಕ್ಷೇತರ).

ಚಾಮರಾಜನಗರ ವಿಧಾನಸಭಾ ಕ್ಷೇತ್ರ (15)



ಸಿ. ಪುಟ್ಟರಂಗಶೆಟ್ಟಿ


ವಿ. ಸೋಮಣ್ಣ


ವಾಟಾಳ್‌ನಾಗರಾಜ್


ಮಹೇಶ್ ಆರ್


ಮಲ್ಲಿಕಾರ್ಜುನಸ್ವಾಮಿ


ಗುರುಪ್ರಸಾದ್

ಸಿ. ಪುಟ್ಟರಂಗಶೆಟ್ಟಿ (ಕಾಂಗ್ರೆಸ್), ವಿ. ಸೋಮಣ್ಣ (ಬಿಜೆಪಿ), ಮಲ್ಲಿಕಾರ್ಜುನ ಸ್ವಾಮಿ.ಎ.ಎಂ. (ಜೆಡಿಎಸ್), ಮಹೇಶ.ಆರ್. (ಬಿಎಸ್‌ಪಿ), ವಾಟಾಳ್ ನಾಗರಾಜ್ (ಕನ್ನಡ ಚಳವಳಿ ವಾಟಾಳ್ ಪಕ್ಷ), ಡಾ. ಎನ್. ಗುರುಪ್ರಸಾದ್ (ಆಮ್ ಆದ್ಮಿ ಪಾರ್ಟಿ), ಅಭಿಲಾಷ್.ಕೆ. (ಉತ್ತಮ ಪ್ರಜಾಕೀಯ ಪಾರ್ಟಿ), ಜಿ.ಎಂ. ಗಾಡ್ಕರ್ (ಸಮಾಜವಾದಿ ಜನತಾ ಪಾರ್ಟಿ), ಪಿ. ಗುರುಸಿದ್ದಪ್ಪ (ಭಾರತೀಯ ಬೆಳಕು ಪಾರ್ಟಿ) ಎಂ.ನಾಗೇಂದ್ರ ಬಾಬು (ಕರ್ನಾಟಕ ಜನತಾ ಪಕ್ಷ), ಪ್ರಸನ್ನ ಕುಮಾರ್.ಬಿ (ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ), ಎಚ್.ಸಿ. ಮಹೇಶ್ ಕುಮಾರ್ (ಸರ್ವೋದಯ ಕರ್ನಾಟಕ ಪಕ್ಷ), ಸಿ.ಎಲ್. ಶ್ರೀನಿವಾಸ (ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ), ನಾಗೇಶ.ಕೆ, ನಿಂಗರಾಜು (ಪಕ್ಷೇತರ).

ಬಿಜೆಪಿ ಅಭ್ಯರ್ಥಿ ಸೋಮಣ್ಣ ಪರ ಪತ್ನಿ ಶೈಲಜಾ ಮತಯಾಚನೆ

50ಕ್ಕೂ ಹೆಚ್ಚು ಕಾಂಗ್ರೆಸ್ ಮುಖಂಡರು ಬಿಜೆಪಿ ಸೇರ್ಪಡೆ



ಚಾಮರಾಜನಗರ, ಏ.24– ಚಾಮರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಪರ ಪತ್ನಿ ಶೈಲಜಾ ಅವರು ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ಪ್ರಚಾರದಲ್ಲಿ ಭಾಗಿಯಾಗಿ, 50ಕ್ಕೂ ಹೆಚ್ಚು ಕಾಂಗ್ರೆಸ್ ಮುಖಂಡರನ್ನು ಬಿಜೆಪಿಗೆ ಸೇರ್ಪಡೆ ಮಾಡಿಕೊಂಡರು.

ತಾಲೂಕಿನ ವೆಂಕಟಯ್ಯನಛತ್ರದಲ್ಲಿರುವ ಎಚ್.ಎಸ್. ಬಸವರಾಜು ಅವರ ತೋಟದಲ್ಲಿ ಕೋಡಿಉಗನೆ, ಬಸವಾಪುರ, ಬೇವಿನತಾಳಪುರ ಗ್ರಾಮಗಳ 50ಕ್ಕೂ ಹೆಚ್ಚು ಕಾಂಗ್ರೆಸ್ ಮುಖಂಡರಿಗೆ ಬಿಜೆಪಿ ಪಕ್ಷದ ಶಲ್ಯ ಹಾಕಿ ಸ್ವಾಗತ ಕೋರಿದರು.

ಬಳಿಕ ಮಾತನಾಡಿದ ಶೈಲಜಾ ಸೋಮಣ್ಣ ಅವರು, ವರುಣ ಮತ್ತು ಚಾ.ನಗರ ವಿಧಾನಸಭಾ ಕ್ಷೇತ್ರಗಳೆರಡಲ್ಲಿಯೂ ವರಿಷ್ಠರು ಸ್ಪರ್ಧೆ ಮಾಡುವಂತೆ ಸೂಚನೆ ನೀಡಿದ್ದಾರೆ. ಹೀಗಾಗಿ ಅವರು ಕಡಿಮೆ ಅವಧಿಯಲ್ಲಿ ತಮ್ಮೆಲ್ಲರನ್ನು ಭೇಟಿ ಮಾಡಲು ಕಷ್ಟವಾಗುತ್ತಿದೆ. ಹೀಗಾಗಿ ಅವರ ಪತ್ನಿಯಾಗಿ ನಿಮ್ಮೆಲ್ಲರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಜೊತೆಗೆ ಬಿಜೆಪಿಗೆ ಮತ ನೀಡಿ, ಗೆಲ್ಲಿಸಿ, ಕ್ಷೇತ್ರದ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಿ ಎಂದು ಮನವಿ ಮಾಡಿಕೊಳ್ಳಲು ಬಂದಿದ್ದೇನೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ 9 ವರ್ಷಗಳ ಆಡಳಿತ ಹಾಗೂ ಬಿಜೆಪಿ ಸರ್ಕಾರದ ಸಾಧನೆಯನ್ನು ತಾವೆಲ್ಲರೂ ನೋಡಿದ್ದೀರಿ. ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷ ಯಾವ ರೀತಿ ನಡೆಸಿಕೊಂಡಿದೆ ಎಂಬುದನ್ನು ನಮ್ಮ ಮುಖಂಡರು ಹೇಳಿದ್ದಾರೆ. ಹೀಗಾಗಿ ತಾವೆಲ್ಲರು ಒಗ್ಗಟ್ಟಿನಿಂದ ಬಿಜೆಪಿಯನ್ನು ಗೆಲ್ಲಿಸಿ ಅಭಿವೃದ್ಧಿಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ರಾಮಚಂದ್ರ ಮಾತನಾಡಿ, ಕಾಂಗ್ರೆಸ್ ಪಕ್ಷದವರು ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಅನೇಕ ಸುಳ್ಳುಗಳನ್ನು ಹೇಳುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ವಿಶ್ವವೇ ಮೆಚ್ಚುವಂತಹ ನಾಯಕರು. ಅಂಬೇಡ್ಕರ್ ಅವರ ಆಶಯದಂತೆ ಸರ್ಕಾರ ನಡೆಸುತ್ತಿದ್ದಾರೆ. ಬಿಜೆಪಿ ಬಗೆಗಿನ ಅಪಪ್ರಚಾರಕ್ಕೆ ಯಾರೂ ಕಿವಿಗೊಡಬೇಡಿ, ಸೋಮಣ್ಣ ಅವರಿಗೆ ಮತ ನೀಡಿ, ಜಿಲ್ಲೆಯ ಅಭಿವೃದ್ಧಿಗೆ ಕೈ ಜೋಡಿಸಿ ಎಂದು ಮನವಿ ಮಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್ ಮಾತನಾಡಿ, ಬಿಜೆಪಿ ಸರ್ಕಾರದ ಸಾಧನೆ ಮತ್ತು ಪಕ್ಷದ ಸಿದ್ಧಾಂತಗಳನ್ನು ಒಪ್ಪಿ ಬಂದಿರುವ ತಮ್ಮೆಲ್ಲರಿಗೂ ನಾನು ಸ್ವಾಗತ ಕೋರುತ್ತೇನೆ ಎಂದರು.

ಕೋಡಿಉಗನೆ ಗ್ರಾಮದ ಮುಖಂಡರಾದ ಮಹದೇವಸ್ವಾಮಿ, ಪಿ. ಮಹೇಶ್, ಎನ್. ಮಹೇಶ್, ಚನ್ನಕೇಶವಮೂರ್ತಿ, ನಂದೀಶ್, ಮಹೇಶಕಾಡು, ಶಿವರಾಮು ಎಂ. ಚನ್ನಂಜಪ್ಪ ಮಹೇಶ್, ನಾಗಭೂಷಣ್, ಮಹದೇವ್, ಕೃಷ್ಣಸ್ವಾಮಿ, ಲೋಕೇಶ್, ಬಸವಾಪುರ ಮುತ್ತುರಾಜು, ಆರ್.ಮಹೇಶ್, ಮಹದೇವಯ್ಯ, ಲಿಂಗರಾಜು ಸೇರಿದಂತೆ ಅನೇಕರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಮುಖಂಡರಾದ ಡಾ. ಎಆರ್.ಬಾಬು, ಚಾಮುಲ್ ನಿರ್ದೇಶಕ ಎಚ್.ಎಸ್. ಬಸವರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸುಂದ್ರಪ್ಪ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಚಂದ್ರಶೇಖರ್, ಶಕ್ತಿ ಕೇಂದ್ರ ಅಧ್ಯಕ್ಷ ಚೆನ್ನಂಜಪ್ಪ, ಕುಮಾರ್, ಶಮಿತ್ ಕುಮಾರ್, ಚಿನ್ನಸ್ವಾಮಿ, ಕಂಭಳೇಶ್ ಹಾಜರಿದ್ದರು.

ಬಿಜೆಪಿಯಿಂದ ಪರಿಶಿಷ್ಟರಿಗೆ ಯಾವುದೇ ಉಪಯೋಗವಿಲ್ಲ

ಮಾಜಿ ಸಂಸದ ಎ. ಸಿದ್ದರಾಜು ಆರೋಪ




ಗುಂಡ್ಲುಪೇಟೆ, ಏ.24– ಬಿಜೆಪಿ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟ ವರ್ಗದ ಜನರಿಗೆ ಯಾವುದೇ ಉಪಯೋಗ ಆಗಿಲ್ಲ ಎಂದು ಮಾಜಿ ಸಂಸದ ಎ.ಸಿದ್ದರಾಜು ಆರೋಪಿಸಿದರು.

ಪಟ್ಟಣದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಎಸ್‌ಸಿ ವರ್ಗದ ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತಾಲೂಕಿನಲ್ಲಿ ಕಳೆದ ಐದು ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಹಿಂದುಳಿದ ಹಾಗೂ ಪರಿಶಿಷ್ಟ ವರ್ಗದ ಜನರಿಗೆ ಯಾವುದೇ ಉಪಯೋಗ ಆಗಿಲ್ಲ. ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲರೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತನೀಡಿ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ಮಾಡಿದ್ದರಿಂದ ಬಡವರ ಬದುಕು ನರಕವಾಗಿದೆ. ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗ್ಯಾರೆಂಟಿ ಕಾರ್ಡ್‌ನಲ್ಲಿ ಹೇಳಿರುವ ಎಲ್ಲಾ ಭರವಸೆಗಳನ್ನು ಈಡೇರಿಸಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡಪ್ರಸಾದ್, ನಂಜನಗೂಡು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವ, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮುನಿರಾಜು, ರಾಜಶೇಖರ್, ಎಸ್.ಆರ್. ಎಸ್.ರಾಜಶೇಖರ್, ಪುರಸಭೆ ಸದಸ್ಯ ರಮೇಶ್ ಸೇರಿದಂತೆ ಹಲವರು ಇದ್ದರು.


ಇಂದು ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆ



ಚಾಮರಾಜನಗರ, ಏ.24– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಏ.25ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಸರಳವಾಗಿ ಹಾಗೂ ಸಾಂಕೇತಿಕವಾಗಿ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಗುರುಲಿಂಗಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ರಾಹುಲ್ ಗಾಂಧಿ ಲಿಂಗಾಯತ ಮಠಗಳ ಭೇಟಿ ಕೇವಲ ಶೋ-ಆಫ್




ದಾವಣಗೆರೆ: ಕೇವಲ ತೋರಿಕೆಗಷ್ಟೇ ಲಿಂಗಾಯತ ಸಮುದಾಯದ ಮಠಗಳಿಗೆ ಭೇಟಿ ನೀಡಿದ್ದಕ್ಕಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವೆ ಸ್ಮೃತಿ ಇರಾನಿ ಸೇರಿದಂತೆ ಹಲವು ಬಿಜೆಪಿ ರಾಷ್ಟ್ರೀಯ ನಾಯಕರು ಸ್ಟಾರ್ ಪ್ರಚಾರಕರಾಗಿ ಕರ್ನಾಟಕಕ್ಕೆ ಬರಲಿದ್ದಾರೆ ಎಂದರು.

2018ರ ವಿಧಾನಸಭೆ ಚುನಾವಣೆಗಿಂತ ಈ ಬಾರಿ ಬಿಜೆಪಿ ಹೆಚ್ಚು ಮತ ಗಳಿಸಲಿದೆ. ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮತ್ತು ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದಕ್ಕಾಗಿ ಕಾಂಗ್ರೆಸ್ ನಾಯಕರಿಗೆ ಕೃತಜ್ಞತೆ ಸಲ್ಲಿಸಲಾಗುವುದು. ಇದು ಬಿಜೆಪಿಗೆ ಪ್ಲಸ್ ಪಾಯಿಂಟ್ ಆಗಲಿದೆ. ಶೆಟ್ಟರ್ ಮತ್ತು ಸವದಿ ವಿರುದ್ಧ ಮತದಾರರು ಇದ್ದಾರೆ. ಅಧಿಕಾರ ಅನುಭವಿಸಿ ಕಾಂಗ್ರೆಸ್ ಸೇರಿದ್ದಾರೆ. ಇದನ್ನು ಜನ ಒಪ್ಪಿಕೊಳ್ಳುವುದಿಲ್ಲ ಎಂದರು. ನಾನು ಮುಖ್ಯಮಂತ್ರಿಯಾಗುತ್ತೇನೆ ಎಂದು ಊಹಿಸಿರಲಿಲ್ಲ. ಆದರೆ, ಹೈಕಮಾಂಡ್ ನಿರ್ಧರಿಸಿದೆ. ಅದರಂತೆ ಈಗಲೂ ಮುಖ್ಯಮಂತ್ರಿ ಯಾರಾಗಬೇಕೆಂದು ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ. ಎಲ್ಲವನ್ನೂ ದೆಹಲಿಯ ನಾಯಕರು ಗಮನಿಸುತ್ತಿದ್ದಾರೆ ಎಂದು ಬೊಮ್ಮಾಯಿ ಹೇಳಿದರು. ಬಿಜೆಪಿಯವರು ಭಾವನೆಗಳ ಜೊತೆ ಆಟವಾಡುತ್ತಿದ್ದಾರೆ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ನಾಯಕರೇ ಲಿಂಗಾಯತ ವಿವಾದಕ್ಕೆ ನಾಂದಿ ಹಾಡಿದ್ದಾರೆ. ಶಿವಕುಮಾರ್‌ಗೆ ಹೇಳಿದ್ದನ್ನು ಬಿಟ್ಟು ಬೇರೊಂದು ಕೆಲಸ ಮಾಡುವ ಅಭ್ಯಾಸವಿದೆ. ದೇವರು ಯಾರನ್ನು ಆಶೀರ್ವದಿಸುತ್ತಾರೆಂದು ಕಾದು ನೋಡೋಣ ಎಂದು ತಿಳಿಸಿದರು. ಲಿಂಗಾಯತ ಸಿಎಂ ಕುರಿತ ತಮ್ಮ ಹೇಳಿಕೆಯನ್ನು ತಿರುಚಲಾಗಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ತಿರುಗೇಟು ನೀಡಿದ ಬೊಮ್ಮಾಯಿ, ಜನರು ಮೂರ್ಖರಲ್ಲ, ಎಲ್ಲವನ್ನೂ ಗಮನಿಸುತ್ತಿದ್ದಾರೆ ಎಂದರು.

ದೇಶದ ಪ್ರಸಿದ್ಧ ಉದ್ಯಮಿ ರತನ್ ಟಾಟಾಗೆ ಆಸ್ಟ್ರೇಲಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿ ಪ್ರದಾನ

ನವದೆಹಲಿ: ಭಾರತದ ಕೈಗಾರಿಕೋದ್ಯಮಿ ರತನ್ ಟಾಟಾ ಅವರು ಆಸ್ಟ್ರೇಲಿಯಾದ ಅತ್ಯುನ್ನತ ನಾಗರಿಕ ಗೌರವವಾದ ಆರ್ಡರ್ ಆಫ್ ಆಸ್ಟ್ರೇಲಿಯಾವನ್ನು ಸ್ವೀಕರಿಸಿದರು. ಭಾರತದಲ್ಲಿರುವ ಆಸ್ಟ್ರೇಲಿಯಾದ ರಾಯಭಾರಿ ಬ್ಯಾರಿ ಓ'ಫಾರೆಲ್ ಟ್ವಿಟರ್‌ನಲ್ಲಿ ಈ ಮಾಹಿತಿ ನೀಡಿದ್ದಾರೆ. ರತನ್ ಟಾಟಾ ಅವರು 'ವ್ಯಾಪಾರ, ಉದ್ಯಮ ಮತ್ತು ಲೋಕೋಪಕಾರದ ದೈತ್ಯ'. ರತನ್ ಟಾಟಾ ಅವರ ಕೊಡುಗೆ ಆಸ್ಟ್ರೇಲಿಯಾದ ಮೇಲೆ ಗಮನಾರ್ಹ ಪರಿಣಾಮ ಬೀರಿದೆ. ರತನ್ ಟಾಟಾ ಅವರು ಆಸ್ಟ್ರೇಲಿಯಾ-ಭಾರತ ದ್ವಿಪಕ್ಷೀಯ ಸಂಬಂಧಗಳಿಗೆ, ವಿಶೇಷವಾಗಿ ವ್ಯಾಪಾರ, ಹೂಡಿಕೆ ಮತ್ತು ಲೋಕೋಪಕಾರ ಕ್ಷೇತ್ರಗಳಲ್ಲಿ ಅವರ ಸೇವೆಗಳಿಗಾಗಿ ಆರ್ಡರ್ ಆಫ್ ಆಸ್ಟ್ರೇಲಿಯಾದ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಆಸ್ಟ್ರೇಲಿಯಾದ ರಾಯಭಾರಿ ಬ್ಯಾರಿ ಓ'ಫಾರೆಲ್ ಅವರು ಶನಿವಾರ ತಮ್ಮ ಟ್ವಿಟರ್ ಖಾತೆಯಿಂದ ಟ್ವೀಟ್ ಮಾಡಿದ್ದಾರೆ. ರತನ್ ಟಾಟಾ ಅವರು ಭಾರತದಲ್ಲಿ ಹಿರಿಯ ಕೈಗಾರಿಕೋದ್ಯಮಿ ಮಾತ್ರವಲ್ಲ, ಅವರ ಕೊಡುಗೆ ಆಸ್ಟ್ರೇಲಿಯಾದಲ್ಲೂ ಗಮನಾರ್ಹ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ. 'ಆಸ್ಟ್ರೇಲಿಯಾ-ಭಾರತ ಸಂಬಂಧಗಳಿಗೆ ರತನ್ ಟಾಟಾ ಅವರ ದೀರ್ಘಕಾಲದ ಬದ್ಧತೆಯನ್ನು ಗುರುತಿಸಿ ಅವರಿಗೆ ಆರ್ಡರ್ ಆಫ್ ಆಸ್ಟ್ರೇಲಿಯಾ (ಎಒ) ಗೌರವವನ್ನು ಪ್ರದಾನ ಮಾಡಿರುವುದು ಸಂತೋಷವಾಗಿದೆ' ಎಂದು ಅವರು ಬರೆದಿದ್ದಾರೆ.



ಒಂದನೇ ಪುಟದಿಂದ

ವಿಕಾಸ ರಾಜಕಾರಣ ಬೆಂಬಲಿಸಿ...

ಜಿಲ್ಲೆಯ 4 ಕ್ಷೇತ್ರಗಳಲ್ಲೂ ಕಮಲ ಅರಳಿಸಬೇಕು ಎಂದು ಮನವಿ ಮಾಡಿದರು. ಬಿಜೆಪಿ ರಾಜ್ಯದಲ್ಲಿ ಅಭಿವೃದ್ಧಿ ಪರ್ವ ಸೃಷ್ಟಿಸಿದೆ. ಕಾಂಗ್ರೆಸ್ ಮುಸ್ಲಿಮರಿಗೆ ಹಿಂದುಗಳಿದ ವರ್ಗಗಳ ಕೋಟಾದಡಿ ನೀಡಿದ್ದ ಶೇ. 4ರಷ್ಟು ಮೀಸಲಾತಿಯನ್ನು ತೆಗೆದು ಹಾಕಿದ್ದೇವೆ. ಅವರಿಗೆ ಇಡಬ್ಲ್ಯೂಎಸ್‌ನಲ್ಲಿ ಅವಕಾಶ ಕಲ್ಪಿಸಿದ್ದೇವೆ. ಲಿಂಗಾಯತರು ಮತ್ತು ಒಕ್ಕಲಿಗರಿಗೆ ತಲಾ ಶೇ. 2ರಷ್ಟು ಮೀಸಲಾತಿ ಹೆಚ್ಚಿಸಿದ್ದೇವೆ. ಆದರೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಮುಸ್ಲಿಮರಿಗೆ ಮತ್ತೇ ಮೀಸಲಾತಿ ನೀಡುವುದಾಗಿ ಹೇಳುತ್ತಿದ್ದಾರೆ. ಹಾಗಾದರೆ ಅವರು ಲಿಂಗಾಯತರು ಮತ್ತು ಒಕ್ಕಲಿಗರಿಗೆ ನಾವು ನೀಡಿರುವ ಹೆಚ್ಚುವರಿ ಮೀಸಲಾತಿಯನ್ನು ತೆಗೆದುಹಾಕುತ್ತಾರೆಯೇ ಎಂದು ಪ್ರಶ್ನಿಸಿದರು. ಕಾಂಗ್ರೆಸ್‌ನದ್ದು ಮೊದಲಿನಿಂದಲೂ ತುಷ್ಟೀಕರಣ ರಾಜಕಾರಣವಾಗಿದ್ದು, ಪ್ರಧಾನಿ ಮೋದಿಯವರದು ವಿಕಾಸ ರಾಜಕಾರಣವಾಗಿದೆ. ಇದನ್ನು ಅರ್ಥ ಮಾಡಿಕೊಂಡು ಬಿಜೆಪಿಯನ್ನು ಬೆಂಬಲಿಸಬೇಕು ಎಂದು ಅಮಿತ್ ಶಾ, ಮನವಿ ಮಾಡಿದರು. ಹಳೇ ಬಸ್ ನಿಲ್ದಾಣದ ಬಳಿ ಪ್ರಚಾರ ಭಾಷಣ ಮಾಡಿದ ನಂತರ ಮತ್ತೇ ಕ್ರೀಡಾಂಗಣದವರೆಗೆ ರೋಡ್ ಶೋ ನಡೆಸಿ, ಹೆಲಿಕಾಪ್ಟರ್‌ನಲ್ಲಿ ಅಮಿತ್ ಶಾ ಹಿಂತಿರುಗಿದರು. ಈ ವೇಳೆ ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ, ಶಾ ಅವರಿಗೆ ಸಾಥ್ ನೀಡಿದರು.

ಚುನಾವಣಾ ಅಖಾಡದಲ್ಲಿ 2613 ಕಲಿಗಳು

ಬಿಜೆಪಿಗೆ ಬಂಡಾಯದ ಬಿಸಿ ತಟ್ಟುವ ನಿರೀಕ್ಷೆ ಇದೆ. ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚು 24 ಅಭ್ಯರ್ಥಿಗಳು ಕಣದಲ್ಲಿದ್ದರೆ, ಅತಿ ಕಡಿಮೆ ಅಭ್ಯರ್ಥಿಗಳ ಸಂಖ್ಯೆ ಐದು. ಯಮಕನಮರಡಿ, ಮಾನ್ವಿ, ತೀರ್ಥಹಳ್ಳಿ, ಬೈಂದೂರು, ಉಡುಪಿ, ಮಂಗಳೂರು ದಕ್ಷಿಣ, ಮಂಗಳೂರು ನಗರದಲ್ಲಿ ಐವರು ಅಭ್ಯರ್ಥಿಗಳು ಮಾತ್ರ ಇದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಣದಲ್ಲಿರುವ ಶಿಗ್ಗಾಂವಿಯಲ್ಲಿ 11 ಅಭ್ಯರ್ಥಿಗಳು ಅಂತಿಮವಾಗಿ ಉಳಿದಿದ್ದಾರೆ.

ಪಕ್ಷವಾರು ಅಭ್ಯರ್ಥಿಗಳು: ಬಿಜೆಪಿಯ 224, ಕಾಂಗ್ರೆಸ್ ಪಕ್ಷ 223, ಜೆಡಿಎಸ್ 207 ಆಮ್ ಆದ್ಮಿ ಪಕ್ಷದ 209, ಬಿಎಸ್‌ಪಿಯ 133, ಸಿಪಿಎಂನ 4, ಜೆಡಿಯು 8, ಎನ್‌ಪಿಪಿಯ, ಪಕ್ಷೇತರರು 1603 ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿ ಉಳಿದಿದ್ದಾರೆ.

16 ಕ್ಷೇತ್ರದಲ್ಲಿ 15ಕ್ಕೂ ಹೆಚ್ಚು ಅಭ್ಯರ್ಥಿಗಳು: ಈ ಬಾರಿ 16 ಕ್ಷೇತ್ರಗಳಕಲ್ಲಿ 15ಕ್ಕೂ ಹೆಚ್ಚು ಅಭ್ಯರ್ಥಿಗಳು ಕಣದಲ್ಲಿದ್ದಾರೆ ಎಂದು ಚುನಾವಣಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ರಾಜಾಜಿನಗರ-18, ಹೊಸಕೋಟೆ-23, ಯಲಹಂಕ-20, ಬ್ಯಾಟರಾಯನಪುರ-17, ಬಳ್ಳಾರಿನಗರ-24, ಹನೂರು-18, ಗೌರಿಬಿದನೂರು-18, ಚಿಕ್ಕಮಗಳೂರು-16, ಚಿತ್ರದುರ್ಗ-21, ಹುಬ್ಬಳ್ಳಿ-ಧಾರವಾಡ ಸೆಂಟ್ರಲ್-16, ಕೋಲಾರ-18, ಗಂಗಾವತಿ-19, ಶ್ರೀರಗಪಟ್ಟಣ-17, ಕೃಷ್ಣರಾಜ-17, ನರಸಿಂಹರಾಜ 17, ರಾಯಚೂರು-18.

143 ಅಭ್ಯರ್ಥಿಗಳು ಕಣದಲ್ಲಿ

ಬಿ.ಶಿವಣ್ಣ, ಸಿದ್ದು, ವಿ.ಸಿದ್ದರಾಜು, ಸುರೇಶ, ವಿ.ಪಿ.ಸುಶೀಲಾ, ಕೆ.ಆರ್.ನಗರದಲ್ಲಿ ಪಕ್ಷೇತರರಾದ ಹೆಚ್.ಎ.ಸುರೇಶ, ಡಿ.ರಾಮಯ್ಯ, ಕೆ.ವಿ.ರಾಘು, ಪರಶಿವನಾಯಕ, ಮಹದೇವ, ನರಸಿಂಹರಾಜ ಕ್ಷೇತ್ರದಲ್ಲಿ ಪಕ್ಷೇತರರಾದ ಅಮ್ಜದ್ ಖಾನ್, ಅಜೀಜುಲ್ಲಾ ಅಜ್ಜು, ವಿ.ಗಿರಿಧರ್, ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿಯ ಅಯೂಬ್ ಖಾನ್, ತಿ.ನರಸೀಪುರದಲ್ಲಿ ಪಕ್ಷೇತರರಾದ ಎಂ.ಕುಮಾರ ಕ್ರಾಂತಿ, ಡಿ.ಮಹದೇವ, ಸಿ.ಪಿ.ಸುರೇಂದ್ರನಾಥ, ಚಾಮರಾಜ ಕ್ಷೇತ್ರ ಸುಹೇಲ್ ಬೇಗ್ ಹಾಗೂ ಅಕೀಲ್ ಅಹಮದ್, ಹುಣಸೂರಿನಲ್ಲಿ ಪಕ್ಷೇತರರಾದ ಪಿ.ಎಸ್.ಯಡೂರಪ್ಪ, ಬೀರೇಶ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷೇತರ ಬಿ.ಪ್ರಕಾಶ, ಕೃಷ್ಣರಾಜದಲ್ಲಿ ಪಕ್ಷೇತರ ಲಕ್ಷ್ಮಿನಾರಾಯಣ ರಾವ್ ಹಾಗೂ ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಪಕ್ಷೇತರ ಪಿ.ಎಸ್.ಯಡೂರಪ್ಪ ಉಮೇದುವಾರಿಕೆ ಹಿಂಪಡೆದಿದ್ದಾರೆ.

ಅಸಮದಾನ ಶಮನ: ಮಾಜಿ ಶಾಸಕ ವಾಸು ಅವರಿಗೆ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರ ಹಿನ್ನೆಲೆಯಲ್ಲಿ ಅವರ ಆಪ್ತ ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ನರಸಿಂಹರಾಜ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಕಾರ್ಪೊರೇಟರ್ ಅಜೀಜುಲ್ಲಾ ಅಜ್ಜು ಹಾಗೂ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ವಿ.ಗಿರಿಧರ್ ಪಕ್ಷೇತರರಾಗಿ ಉಮೇದುವಾರಿಕೆ ಸಲ್ಲಿಸಿದ್ದರು. ಇತ್ತೀಚೆಗೆ ಪಂಚರತ್ನ ರಥಯಾತ್ರೆ ಸಮಾರೋಪ ವೇದಿಕೆಯಲ್ಲಿ ಜೆಡಿಎಸ್‌ಗೆ ಬೆಂಬಲ ಘೋಷಿಸಿದ್ದ ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿಯ ಅಯೂಬ್ ಖಾನ್ ತಾವು ಸಲ್ಲಿಸಿದ್ದ ನಾಮಪತ್ರ ಹಿಂಪಡೆದು, ಚುನಾವಣಾ ಕಣದಿಂದ ಹೊರಬಂದಿದ್ದಾರೆ. ಅಸಮಾದಾನಿತರ ಜೊತೆಗೆ ಒಂದಷ್ಟು ಮತಗಳನ್ನು ಪಡೆಯಬಹುದಿದ್ದ ಪಕ್ಷೇತರ ಅಭ್ಯರ್ಥಿಗಳ ಮನವೊಲಿಸಿ, ಕಣದಿಂದ ಹಿಂದೆ ಸರಿಸುವಲ್ಲಿ ಆಯಾ ಪಕ್ಷದ ಮುಖಂಡರು ಯಶಸ್ವಿಯಾಗಿದ್ದಾರೆ.

ಮುಖ್ಯಮಂತ್ರಿ ಸ್ಥಾನೇ ಪ್ರಾಪ್ತಿರಸ್ತು...

ಈಗ ವ್ಯಾಪಕವಾಗಿ ವೈರಲ್ ಆಗುತ್ತಿದೆ. ಈ ಧಾರ್ಮಿಕ ಕಾರ್ಯಕ್ರಮದ ನಂತರ ಉಡುಪಿಗೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರನ್ನು ಕೊಲ್ಲೂರಿನಲ್ಲಿ ಮುಖ್ಯಮಂತ್ರಿ ಸ್ಥಾನಕ್ಕಾಗಿ ವಿಶೇಷ ಪೂಜೆ ಸಲ್ಲಿಸಿದ್ದೀರಾ ಎನ್ನುವ ಮಾಧ್ಯಮದವರ ಪ್ರಶ್ನೆಗೆ, "ನೋಡಪ್ಪಾ.. ನಾವು ರಾಜಕಾರಣಿಗಳು, ಬಿಳಿ ಬಟ್ಟೆ ಹಾಕಿಕೊಂಡಿದ್ದೇನೆ, ಖಾವಿ ಹಾಕಿಕೊಂಡಿಲ್ಲ" ಎಂದು ಹೇಳಿದರು. ರಾಜ್ಯ ಸರಕಾರದ ಭ್ರಷ್ಟಾಚಾರದ ಬಗ್ಗೆ ಯತ್ನಾಳ್, ಓಲೇಕರ್, ಕೆಂಪಣ್ಣ, ವಿಶ್ವನಾಥ್ ಮುಂತಾದವರೇ ಹೇಳಿದ್ದರು. ಅದ್ಯಾವುದೂ ನಮ್ಮ ಕಾಲದಲ್ಲಿ ಆಗಿದ್ದಲ್ಲ, ಇಂತಹ ಭ್ರಷ್ಟ ಸರಕಾರ ನಮ್ಮ ರಾಜ್ಯವನ್ನು ಆಳಿದ್ದು ಒಂದು ಕಪ್ಪು ಇತಿಹಾಸ ಎಂದು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ನಾವು ಲಿಂಗಾಯತ ಸಮುದಾಯದ ಬಗ್ಗೆ ಮಾತಾನಾಡಿದ್ದಲ್ಲ, ಸರಕಾರದ ಬಗ್ಗೆ ಮಾತನಾಡಿದ್ದು. ಉಡುಪಿಯ ಜನತೆ ದೊಡ್ಡ ಪ್ರಮಾಣದಲ್ಲಿ ಮತ ಚಲಾಯಿಸಬೇಕು, ಕಾಂಗ್ರೆಸ್ ಪಕ್ಷವನ್ನು ಆಶೀರ್ವದಿಸಬೇಕು. ಆ ಮೂಲಕ ಭ್ರಷ್ಟ ಬಿಜೆಪಿಯನ್ನು ತೊಲಗಿಸಲು ನಮಗೆ ಶಕ್ತಿ ನೀಡಬೇಕೆಂದು ಡಿ.ಕೆ.ಶಿವಕುಮಾರ್ ಈ ಸಂದರ್ಭದಲ್ಲಿ ಮತದಾರರಲ್ಲಿ ಮನವಿ ಮಾಡಿದರು.

ಇಂದು, ನಾಳೆ 224 ಕ್ಷೇತ್ರಗಳಲ್ಲೂ ಏಕಕಾಲದಲ್ಲಿ

ಬಿಜೆಪಿ ಮಹಾ ಪ್ರಚಾರ ಅಭಿಯಾನ

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮಾಹಿತಿ



ಮೈಸೂರು,ಏ.24(ಪಿಎಂ)- ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ವತಿಯಿಂದ ರಾಜ್ಯಾದ್ಯಂತ ಏ.25 ಮತ್ತು 26ರಂದು ಮಹಾ ಪ್ರಚಾರ ಅಭಿಯಾನ ಆಯೋಜಿಸಲಾಗಿದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯದ ನಾಯಕರು, ಜಿಲ್ಲಾ ಮಟ್ಟದ ನಾಯಕರು ಪಾಲ್ಗೊಳ್ಳಲಿದ್ದು, ಏಕಕಾಲದಲ್ಲಿ 224 ಕ್ಷೇತ್ರಗಳಲ್ಲೂ ಈ ಮಹಾ ಪ್ರಚಾರ ಅಭಿಯಾನ ನಡೆಯಲಿದೆ ಎಂದು ಶಾಸಕರೂ ಆದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ತಿಳಿಸಿದರು.

ಮೈಸೂರಿನ ಆರ್‌ಟಿಓ ಕಚೇರಿ ಎದುರು ವಾಣಿವಿಲಾಸ ರಸ್ತೆಯಲ್ಲಿರುವ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಮಟ್ಟದಿಂದ ಹಿಡಿದು ವಿವಿಧ ಹಂತಗಳಲ್ಲಿ ಬೂತ್ ಮಟ್ಟದವರೆಗೂ 224 ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ಈ ಅಭಿಯಾನ ನಡೆಯಲಿದೆ. 98 ಮಂದಿ ಕೇಂದ್ರ ಸಚಿವರು, 13 ಮಂದಿ ರಾಜ್ಯ ಮಟ್ಟದ ನಾಯಕರು ಮಾತ್ರವಲ್ಲದೆ, 50ಕ್ಕೂ ಹೆಚ್ಚು ವಿವಿಧ ಹಂತಗಳ ನಾಯಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನಮ್ಮ ಗುರಿ 150 ಸ್ಥಾನಗಳನ್ನು ಗೆಲ್ಲುವುದೇ ಆಗಿದ್ದು, ಈ ನಿಟ್ಟಿನಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ರಾಜನಾಥ ಸಿಂಗ್, ನಿರ್ಮಲಾ ಸೀತಾರಾಮ್, ಯುಪಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಮಟ್ಟದ ನಾಯಕರು ಅಭಿಯಾನದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಅಭಿಯಾನದ ಮೂಲಕ ಸದೃಢ ಸರ್ಕಾರಕ್ಕಾಗಿ ಬಿಜೆಪಿಗೆ ಬಹುಮತ ನೀಡಿ ಎಂಬ ಬೇಡಿಕೆಯನ್ನು ಜನತೆ ಮುಂದೆ ಇಡಲಿದ್ದೇವೆ. ನಮ್ಮದು ಕೇಡರ್ ಬೇಸ್ ರಾಜಕೀಯ ಪಕ್ಷ. ಸಾಮಾನ್ಯ ಕಾರ್ಯಕರ್ತರನ್ನು ನಾಯಕರಾಗಿ ಬೆಳೆಸುವ ವ್ಯವಸ್ಥೆ ನಮ್ಮದು. ಅಭ್ಯರ್ಥಿಗಳ ಆಯ್ಕೆಯಲ್ಲೂ 3 ಹಂತದಲ್ಲಿ ಪ್ರಕ್ರಿಯೆ ನಡೆಸಲಾಗಿದೆ. ಕೊನೆಯದಾಗಿ ಪಾರ್ಲಿಮೆಂಟರಿ ಬೋರ್ಡ್ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿದೆ. ಪ್ರಜಾಪ್ರಭುತ್ವ ಗೌರವಿಸಿ, ಬಿಜೆಪಿ ಆಂತರಿಕವಾಗಿಯೂ ಅದನ್ನು ಅಳವಡಿಸಿಕೊಂಡಿದೆ. 75ಕ್ಕೂ ಹೆಚ್ಚು ಹೊಸ ಮುಖಗಳಿಗೆ ಈ ಬಾರಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರು ತಾವು ಲಿಂಗಾಯತರ ಡ್ಯಾಂ ಒಡೆದಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಒಡೆಯುವುದು ಕಾಂಗ್ರೆಸ್‌ನ ಹಳೇ ಛಾಳಿ. ಭಾರತ ಮತ್ತು ಪಾಕಿಸ್ತಾನವೆಂದು ದೇಶವನ್ನೇ ಒಡೆದರು. ಸಮಾಜ ಒಡೆಯುವುದನ್ನು ರಾಜಕೀಯ ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ನಾವು ಹಿಂದುತ್ವ ಡ್ಯಾಂ ಎತ್ತರಿಸಿದ್ದು, ಇದರಿಂದ ಕಾಂಗ್ರೆಸ್ ಮುಳುಗುವುದು ನಿಶ್ಚಿತ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಬೇಕು: ನಿಮ್ಮ ಕ್ಷೇತ್ರದಲ್ಲಿ (ಚಿಕ್ಕಮಗಳೂರು) ಜೆಡಿಎಸ್‌ನವರು ಕಾಂಗ್ರೆಸ್‌ಗೆ ಮತ ಹಾಕಿ ಎನ್ನುತ್ತಿದ್ದಾರೆ ಎನ್ನಲಾಗಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ನನ್ನ ಕ್ಷೇತ್ರದಲ್ಲಿ ಕಾಂಗ್ರೆಸ್ ಪರವಾಗಿ ಅವರು ಕೆಲಸ ಮಾಡುತ್ತಿದ್ದಾರೆ. ಈ ಮೈತ್ರಿ, ಚುನಾವಣಾ ಪೂರ್ವದ್ದೋ ಅಥವಾ ರಾಜಕೀಯ ವ್ಯಭಿಚಾರವೋ ಎಂಬುದನ್ನು ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಬೇಕು. ಜೊತೆಗೆ ಇದು ಚಿಕ್ಕಮಗಳೂರು ಕ್ಷೇತ್ರಕ್ಕೆ ಸೀಮಿತವೋ ಅಥವಾ ಇಡೀ ರಾಜ್ಯಕ್ಕೆ ವಿಸ್ತರಿಸಿದೆಯೋ ಎಂದೂ ಸ್ಪಷ್ಟಪಡಿಸಬೇಕು. ಅವರು ರಾಜಕೀಯ ವ್ಯಭಿಚಾರ ಅಲ್ಲ ಎನ್ನುವುದಾದರೆ, ಅವರ ಪಕ್ಷದ ಎಂಎಲ್‌ಸಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಈ ರಾಜಕೀಯ ವ್ಯಭಿಚಾರಕ್ಕೆ ಮೇಲಿಂದಲೂ ಆಶೀರ್ವಾದ ಇದೆ ಎಂದು ಸ್ಪಷ್ಟವಾಗಲಿದೆ ಎಂದು ಕಿಡಿಕಾರಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮೈಸೂರು ವಿಭಾಗದ ಪ್ರಭಾರಿ ಮೈ.ವಿ.ರವಿಶಂಕರ್, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಲ್ಲಾ ವಕ್ತಾರ ವಸಂತ ಕುಮಾರ್, ಮುಖಂಡ ದೇವನೂರು ಪ್ರತಾಪ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮುಸಲ್ಮಾನ ಸಮುದಾಯಕ್ಕೆ ಸಕಾಲವಿದು

ನಿಧಾನಕ್ಕೆ ಮುಸಲ್ಮಾನ ಸಮುದಾಯ ಬಿಜೆಪಿಯತ್ತ ಬರುತ್ತಿದೆ. ಕಾಂಗ್ರೆಸ್ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು ಬಿಜೆಪಿ ಬ್ಯಾಂಕ್‌ನಲ್ಲಿ ಡ್ರಾ ಮಾಡಿಕೊಳ್ಳಲು ಆಗುವುದಿಲ್ಲ. ಠೇವಣಿಯನ್ನು ಬಿಜೆಪಿ ಬ್ಯಾಂಕ್‌ನಲ್ಲಿ ಇಟ್ಟು ಚೆಕ್ ಕೊಟ್ಟರೆ ಕ್ಯಾಶ್ ಆಗುತ್ತದೆ ಎಂದು ಈಗಾಗಲೇ ಅವರಿಗೆ ಹೇಳಿದ್ದೇನೆ. ಮೋದಿ ಅಥವಾ ಬಿಜೆಪಿ ಸರ್ಕಾರದ ನೀತಿ ಯಾವುದೇ ಶ್ರೇಯೋಭಿವೃದ್ಧಿ ಯೋಜನೆಯಲ್ಲಿ ಮುಸಲ್ಮಾನ ಸಮುದಾಯ ಹೊರಗಿಟ್ಟಿಲ್ಲ. ಹಾಗಾಗಿ ಬಿಜೆಪಿಯಲ್ಲಿ ಠೇವಣಿ ಇಡಲು ಮುಸಲ್ಮಾನರಿಗೆ ಸಕಾಲ ಇದು. ಓಟಿನ ರೂಪದಲ್ಲಿ ಬಿಜೆಪಿಯಲ್ಲಿ ಠೇವಣಿ ಇಟ್ಟು ಬಳಿಕ ಡ್ರಾ ಮಾಡಲಿ. ಆಗ ಒಂದಲ್ಲ, ನೂರು ಸೀಟು ಕೇಳುವಷ್ಟು ಸಾಮರ್ಥ್ಯ ಮುಸಲ್ಮಾನ ಸಮುದಾಯಕ್ಕೆ ಬರಲಿದೆ. ಮೋದಿ ಅಥವಾ ಬಿಜೆಪಿ ಸರ್ಕಾರದ ಯಾವುದೇ ಯೋಜನೆಗಳು ಜಾತಿ ತಾರತಮ್ಯದಿಂದ ಕೂಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಚಕ್ರವ್ಯೂಹದಲ್ಲಿ ಸಿಲುಕಿದ ಮಾಜಿ ಸಿಎಂ ಸಿದ್ದರಾಮಯ್ಯ

ಮೈಸೂರು,ಏ.24(ಪಿಎಂ)- ವರುಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಚಕ್ರವ್ಯೂಹದಲ್ಲಿ ಸಿಕ್ಕಿಕೊಂಡಿದ್ದು, ಅದರಿಂದ ಅವರು ಹೊರಬರುವುದು ಸುಲಭ ಸಂಗತಿಯಲ್ಲ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಸಿದ್ದರಾಮಯ್ಯನವರ ಹೇಳಿಕೆ ಕುರಿತಂತೆ ಮಾಧ್ಯಮದವರಿಗೆ ಅವರು ಪ್ರತಿಕ್ರಿಯೆ ನೀಡಿ, ಲಿಂಗಾಯತರ ಬಗ್ಗೆ ಅವರೊಳಗಿನ ಅಸಹನೆ ವ್ಯಕ್ತವಾಗಿದೆ ಅಥವಾ ವರುಣ ಕ್ಷೇತ್ರದಲ್ಲಿ ಲಿಂಗಾಯತರು ಒಗ್ಗಟ್ಟಾಗಿದ್ದಾರೆ. ಅವರ ಜೊತೆಗೆ ಎಸ್‌ಸಿ-ಎಸ್‌ಟಿ, ಓಬಿಸಿಯವರು ಸೇರಿಕೊಂಡಿದ್ದಾರೆ. ಅಹಿಂದ ಕಾರ್ಡ್ ಕೂಡ ನಡೆಯುತ್ತಿಲ್ಲ. ಜೈ ಹಿಂದ್ ಚಲಾವಣೆಗೆ ಬರುತ್ತಿದೆ ಎನ್ನಿಸಿರಬಹುದು. ಹಾಗಾಗಿ ಅವರ ಭಯಮಿಶ್ರಿತ ಆಕ್ರೋಶ ಅಸಹನೆಯಾಗಿ ಅವರ ಬಾಯಿಂದ ಹೊರಬಂದಿದೆ ಎಂದು ತಿಳಿಸಿದರು.

ನಿಜಲಿಂಗಪ್ಪ ವೀರೇಂದ್ರ ಪಾಟೀಲ್ ಮೊದಲಾದವರು ಪ್ರಾಮಾಣಿಕತೆಗೆ ಹೆಸರಾದವರು. ಇಡೀ ಸಮುದಾಯವನ್ನು ಭ್ರಷ್ಟರು ಎಂದು ಕರೆದಿರುವುದು ಬಸವ ತತ್ವಕ್ಕೆ ಮಾಡಿದ ಅಪಚಾರ. ಅವರು ತಮ್ಮ ಮಾತನ್ನು ತಿರುಚಲಾಗಿದೆ ಎಂದು ಈಗ ಹೇಳುತ್ತಿದ್ದಾರೆ. ಒಂದೊಂದು ಅಕ್ಷರವೂ ಪ್ರಸಾರವಾಗಿದೆ. ಇದಕ್ಕೆ ಅವರು ಮಾತ್ರವಲ್ಲ. ಇಡೀ ಕಾಂಗ್ರೆಸ್ ಬೆಲೆ ತೆರಬೇಕಾಗುತ್ತದೆ ಎಂದರು.

ಕೋಲಾರದಲ್ಲಿ ಸ್ಪರ್ಧೆಗೆ ಅವರ ಪಕ್ಷ ಅವಕಾಶ ನೀಡಲಿಲ್ಲ. ಜೊತೆಗೆ ವರುಣದಲ್ಲಿ ಚಕ್ರವ್ಯೂಹದಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ ಎಂದು ಅವರಿಗೆ ಅನಿಸಿರಬೇಕು. ಈ ಎರಡು ರೀತಿಯ ಸಿಟ್ಟು ಅವರಲ್ಲಿ ಇರಬಹುದು. ಇಂತಹ ಅಸಹನೆಯಿಂದ ಹೇಳಿಕೆ ನೀಡಿದ್ದಾರೆ. ಚಕ್ರವ್ಯೂಹದಿಂದ ಹೊರಬರಲು ಅವರ ಜೊತೆಯಲ್ಲಿ ಕೃಷ್ಣ ಇಲ್ಲ. ಕೃಷ್ಣ ಇರುವುದು ಬಿಜೆಪಿಯಲ್ಲಿ. ಡಿ.ಕೆ.ಶಿವಕುಮಾರ್ ತಮ್ಮ ಎಲ್ಲಾ ಸಾಮರ್ಥ್ಯವನ್ನು ಸಿದ್ದರಾಮಯ್ಯರನ್ನು ರಾಜಕೀಯವಾಗಿ ಮುಗಿಸುವುದಕ್ಕೆ ವಿನಿಯೋಗಿಸುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರ ಬೆಂಬಲ ಈ ಮುಂಚೆಯೇ ಅವರಿಗಿಲ್ಲ. ಅಲ್ಲದೆ, ಡಾ.ಜಿ.ಪರಮೇಶ್ವರ್ ಶಾಪ ತಟ್ಟದೇ ಬಿಡುವುದಿಲ್ಲ. ಈ ಎಲ್ಲಾ ಕಾರಣದಿಂದ ಅವರು ಚಕ್ರವ್ಯೂಹದಿಂದ ಹೊರಬರುವುದು ಸುಲಭವಲ್ಲ ಎಂದು ಹೇಳಿದರು.

ಯಾವ ಒಳ ಒಪ್ಪಂದವೂ ಇಲ್ಲ: ವರುಣದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಹೊಂದಾಣಿಕೆಯಾಗಿದೆ ಎನ್ನಲಾಗುತ್ತಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ಜೆಡಿಎಸ್‌ನವರು ಬಿಜೆಪಿ ಪರವಾಗಿ ವರುಣದಲ್ಲಿ ಓಟು ಕೇಳುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಅವರು ಡಾ.ಭಾರತಿಶಂಕರ್ ಅಭ್ಯರ್ಥಿ ಮಾಡಿರುವುದಷ್ಟೇ ನನಗೆ ಗೊತ್ತು. ವರುಣದಲ್ಲಿ ಯಾವ ಒಳ ಒಪ್ಪಂದವೂ ಇಲ್ಲ. ಕಾಂಗ್ರೆಸ್ ಜೊತೆಗೆ ನೇರ ಸಂಘರ್ಷ ನಮ್ಮದು. ಜೆಡಿಎಸ್ ಏನು ಮಾಡುತ್ತದೋ ಅದು ಅವರ ಪಕ್ಷಕ್ಕೆ ಬಿಟ್ಟಿದ್ದು ಎಂದು ಹೇಳಿದರು.

ವರುಣ ಮತ್ತು ಕನಕಪುರ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಪ್ರಚಾರಕ್ಕೆ ತಡೆಯೊಡ್ಡಲಾಗುತ್ತಿದೆಯೆಂಬ ಬಗ್ಗೆ ಪ್ರತಿಕ್ರಿಯಿಸಿ, ಪ್ರಚಾರಕ್ಕೆ ತಡೆಯೊಡ್ಡಬಹುದು. ಆದರೆ ಜನಾಭಿಪ್ರಾಯಕ್ಕೆ ತಡೆಯೊಡ್ಡಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವ ಒಪ್ಪದವರಲ್ಲಿ ಸೋಲಿನ ಭಯ ಕಾಡುತ್ತಿರಬಹುದು ಎಂದರು.

ವಿ.ಸೋಮಣ್ಣನವರು ವರುಣ ಕ್ಷೇತ್ರದವರಲ್ಲ. ಅವರನ್ನು ಬಲಿಪಶು ಮಾಡಲು ಬಿಜೆಪಿ ಇಲ್ಲಿ ಕಣಕ್ಕಿಳಿಸಿದೆ ಎನ್ನಲಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಸೋಮಣ್ಣನವರು ಕೇವಲ ಗೋವಿಂದರಾಜನಗರದ ಕ್ಷೇತ್ರದ ನಾಯಕರಲ್ಲ. ಅವರು ರಾಜ್ಯದ ನಾಯಕರು. ಬಾದಾಮಿ, ಕೋಲಾರಕ್ಕೆ ಅನ್ವಯ ಆಗದ ಈ ಪ್ರಶ್ನೆ ವರುಣಗೆ ಏಕೆ ಅನ್ವಯವಾಗಬೇಕು ಎಂದು ಪ್ರಶ್ನಿಸಿದರು.

ಆ ಸಂದರ್ಭ ಬಂದಾಗ ಸಿಎಂ ಆಕಾಂಕ್ಷಿ: ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಮುಂದಿನ ಸಿಎಂ ಸಿ.ಟಿ.ರವಿ ಎಂದು ಘೋಷಣೆ ಕೂಗಿದ್ದರ ಬಗ್ಗೆ ಪ್ರತಿಕ್ರಿಯಿಸಿ, ಕ್ಷೇತ್ರದ ಜನ ಅಭಿಮಾನದಿಂದ ಕೂಗಿದ್ದಾರೆ. ಇಡೀ ರಾಜ್ಯದಲ್ಲಿ ಅಂತಹ ಕೂಗು ಎದ್ದಾಗ ಖಂಡಿತ ನಾನೂ ಸಿಎಂ ಸ್ಥಾನದ ಆಕಾಂಕ್ಷಿಯಾಗುತ್ತಾನೆ ಎಂದು ಹೇಳಿದರು.

ಸದಾ ನಿಮ್ಮ ಜೊತೆಗಿದ್ದೇನೆ; ಮುಂದೆಯೂ ಇರ್ತೇನೆ :ಜಿಟಿಡಿ





ಮೈಸೂರು, ಏ.24(ಎಂಕೆ)- ನಾನು ಬರೀ ವೋಟಿ ಗೋಸ್ಕರ ಬರುವವನಲ್ಲ.. ಅಭಿವೃದ್ಧಿ ಮಾಡಿದ್ದೇನೆ... ಮತ್ತೊಮ್ಮೆ ಅವಕಾಶ ಕೊಡಿ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ ಮನವಿ ಮಾಡಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜಯದೇವ ನಗರ, ಬೆಲವತ್ತ, ಏಕಲವ್ಯ ನಗರ, ಶ್ಯಾದನಹಳ್ಳಿ, ಹೊಸ ಬಡಾವಣೆ, ನಾಗನಹಳ್ಳಿ, ಲಕ್ಷ್ಮಿಪುರ, ಕಳಸ್ತವಾಡಿ, ಕಾಳಿ ಸಿದ್ದನಹುಂಡಿ, ಕಾಮನಕೆರೆಹುಂಡಿ, ಕೆಸರೆ, ಕೆ.ಆರ್. ಮಿಲ್ ಕಾಲೋನಿ ಹಾಗೂ ಸಿದ್ದಲಿಂಗಪುರ ಗ್ರಾಮಗಳಲ್ಲಿ ದಿನವಿಡೀ ಭರ್ಜರಿ ರ‍್ಯಾಲಿ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರ ಬಹಳ ದೊಡ್ಡ ಕ್ಷೇತ್ರವಾಗಿದೆ. ಕ್ಷೇತ್ರದಲ್ಲಿದ್ದ ಬಹು ತೇಕ ಮೂಲ ಸೌಕರ್ಯ ಸಮಸ್ಯೆಗಳನ್ನು ಬಗೆಹರಿಸಿದ್ದೇನೆ. ನಾನು ಬರೀ ವೋಟಿ ಗೋಸ್ಕರ ಬರುವವನಲ್ಲ.. ಅಭಿವೃದ್ಧಿ ಮಾಡಿದ್ದೇನೆ... ನಿಮ್ಮೊಂದಿಗೆ ಸದಾ ಇದ್ದೇನೆ. ಮುಂದಿನ ದಿನಗಳಲ್ಲಿಯೂ ಕ್ಷೇತ್ರದ ಅಭಿವೃದ್ಧಿ ಹಾಗೂ ಕ್ಷೇತ್ರದ ಜನರ ಹಿತಕಾಯುವ ದೃಷ್ಟಿಯಿಂದ ಮತ್ತೊಮ್ಮೆ ಅವಕಾಶ ಮಾಡಿಕೊಡಿ ಮನವಿ ಮಾಡಿದರು.

ಪಾದಯಾತ್ರೆ: ರ‍್ಯಾಲಿ ಜೊತೆಗೆ ಮನೆ ಮನೆಗೆ ಪಾದಯಾತ್ರೆ ನಡೆಸಿದ ಜಿಟಿಡಿ, ಮತ ನೀಡುವಂತೆ ಕೋರಿದರು. ನಗರ ಪಾಲಿಕೆ ಸದಸ್ಯ ರಮೇಶ್, ಜಿಪಂ ಮಾಜಿ ಸದಸ್ಯ ದಿನೇಶ್, ಮುಖಂಡರಾದ ಸಿದ್ದಲಿಂಗ ಪುರ ಅರ್ಕೇಶ್ ಮಾದೇಶ್, ರಾಮೇಗೌಡ, ಗೋಪಾಲ್ ಸೇರಿದಂತೆ ನೂರಾರು ಮಂದಿ ಸಾಥ್ ನೀಡಿದರು.

ಟ್ರಿಣ್ ಟ್ರಿಣ್ ವೇಗ ಜೊತೆಗೆ ಆಧುನಿಕ ಟಚ್

ಸದ್ಯದಲ್ಲಿಯೇ ರಸ್ತೆಗಿಳಿಯಲಿವೆ ಗೇರ್ ಸೈಕಲ್‌ಗಳು



● ಗಣೇಶ್.ಎ

ಮೈಸೂರು, ಏ.24-ಎಲ್ಲರ ಅಚ್ಚುಮೆಚ್ಚಿನ ಟ್ರಿಣ್ ಟ್ರಿಣ್ ಸೈಕಲ್ ಬದಲು ಮೈಸೂರಿನ ನಾಗರಿಕರಿಗೆ ಚುನಾವಣೆ ನಂತರ ನೂತನ ಗೇರ್ ಸೈಕಲ್‌ಗಳು ದೊರೆಯಲಿವೆ.

ಐದು ವರ್ಷಗಳ ಹಿಂದೆ ಮೈಸೂರಿನಲ್ಲಿ ಆರಂಭಗೊಂಡ 'ಟ್ರಿಣ್ ಟ್ರಿಣ್ ಪಬ್ಲಿಕ್ ಬೈಸಿಕಲ್ ಷೇರಿಂಗ್' ಯೋಜನೆಯನ್ನು ಆಧುನೀಕರಣಗೊಳಿಸುವ ಸಲುವಾಗಿ ಈ ಸೈಕಲ್ ಸೇವೆ ಸ್ಥಗಿತಗೊಳಿಸಲಾಗಿದ್ದು, ಶೀಘ್ರದಲ್ಲಿಯೇ ಹೊಸ ಗೇರ್ ಸೈಕಲ್‌ಗಳು ರಸ್ತೆಗೆ ಇಳಿಯಲಿವೆ.

ವಾಯುಮಾಲಿನ್ಯ ತಡೆ ಮತ್ತು ಸೈಕಲ್ ಬಳಕೆಯನ್ನು ಜನಪ್ರಿಯಗೊಳಿಸುವ ಸಲುವಾಗಿ ಪಾಲಿಕೆಯು ನಗರದಲ್ಲಿ 'ಟ್ರಿಣ್ ಟ್ರಿಣ್ ಪಬ್ಲಿಕ್ ಬೈಸಿಕಲ್ ಷೇರಿಂಗ್' ಯೋಜನೆಗೆ 4 ಜೂನ್ 2017 ರಂದು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನಗರದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಚಾಲನೆ ನೀಡಿದ್ದರು.

'ಟ್ರಿಣ್ ಟ್ರಿಣ್ ಪಬ್ಲಿಕ್ ಬೈಸಿಕಲ್ ಷೇರಿಂಗ್' ಯೋಜನೆಯ ಜವಾಬ್ದಾರಿಯನ್ನು 'ಗ್ರೀನ್ ವ್ಹೀಲ್ ರೈಡ್' ಸಂಸ್ಥೆಯು ಹೊತ್ತು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿತು. ಈ ವೇಳೆ 19 ಸಾವಿರ ಬಳಕೆದಾರರಿದ್ದರು. ಹೀಗಾಗಿ ಯೋಜನೆಯು ಯಶಸ್ವಿಯಾಗಿ ಐದು ವರ್ಷಗಳನ್ನು ಪೂರೈಸಿತು. 'ಗ್ರೀನ್ ವ್ಹೀಲ್ ರೈಡ್' ಸಂಸ್ಥೆಯೊಂದಿಗೆ ನಗರ ಪಾಲಿಕೆ ಮಾಡಿಕೊಂಡ ಒಡಂಬಡಿಕೆ ಡಿಸೆಂಬರ್‌ಗೆ ಅಂತ್ಯಗೊಂಡಿತ್ತು. ಹೊಸದಾಗಿ ಟೆಂಡರ್ ಪಡೆದುಕೊಂಡ ಸಂಸ್ಥೆಯು ಸೇವೆ ಪುನರ್ ಪ್ರಾರಂಭಿಸಲು ಕಾಲಾವಕಾಶ ಬೇಕೆಂದು ಕೇಳಿಕೊಂಡ ಹಿನ್ನೆಲೆಯಲ್ಲಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ 'ಗ್ರೀನ್ ವೀಲ್ ರೈಡ್' ಸಂಸ್ಥೆಯು ಬೈಸಿಕಲ್ ಸೇವೆಯನ್ನು ಮಾ.21ರವರೆಗೆ ಉಚಿತವಾಗಿ ಮುಂದುವರೆಸಿತು.

ಟ್ರಿಣ್ ಟ್ರಿಣ್‌ಗೆ ಉತ್ತಮ ಸ್ಪಂದನೆ ವ್ಯಕ್ತವಾದ ಹಿನ್ನೆಲೆಯಲ್ಲಿ ನಗರ ಪಾಲಿಕೆಯು 'ಟ್ರಿಣ್ ಟ್ರಿಣ್ ಪಬ್ಲಿಕ್ ಬೈಸಿಕಲ್ ಷೇರಿಂಗ್' ಯೋಜನೆಯನ್ನು ಆಧುನೀಕರಣಗೊಳಿಸಲು ನಿರ್ಧರಿಸಿ ಹೊಸದಾಗಿ ಟೆಂಡರ್ ಕರೆದು ಕಾರ್ಯಾದೇಶ ನೀಡಿದ್ದು, ಪ್ರಸ್ತುತ ನಗರದಲ್ಲಿ 450 ಬೈಸಿಕಲ್ ಹಾಗೂ 48 ನಿಲ್ದಾಣಗಳು ಇವೆ. ಇದನ್ನು 1000 ಬೈಸಿಕಲ್, 100 ನಿಲ್ದಾಣಕ್ಕೆ ವಿಸ್ತರಿಸಲಾಗುತ್ತಿದೆ. ಹೊಸ ಸೈಕಲ್‌ಗಳು ಸ್ವಯಂ ಚಾಲಿತ ಸ್ಮಾರ್ಟ್ ಲಾಕ್ ವ್ಯವಸ್ಥೆಯನ್ನು ಹೊಂದಿದ್ದು, ಈ ಹಿಂದಿನ ಡಾಕಿಂಗ್ ವ್ಯವಸ್ಥೆ ಇರುವುದಿಲ್ಲ. ಸ್ಮಾರ್ಟ್‌ಫೋನ್ ಮೂಲಕವೇ ಲಾಕ್ ಹಾಗೂ ಅನ್‌ಲಾಕ್ ಮಾಡುವ ವ್ಯವಸ್ಥೆ ಇರಲಿದೆ. ಹಾಗಾಗಿ ಈ ಹಿಂದಿನ ಡಾಕಿಂಗ್ ಸ್ಟೇಷನ್ ಅನ್ನು ಆಧುನೀಕರಣಗೊಳಿಸಲಾಗುತ್ತಿದೆ. ನಗರದಲ್ಲಿ ಈಗಾಗಲೇ ಹೊಸ ಬೈಸಿಕಲ್ ಸೇವೆ ಒದಗಿಸಲು ಬೇಕಾದ ಸಿದ್ಧತೆಗಳನ್ನು ಕೈಗೊಳ್ಳಲಾಗಿದ್ದು, ಚುನಾವಣೆಯ ನಂತರ ಈ ಯೋಜನೆ ಜಾರಿಗೆ ಬರಲಿದೆ.

ಮೊಬೈಲ್ ಆ್ಯಪ್ ಬಳಕೆ : ಟ್ರಿಣ್ ಟ್ರಿಣ್ ಸೈಕಲ್ ಅನ್ನು ಬಳಸಲು ಈ ಹಿಂದೆ ಅವುಗಳ ಕೇಂದ್ರಗಳಿಗೆ ತೆರಳಿ ನೋಂದಣಿ ಮಾಡಿಕೊಳ್ಳಬೇಕಿತ್ತು. ಆದರೆ, ಈ ನೂತನ ಗೇರ್ ಸೈಕಲ್ ಬಂದ ನಂತರ ತಾವು ಕುಳಿತಲ್ಲಿಯೇ ಮೊಬೈಲ್ ಆ್ಯಪ್ ಬಳಸಿಕೊಂಡು ಆನ್‌ಲೈನ್ ಮೂಲಕ ನೋಂದಣಿ ಮತ್ತು ಹಣ ಪಾವತಿಯನ್ನು ಮಾಡಿಕೊಳ್ಳಬಹುದಾಗಿದೆ. ಇದರಿಂದ ನಗರದಲ್ಲಿ ಖಾಸಗಿ ಸಂಸ್ಥೆಗಳ ಉದ್ಯೋಗಿಗಳು ಕಚೇರಿಗೆ ಮತ್ತು ವಿದ್ಯಾರ್ಥಿಗಳು ಶಾಲಾ-ಕಾಲೇಜಿಗೆ ತೆರಳಲು ಹೆಚ್ಚಿನ ಅನುಕೂಲವಾಗಲಿದೆ.

ಸೈಕಲ್ ಮೇಲೆ ಹೆಚ್ಚಿದ ಒಲವು: ಕೊರೊನಾ ನಂತರ ವಿಶ್ವದಾದ್ಯಂತ ಎಲ್ಲರಿಗೂ ಆರೋಗ್ಯ ಕಾಳಜಿ ಹೆಚ್ಚಾಗಿದ್ದು, ಯೋಗ, ವ್ಯಾಯಾಮ, ಜಿಮ್, ವಾಯುವಿಹಾರ ಸೇರಿದಂತೆ ಸೈಕಲ್ ಬಳಕೆ ಮೇಲು ಎಲ್ಲರಿಗೂ ಒಲವು ಹೆಚ್ಚಾಗಿದ್ದು, ನಗರದಲ್ಲಿ 'ಟ್ರಿಣ್ ಟ್ರಿಣ್' ಸೈಕಲ್‌ಗಳ ಬಳಕೆ ಪ್ರಮಾಣ ಕೂಡ ಹೆಚ್ಚಾಗಿದೆ 2017ರ ಜೂನ್ 4 ರಂದು ಪ್ರಾರಂಭಗೊಂಡ 'ಟ್ರಿಣ್ ಟ್ರಿಣ್ ಪಬ್ಲಿಕ್ ಬೈಸಿಕಲ್ ಷೇರಿಂಗ್' ಯೋಜನೆಯಡಿ 19 ಸಾವಿರ ಜನರು ನೋಂದಾಯಿಸಿಕೊಂಡಿದ್ದು, ಪ್ರತಿನಿತ್ಯ 1,200 ರಿಂದ 1,800 ಜನರು ಬಳಕೆ ಮಾಡುತ್ತಿದ್ದರು. ಇದೀಗ ಈ ಸೇವೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಸಾಕಷ್ಟು ಜನರಿಗೆ ಅನಾನುಕೂಲವಾಗಿದೆ.

ಸೈಕಲ್ ಟ್ರ್ಯಾಕ್ ನಿರ್ಮಾಣ: ನಗರ ಪಾಲಿಕೆಯು ಸೈಕಲ್ ಬಳಕೆದಾರರಿಗೆ ಹೊಸ ಸೈಕಲ್ ಟ್ರ್ಯಾಕ್ ನಿರ್ಮಾಣಕ್ಕೂ ಯೋಜನೆ ರೂಪಿಸಿದೆ. ನಗರದ ಲಲಿತಮಹಲ್ ರಸ್ತೆಯ ಒಂದು ಭಾಗದಲ್ಲಿ ಈ ಹಿಂದೆಯೇ ಸೈಕಲ್ ಟ್ರ್ಯಾಕ್ ನಿರ್ಮಾಣ ಮಾಡಲಾಗಿದೆ. ಅದೇ ರೀತಿ ನಗರದ ವಿವಿಧ ಪ್ರಮುಖ ರಸ್ತೆಗಳಲ್ಲೂ ಸೈಕಲ್ ಟ್ರ್ಯಾಕ್ ನಿರ್ಮಾಣ ಮಾಡಲು ಪಾಲಿಕೆ ಉದ್ದೇಶಿಸಿದೆ. ಒಟ್ಟು 3.3 ಕೋಟಿ ರೂ. ವೆಚ್ಚದಲ್ಲಿ 8.72 ಕಿ.ಮೀ. ಉದ್ದದ ಸೈಕಲ್ ಟ್ರ್ಯಾಕ್ ನಿರ್ಮಾಣ ಮಾಡಲು ನಿರ್ಧರಿಸಿದೆ.

> ಟ್ರಿಣ್ ಟ್ರಿಣ್ ಯೋಜನೆಯ ಟೆಂಡರ್ ಅವಧಿ ಮುಕ್ತಾಯವಾಗಿದ್ದು, ಈಗ ಗೇರ್ ಸೈಕಲ್‌ಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ಈಗಾಗಲೇ ಇದಕ್ಕಾಗಿ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಚುನಾವಣೆ ನಂತರ ನೂತನ ಸೈಕಲ್‌ಗಳು ರಸ್ತೆಗಿಳಿಯಲಿವೆ.
>
> -ಲಕ್ಷ್ಮೀಕಾಂತ ರೆಡ್ಡಿ,
> ಆಯುಕ್ತ, ಮಹಾನಗರ ಪಾಲಿಕೆ





ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಸಿಎಸ್‌ಕೆ	7	5	2	0	10
ರಾಜಸ್ಥಾನ್	7	4	3	0	8
ಲಕ್ನೋ	7	4	3	0	8
ಗುಜರಾತ್	6	4	2	0	8
ಆರ್‌ಸಿಬಿ	7	4	3	0	8
ಪಂಜಾಬ್	7	4	3	0	8
ಮುಂಬೈ	6	3	3	0	6
ಕೋಲ್ಕತ್ತಾ	7	2	5	0	4
ಎಸ್‌ಆರ್‌ಹೆಚ್	7	2	5	0	4
ಡೆಲ್ಲಿ	7	2	5	0	4

ಸನ್‌ರೈಸರ್ಸ್ ಮಣಿಸಿದ ಡೆಲ್ಲಿ ಕ್ಯಾಪಿಟಲ್ಸ್



ಹೈದರಾಬಾದ್, ಏ.24– ಆರಂಭಿಕ ಹಂತದಲ್ಲಿ ಸನ್‌ರೈಸರ್ಸ್ ಸುಲಭವಾಗಿ ರನ್ ಚೇಸ್ ಮಾಡಲಿದೆ ಎಂಬ ಲೆಕ್ಕಾಚಾರ ಎಲ್ಲರಲ್ಲಿತ್ತು. ಆದರೆ ಡೆಲ್ಲಿ ಅತ್ಯುತ್ತಮ ದಾಳಿಯಿಂದ ಪರಿಸ್ಥಿತಿಯೇ ಬದಲಾಯಿತು. ಹೈದರಾಬಾದ್ ವಿಕೆಟ್ ಪತನದಿಂದ ಡೆಲ್ಲಿ ಪಂದ್ಯದ ಮೇಲೆ ಹಿಡಿತ ಸಾಧಿಸಿತು.ಅಂತಿಮ ಹಂತದಲ್ಲಿ ಹೆನ್ರಿಚ್ ಕ್ಲಾಸೆನ್ ಹಾಗೂ ವಾಷಿಂಗ್ಟನ್ ಸುಂದರ್ ಜೊತೆಯಾಟದಿಂದ ಸನ್ರೈಸರ್ಸ್ ಹೈದರಾಬಾದ್ ತಂಡದಲ್ಲಿ ಗೆಲುವಿನ ಆಸೆ ಚಿಗುರಿತಾದರೂ ಅಂತಿಮ ಎರಡು ಓವರ್‌ನಲ್ಲಿ ಪಂದ್ಯದ ದಿಕ್ಕು ಮತ್ತೆ ಬದಲಾಯಿತು. ಹೈದರಾಬಾದ್ 6 ವಿಕೆಟ್ ನಷ್ಟಕ್ಕೆ 137 ರನ್ ಸಿಡಿಸಿತು. ಈ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ 7 ರನ್ ರೋಚಕ ಗೆಲುವು ಕಂಡಿತು. ಇದರೊಂದಿಗೆ ಡೆಲ್ಲಿ ಸತತ 2ನೇ ಗೆಲುವು ದಾಖಲಿಸಿತು.

145 ರನ್ ಸುಲಭ ಟಾರ್ಗೆಟ್ ಪಡೆದ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ನಿರೀಕ್ಷಿತ ಆರಂಭ ಸಿಗಲಿಲ್ಲ. ಹ್ಯಾರಿ ಬ್ರೂಕ್ ಕೇವಲ 7 ರನ್ ಸಿಡಿಸಿ ನಿರ್ಗಮಿಸಿದರು. ಮಯಾಂಕ್ ಅಗರ್ವಾಲ್ ದಿಟ್ಟ ಹೋರಾಟ ನಡೆಸಿದರೆ, ಇತ್ತ ಯಾರಿಂದಲೂ ಉತ್ತಮ ಸಾಥ್ ಸಿಗಲಿಲ್ಲ. ಹೀಗಾಗಿ ಸನ್ರೈಸರ್ಸ್ ಹೈದರಬಾದ್ ಕುಸಿತ ಕಂಡಿತು.

ಮಯಾಂಕ್ ಅಗರ್ವಾಲ್ 39 ಎಸೆತದಲ್ಲಿ 49 ರನ್ ಸಿಡಿಸಿದರು. ಇತ್ತ ರಾಹುಲ್ ತ್ರಿಪಾಠಿ 15 ರನ್ ಸಿಡಿಸಿ ಔಟಾದರು. ಅಭಿಷೇಕ್ ಶರ್ಮಾ 5 ರನ್ ಗಳಿಸಿದರೆ, ನಾಯಕ ಆಡಿನ್ ಮರ್ಕ್ರಮ್ ಕೇವಲ 3 ರನ್ ಗಳಿಸಿ ಔಟಾದರು. ಹೆನ್ರಿಚ್ ಕ್ಲಾಸೀನ್ ಹಾಗೂ ವಾಶಿಂಗ್ಟನ್ ಸುಂದರ್ ಮೇಲೆ ಒತ್ತಡ ಹೆಚ್ಚಾಯಿತು. ಸನ್ರೈಸರ್ಸ್ ಗೆಲುವಿಗೆ ಅಂತಿಮ 30 ಎಸೆತದಲ್ಲಿ 56 ರನ್ ಅವಶ್ಯಕತೆ ಇತ್ತು.

ಹೆನ್ರಿಚ್ ಕ್ಲಾಸೀನ್ ದಿಟ್ಟ ಹೋರಾಟದಿಂದ ಹೈದರಾಬಾದ್ ಮತ್ತೆ ಪಂದ್ಯದ ಮೇಲೆ ಹಿಡಿತ ಸಾಧಿಸಿತು. ಕ್ಲಾಸೀನ್ 19 ಎಸೆತದಲ್ಲಿ 31 ರನ್ ಸಿಡಿಸಿ ಔಟಾದರು.

ಅಂತಿಮ ಓವರ್‌ನಲ್ಲಿ ಹೈದರಾಬಾದ್ ಗೆಲುವಿಗೆ 13 ರನ್ ಅವಶ್ಯಕತೆ ಇತ್ತು. ಆದರೆ ಹೈದರಾಬಾದ್ 5 ರನ್ ಸಿಡಿಸಿತು. 6 ವಿಕೆಟ್ ನಷ್ಟಕ್ಕೆ 137 ರನ್ ಸಿಡಿಸಿ ಸೋಲೊಪ್ಪಿಕೊಂಡಿತು.

ಡೆಲ್ಲಿ ಇನ್ನಿಂಗ್ಸ್: ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 9 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಿತು. ನಾಯಕ ಡೇವಿಡ್ ವಾರ್ನರ್ 21 ರನ್ ಹೊಡೆದು ಔಟಾದರು. ಮಿಚೆಲ್ ಮಾರ್ಶ್ 21, ಸರ್ಫರಾಜ್ ಖಾನ್ 10 ರನ್ ಗಳಿಸಿ ಔಟಾದರು. ಮನೀಶ್ ಪಾಂಡೆ 34 ರನ್ ಕಾಣಿಕೆ ನೀಡಿದರು. ಪಾಂಡೆ ಹೋರಾಟದಿಂದ ಹೈದರಾಬಾದ್ ಚೇತರಿಸಿಕೊಂಡಿತು. ಅಕ್ಷರ್ ಪಟೇಲ್ 34 ರನ್ ಸಿಡಿಸಿದರು.

ಐಪಿಎಲ್ ಅಂಕಪಟ್ಟಿ: ಪಾಯಿಂಟ್ಸ್ ಟೇಬಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮೊದಲ ಸ್ಥಾನದಲ್ಲಿದೆ. ಚೆನ್ನೈ 7ರಲ್ಲಿ 5 ಗೆಲುವು ದಾಖಲಿಸಿ 10 ಅಂಕ ಸಂಪಾದಿಸಿದೆ. ಇನ್ನು ರಾಜಸ್ತಾನ ರಾಯಲ್ಸ್ 7ರಲ್ಲಿ 4 ಗೆಲುವು ದಾಖಲಿಸಿ 2ನೇ ಸ್ಥಾನದಲ್ಲಿದೆ. ಲಖನೌ ಸೂಪರ್ ಜೈಂಟ್ಸ್ 7ರಲ್ಲಿ 4 ಗೆಲುವಿನ ಮೂಲಕ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಗುಜರಾತ್ ಟೈಟಾನ್ಸ್ 6 ಪಂದ್ಯದಲ್ಲಿ 4 ಗೆಲುವು ದಾಖಲಿಸಿ 4ನೇ ಸ್ಥಾನದಲ್ಲಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು 7 ಪಂದ್ಯದಲ್ಲಿ 4 ರಲ್ಲಿ ಗೆಲುವು ದಾಖಲಿಸಿ 5ನೇ ಸ್ಥಾನದಲ್ಲಿದೆ.



ಕೆ.ಆರ್ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಮತಯಾಚನೆ



ಮೈಸೂರು, 24(ಎಂಕೆ)– ಕೆ.ಆರ್. ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯಥಿ ಟಿ.ಎಸ್.ಶ್ರೀವತ್ಸ ಬಿರುಸಿನ ಪ್ರಚಾರ ನಡೆಸುತ್ತಿದ್ದು, ಸೋಮವಾರ ವಿವಿಧೆಡೆ ಪಾದಯಾತ್ರೆ ನಡೆಸಿ ಮತಯಾಚಿಸಿದರು. ವಾರ್ಡ್ 63ರ ವ್ಯಾಪ್ತಿಯ ಜೆ.ಪಿ.ನಗರ, ವಾರ್ಡ್ ನಂ.62ರ ವಿಶ್ವೇಶ್ವರನಗರ, ವಾರ್ಡ್ ನಂ.48ರ ವ್ಯಾಪ್ತಿಯ ಜಯನಗರದ ಹಾಗೂ ವಾರ್ಡ್ ನಂ.49ರ ವ್ಯಾಪ್ತಿಯ ಹುಲ್ಲಿನ ಬೀದಿ, ರಾಮಾನುಜ ರಸ್ತೆ, ಹೊಸ ಬಂಡಿಕೇರಿ, ಮಾಧವ ಚಾರ್ ರಸ್ತೆ, ಗಾಡಿ ಚೌಕ, ಅದಮ್ ಖಾನ್ ಮಸಿದಿ, ಲಕ್ಮೀಪುರಂ, ನಂಜು ಮಳಿಗೆ ವೃತ್ತದಲ್ಲಿ ಮತಯಾಚಿಸಿದರು. ಇದೇ ವೇಳೆ ಅಗ್ರಹಾರದಲ್ಲಿರುವ 101 ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಗೆಲವಿಗಾಗಿ ಪಾರ್ಥನೆ ಸಲ್ಲಿಸಿದರು.

ಇದಕ್ಕೂ ಮುನ್ನ ಮಾಜಿ ಎಂಎಲ್‌ಸಿ ಪ್ರೊ.ಮಲ್ಲಿಕಾರ್ಜುನಪ್ಪ ಅವರ ಮನೆಗೆ ಭೇಟಿ ನೀಡಿ, ಬೆಂಬಲ ನೀಡುವಂತೆ ಕೋರಿದರು. ಪಾಲಿಕೆ ಸದಸ್ಯರಾದ ಸೌಮ್ಯ ಉಮೇಶ್, ಬಿ.ವಿ.ಮಂಜುನಾಥ, ಮುಖಂಡರಾದ ಸುದರ್ಶನ್, ಕಿಶೋರ್, ಪ್ರಕಾಶ್ ಪಟೇಲ್, ಅರುಣ್, ಶಂಕರ್ ಸಿಂಗ್, ಕೀರ್ತಿ, ಶ್ರೀದರ, ಗುರುದತ್ತ, ಅನ್ನಪೂರ್ಣ ಮತ್ತಿತರರಿದ್ದರು.



ಉದ್ಯಮಿ ಹಾಗೂ ಶ್ರೀಕೃಷ್ಣ ಎಂಟರ್‌ಪ್ರೈಸಸ್ ಮಾಲೀಕರಾದ ಪ್ರದೀಪ್ ಸಿಂಗ್ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಬಿಜೆಪಿ ಮುಖಂಡರಾದ ರಮೇಶ್, ಉದ್ಯಮಿ ಜಾಕಿರ್ ಹುಸೇನ್, ಸಂತೋಷ್(ಶಂಭು), ಚಾಮುಂಡೇಶ್ವರಿ ಪ್ಲೈವುಡ್ ಮಾಲೀಕರಾದ ಮಹದೇವ ಇತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಂಯ ಕೋರಿದರು.

ಹಾಸನದಲ್ಲಿ ಪ್ರೀತಂಗೌಡ ಕೆಲಸದ ಆಧಾರದಲ್ಲಿ 4 ಸೀಟ್ ಗೆಲ್ತೀವಿ

ಹಾಸನ : ಶಾಸಕ ಪ್ರೀತಂಗೌಡ ಮಾಡಿರುವ ಕೆಲಸದ ಆಧಾರದಲ್ಲಿ ಹಾಸನ ಜಿಲ್ಲೆಯಲ್ಲಿ ಒಂದಲ್ಲ 4 ಸೀಟು ಗೆಲ್ಲುತ್ತೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್‌ಶಾ ತಿಳಿಸಿದರು.



ರೋಡ್ ಶೋನಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಬಾರಿ ಪ್ರೀತಂ ಗೌಡ ಮಾಡಿರುವ ಕೆಲಸದ ಆಧಾರದಲ್ಲಿ ಹಾಸನ ಜಿಲ್ಲೆಯಲ್ಲಿ ಒಂದಲ್ಲ ನಾಲ್ಕು ಸೀಟು ಗೆಲ್ಲುತ್ತೇವೆ ಜೆಡಿಎಸ್‌ನ ಎಲ್ಲಾ ನಾಯಕರು ಪ್ರೀತಂಗೌಡಗೆ ಚಾಲೆಂಜ್ ಮಾಡಿದ್ದಾರೆ. ಪ್ರೀತಂಗೌಡರ ಜೊತೆ ನಾನು ಸೇರಿದಂತೆ ಇಡೀ ಬಿಜೆಪಿ ಇದೆ. ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಮೈದಾನದಿಂದ ಓಡಿಸುವುದು ಅಷ್ಟು ಸುಲಭವಲ್ಲ ಎಂದು ಜೆಡಿಎಸ್ ನಾಯಕರಿಗೆ ತಿರುಗೇಟು ನೀಡಿದರು.

ಕಾಂಗ್ರೆಸ್, ಜೆಡಿಎಸ್‌ನವರು ಮುಸ್ಲಿಮರಿಗೆ ಮೀಸಲಾತಿ ಕೊಟ್ಟಿದ್ದರು. ನಾವು ಅದನ್ನು ತೆಗೆದು ಹಿಂದುಳಿದ ವರ್ಗದವರಿಗೆ ನೀಡಿದ್ದೇವೆ. ಜೆಡಿಎಸ್ ವೋಟು ಕೊಟ್ಟರೆ ಕಾಂಗ್ರೆಸ್‌ಗೆ ವೋಟು ಕೊಟ್ಟ ರೀತಿ ಆಗುತ್ತದೆ. ಸಕಲೇಶಪುರ ಕ್ಷೇತ್ರದ ಜನತೆ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೇನೆ ಎಂದರು.

ಮೈಮುಲ್ ಮೆಗಾ ಡೈರಿಯಲ್ಲಿ ಚುನಾವಣಾ ಜಾಗೃತಿ



ಮೈಸೂರು, ಏ.24(ಎಂಕೆ)– ಮೈಸೂರಿನ ಬನ್ನೂರು ಮುಖ್ಯರಸ್ತೆಯಲ್ಲಿರುವ (ಆಲನಹಳ್ಳಿ ಸಮೀಪ) ಮೈಮುಲ್ ಮೆಗಾ ಡೈರಿಯಲ್ಲಿ ಚುನಾವಣಾ ಜಾಗೃತಿ ಮೂಡಿಸಲಾಯಿತು.

ಜಿಲ್ಲಾಡಳಿತ, ಜಿಪಂ, ನಗರಪಾಲಿಕೆ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಅಭಿಯಾನದಲ್ಲಿ ಕಡ್ಡಾಯ ಮತದಾನ ಮಾಡುವಂತೆ ಪ್ರಮಾಣ ವಚನ ಬೋಧಿಸಲಾಯಿತು. ಇದೇ ವೇಳೆ ಮೆಗಾ ಡೈರಿಯಲ್ಲಿದ್ದ ನೂರಾರು ಸಿಬ್ಬಂದಿಗಳಿಗೆ ಮತದಾನದ ಮಹತ್ವದ ಕುರಿತು ಮಾಹಿತಿಯುಳ್ಳ ಕರಪತ್ರಗಳನ್ನು ವಿತರಣೆ ಮಾಡಲಾಯಿತು.

ನಗರ ಪಾಲಿಕೆ ವಲಯ ಕಚೇರಿ ಆಯುಕ್ತ ಶಿವಕುಮಾರ್ ಮಾತನಾಡಿ, ಮತದಾನ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ದೇಶದ ಪ್ರಗತಿಗೆ ಸಹಕರಿಸಿ ಎಂದು ಕೋರಿದರು. ನಗರಪಾಲಿಕೆ ಪರಿಸರ ಇಂಜಿನಿಯರ್ ಎಸ್.ಮೈತ್ರಿ, ಪಾಲಿಕೆ ಸ್ವೀಪ್ ಸಮಿತಿ ತಂಡದ ಸದಸ್ಯರು ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ಕಲಾತ್ಮಕ ಆಭರಣಗಳ ಪ್ರದರ್ಶನ, ಮಾರಾಟ


ಮೈಸೂರು, ಏ.24(ಎಂಕೆ)– ಮೈಸೂರಿನ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶಾಖೆಯಲ್ಲಿ ಆಯೋಜಿಸಿರುವ ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಕಲಾತ್ಮಕ ಆಭರಣಗಳ ಪ್ರದರ್ಶನ ಮತ್ತು ಮಾರಾಟ(ಆರ್ಟಿಸ್ಟ್ರಿ ಬ್ರ್ಯಾಂಡೆಡ್ ಜ್ಯುವೆಲರಿ ಶೋ)ಕ್ಕೆ ಸೋಮವಾರ ಚಾಲನೆ ನೀಡಲಾಯಿತು.



ಏ.30ರವರೆಗೆ ನಡೆಯುವ ಕಲಾತ್ಮಕ ಜ್ಯುವೆಲರಿ ಶೋಗೆ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್‌ನ ವಿಶೇಷ ಗ್ರಾಹಕರು ಹಾಗೂ ರೂಪದರ್ಶಿಯರಾದ ಐಶ್ವರ್ಯ ಅನಿಲ್, ದಾಮಿನಿ, ನೀತುಗೌಡ, ಸಂಧ್ಯಾ ಹಾಗೂ ಶ್ವೇತಾ ಗೌಡ ಚಾಲನೆ ನೀಡಿದರು. ಈ ವೇಳೆ ವಲಯ ಮುಖ್ಯಸ್ಥ ಶರಫುದ್ದೀನ್ ಮಾತನಾಡಿ, ಪಾರಂಪರಿಕ ಕಲಾತ್ಮಕ ಶೈಲಿಯ ಚಿನ್ನ ಹಾಗೂ ವಜ್ರದ ಆಭರಣಗಳ ಪ್ರದರ್ಶನ ಮತ್ತು ಮಾರಾಟ 9 ದಿನಗಳವರೆಗೆ ನಡೆಯಲಿದೆ ಎಂದರು.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಯಶಸ್ವಿಯಾಗಿ 30 ವರ್ಷ ಪೂರೈಸಿದೆ. ಹೆಚ್‌ಯುಐಡಿ, ಬಿಐಎಸ್ ಹಾಲ್‌ಮಾರ್ಕ್ ಚಿನ್ನ, ಐಜಿಐ ಪ್ರಮಾಣೀಕೃತ ಡೈಮಂಡ್ ಆಭರಣಗಳು, ಪಿಜಿಐ ಪ್ರಮಾಣೀಕೃತ ಪ್ಲಾಟಿನಂ ಆಭರಣಗಳು ಹಾಗೂ ಹಾಲ್‌ಮಾರ್ಕ್ ಇರುವ ಬೆಳ್ಳಿ ಆಭರಣಗಳನ್ನು ಮಾತ್ರ ಮಾರಾಟ ಮಾಡುತ್ತಿದೆ. ಕಲಾತ್ಮಕ ಶೈಲಿಯ ಚಿನ್ನಾಭರಣಗಳು ಲಭ್ಯವಿದ್ದು, ಅಕ್ಷಯ ತೃತಿಯ ಶುಭ ಸಂದರ್ಭದಲ್ಲಿ ಗ್ರಾಹಕರು ಸದ್ಬಳಕೆ ಮಾಡಿಕೊಳ್ಳವಂತೆ ಮನವಿ ಮಾಡಿದರು. ಸಹಾಯಕ ಸ್ಟೋರ್ ಮುಖ್ಯಸ್ಥ ಫಸಾಲ್ ರೆಹಮಾನ್ ಮತ್ತಿತರರು ಉಪಸ್ಥಿತರಿದ್ದರು.

ಡಿಜಿಟಲ್ ಗ್ರಂಥಾಲಯ ಬಳಕೆಯಲ್ಲಿ ಮೈಸೂರಿಗೆ 4ನೇ ಸ್ಥಾನ



ಮೈಸೂರು, ಏ.24(ಎಂಕೆ)– ಕೊರೊನಾ ಸಂದರ್ಭದಲ್ಲಿ ಆರಂಭಗೊಂಡ 'ಡಿಜಿಟಲ್ ಗ್ರಂಥಾಲಯ(ಇ–ಸಾರ್ವಜನಿಕ ಗ್ರಂಥಾಲಯ)' ಬಳಕೆಯಲ್ಲಿ ಮೈಸೂರು 4ನೇ ಸ್ಥಾನ ಪಡೆದಿದೆ.

ಕರ್ನಾಟಕ ಡಿಜಿಟಲ್ ಪಬ್ಲಿಕ್ ಲೈಬ್ರರಿ(ಕೆಡಿಪಿಎಲ್) ಯೋಜನೆ ಇದಾಗಿದ್ದು, ಓದುಗರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. 2020ರಿಂದ ಆರಂಭವಾದ ಡಿಜಿಟಲ್ ಲೈಬ್ರರಿಗೆ ರಿಜಿಸ್ಟರ್ ಮಾಡಿಕೊಳ್ಳುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಉಚಿತ ಸೇವೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.

ಸಾಮಾನ್ಯ ಜ್ಞಾನ, ಶೈಕ್ಷಣಿಕ ಪುಸ್ತಕಗಳು, ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳು, ಸಂಶೋಧನಾ ಪತ್ರಿಕೆಗಳು, ಪಠ್ಯಕ್ರಮ ಮತ್ತು ಎಲ್ಲಾ ತರಗತಿಗಳ ಪ್ರಶ್ನೆ ಪತ್ರಿಕೆಗಳು, ಕಾದಂಬರಿಗಳು ಸೇರಿದಂತೆ ಎಲ್ಲಾ ವಿಷಯಗಳಿಗೂ ಸಂಬಂಧಿಸಿದಂತೆ 20 ಲಕ್ಷಕ್ಕೂ ಹೆಚ್ಚು ಡಿಜಿಟಲ್ ಪಠ್ಯಪುಸ್ತಕಗಳು ಲಭ್ಯವಿರುವ ಡಿಜಿಟಲ್ ಗ್ರಂಥಾಲಯಕ್ಕೆ ಬೇಡಿಕೆ ಹೆಚ್ಚಾಗಿದೆ.

ಇದುವರೆಗೆ 3,38,25,206(ಮೂರು ಕೋಟಿ ಮೂವತ್ತೆಂಟು ಲಕ್ಷದ ಇಪ್ಪತ್ತೈದು ಸಾವಿರದ ಇನ್ನೂರ ಆರು) ಮಂದಿ ಡಿಜಿಟಲ್ ಲೈಬ್ರರಿ ಸದಸ್ಯತ್ವ ಪಡೆದಿದ್ದು, ಬೆಂಗಳೂರು ನಗರ ಜಿಲ್ಲೆ (1,21,70,940 ಮಂದಿ ಸದಸ್ಯತ್ವ)ಮೊದಲ ಸ್ಥಾನ ಪಡೆದಿದೆ. ನಂತರ ಸ್ಥಾನಗಳನ್ನು ಕ್ರಮವಾಗಿ ಹಾವೇರಿ(22,28,442), ಮಂಗಳೂರು (21,44,694), ಮೈಸೂರು(17,25,417), ಕಲಬುರ್ಗಿ (16,69,874), ಗದಗ(16,89,458) ಪಡೆದುಕೊಂಡಿದೆ.

ಡಿಜಿಟಲ್ ಲೈಬ್ರರಿ ಸದಸ್ಯತ್ವ ಪಡೆದವರು ಉಚಿತವಾಗಿ ಆನ್‌ಲೈನ್ ಮೂಲಕ ತಮಗೆ ಬೇಕಾದ ಪುಸ್ತಕಗಳನ್ನು ಅಧ್ಯಯನ ಮಾಡಬಹುದು. ಇದರಿಂದ ಉಚಿತವಾಗಿ ಅಧ್ಯಯನ ನಡೆಸುವುದರ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಿ ನಡೆಸಬಹುದಾಗಿದೆ. ಸದಸ್ಯತ್ವ ಸಂಖ್ಯೆ ಜಾಸ್ತಿಯಾದಷ್ಟು ಓದುಗರಿಗೆ ಅನುಕೂಲವಾಗಲಿದೆ ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉಪ ನಿರ್ದೇಶಕ ಬಿ.ಮಂಜುನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ಕೊರೊನಾ ಸಂದರ್ಭದಲ್ಲಿ ಆರಂಭವಾದ ಡಿಜಿಟಲ್ ಪಬ್ಲಿಕ್ ಲೈಬ್ರರಿಗೆ ಬಾರಿ ಬೇಡಿಕೆ ವ್ಯಕ್ತವಾಗಿದೆ. ಗ್ರಂಥಾಲಯಗಳಿಗೆ ಬರಲಾಗದವರು ಮನೆಯಲ್ಲಿಯೇ ಆನ್‌ಲೈನ್ ಮೂಲಕ ಅಧ್ಯಯನ ನಡೆಸಬಹುದು. ತಮಗಿಷ್ಟವಾದ ಕಥೆ, ಕಾದಂಬರಿಗಳನ್ನು ಓದಲು ಅನುಕೂಲವಾಗಿದೆ. ಇದರಿಂದ ಸಮಯ ಹಾಗೂ ಹಣ ಉಳಿತಾಯವೂ ಆಗುತ್ತದೆ.

-ಬಿ.ಮಂಜುನಾಥ್, ಉಪ ನಿರ್ದೇಶಕ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ

2 ರಿಂದ 35ಕ್ಕೆ: ಮೈಸೂರಿನಲ್ಲಿ 2 ಗ್ರಂಥಾಲಯಗಳಲ್ಲಿ ಆರಂಭಗೊಂಡ ಡಿಜಿಟಲ್ ಗ್ರಂಥಾಲಯದ ಸದಸ್ಯತ್ವ ಹೆಚ್ಚಾದಂತೆ 35 ಗ್ರಂಥಾಲಯಗಳಿಗೆ ವಿಸ್ತರಣೆಯಾಗಿದೆ. ರಾಜ್ಯದ ಪ್ರತಿ ತಾಲೂಕಿನಲ್ಲಿರುವ ಎರಡು ಗ್ರಂಥಾಲಯಗಳಿಗೆ ಡಿಜಿಟಲ್ ಗ್ರಂಥಾಯಲ ಕಲ್ಪಿಸಿದ್ದು, ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿಯೂ ಅಧ್ಯಯನ ನಡೆಸಬಹುದಾಗಿದೆ. ಆಸಕ್ತ ಓದುಗರು ವೆಬ್‌ಸೈಟ್– karnatakadigitalpubliclibrary.org ಮೂಲಕ ಉಚಿತವಾಗಿ ಸದಸ್ಯತ್ವ ಪಡೆದುಕೊಳ್ಳಬಹುದು ಎಂದರು.

ಭ್ರಷ್ಟ ಬಿಜೆಪಿ ಸರ್ಕಾರ ತೊಲಗಿಸಿ, ಕಾಂಗ್ರೆಸ್ ಬೆಂಬಲಿಸಿ

ತಂದೆ ಪರ ಡಾ. ಯತೀಂದ್ರ ಪ್ರಚಾರ



ಮೈಸೂರು,ಏ.24(ಎಂಟಿವೈ)– ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರ ಹಾಗು ಹಗರಣಗಳ ಸರಮಾಲೆಯನ್ನೇ ನಡೆಸಿದ್ದು, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಂಕಷ್ಟಕ್ಕೀಡಾಗಿರುವ ಜನರ ರಕ್ಷಣೆಗಾಗಿ ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ, ಸಿದ್ದರಾಮಯ್ಯ ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಿ ಎಂದು ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ವರುಣಾ ಕ್ಷೇತ್ರದ ಗೊದ್ದನಪುರ, ಮರಳೂರು, ಏಚಗಳ್ಳಿ, ಹಳ್ಳಿದಿಡ್ಡಿ, ತಾಂಡವಪುರ, ಬಂಚಳ್ಳಿಹುಂಡಿ, ಚಿಕ್ಕಯ್ಯನಛತ್ರ, ಅಡಕನಹಳ್ಳಿ ಹುಂಡಿ, ಹೆಬ್ಯಾ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಮನೆಮನೆಗೆ ತೆರಳಿ ಮತಯಾಚಿಸಿದರು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಇದುವರೆಗೂ ಭ್ರಷ್ಟಾಚಾರದಲ್ಲಿಯೇ ಮುಳುಗಿದೆ. ಅಕ್ರಮ ನೇಮಕಾತಿ ನಡೆಸುವ ಮೂಲಕ ಪ್ರತಿಭಾನ್ವಿತರನ್ನು ಕಡೆಗಣಿಸಿದೆ ಎಂದರು.

ಪಿಎಸ್‌ಐ ಹಗರಣ, ಬಿಟ್‌ಕಾಯಿನ್ ಹಗರಣ, ಶೇ. 40 ರಷ್ಟು ಕಮಿಷನ್ ಹಗರಣ, ಕೊರೊನಾ ಕಿಟ್ ಖರೀದಿಯಲ್ಲಿ ಹಗರಣ ನಡೆಸಿ ರಾಜ್ಯವನ್ನು ಲೂಟಿ ಮಾಡಿದೆ ದುರಾಡಳಿತ ನಡೆಸಿ ಅಕ್ರಮವಾಗಿ ಗಳಿಸಿದ ಹಣದಿಂದ ಜನರ ಮತವನ್ನು ಖರೀದಿಸಲು ಬಿಜೆಪಿಗರು ಯತ್ನಿಸುತ್ತಿದ್ದಾರೆ. ಇವರಿಗೆ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲು ಜನ ನಿರ್ಧರಿಸಿದ್ದಾರೆ. ಮಿತಿ ಮೀರಿದ ಭ್ರಷ್ಟಾಚಾರದಿಂದ ರಾಜ್ಯದ ಜನ ರೋಸಿಹೋಗಿದ್ದಾರೆ. ಲೂಟಿಕೋರರ ಸರ್ಕಾರವನ್ನು ಕಿತ್ತೊಗೆಯಲು ಪಣ ತೊಟ್ಟಿದ್ದಾರೆ ಎಂದು ತಿಳಿಸಿದರು. ಇದು ಸಿದ್ದರಾಮಯ್ಯರವರ ಕೊನೆಯ ಚುನಾವಣೆಯಾಗಿದ್ದು, ಅವರನ್ನು ಈ ಬಾರಿ ಗೆಲ್ಲಿಸಿ ಚುನಾವಣಾ ರಾಜಕೀಯದಿಂದ ಗೌರವಯುತವಾಗಿ ಕಳುಹಿಸಿ ಕೊಡಬೇಕಾಗಿರುವುದರಿಂದ ಸಿದ್ದರಾಮಯ್ಯರವರಿಗೆ ಹೆಚ್ಚು ಮತಗಳನ್ನು ನೀಡುವ ಮೂಲಕ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಏಚಗಳ್ಳಿಯ ವೀರಶೈವ ಮುಖಂಡ ವೈ.ಕೆ. ಮಾದಪ್ಪ ಮಾತನಾಡಿ, ಸಿದ್ದರಾಮಯ್ಯರವರು ವರುಣಾ ಕ್ಷೇತ್ರದಲ್ಲಿ ಚುನಾವಣೆಗೆ ನಿಂತಿರುವುದೇ ನಮ್ಮ ಭಾಗ್ಯ. ನಮ್ಮ ಗ್ರಾಮದಲ್ಲಿ ಹೆಚ್ಚು ವೀರಶೈವ ಜನಾಂಗದವರಿದ್ದರೂ ತಮ್ಮ ಗ್ರಾಮದ ಎಲ್ಲಾ ಕೆಲಸಗಳನ್ನು ಅವರ ಆಪ್ತ ಕಾರ್ಯದರ್ಶಿ ಎಂ. ರಾಮಯ್ಯರವರ ಮೂಲಕ ಮಾಡಿಸಿದ್ದಾರೆ. ಚರಂಡಿ, ರಸ್ತೆಗಳು, ಅಂಗನವಾಡಿ ಸಮುದಾಯ ಭವನಗಳನ್ನು ನಿರ್ಮಿಸಲು ಆರ್ಥಿಕವಾಗಿ ಸಹಾಯ ಮಾಡಿ ಕೆಲಸ ಮಾಡಿದ್ದಾರೆ. ಅವರಿಗೆ ನಮ್ಮ ಗ್ರಾಮದಲ್ಲಿ ಹೆಚ್ಚು ಮತಗಳನ್ನು ನೀಡಿ ಗೆಲ್ಲಿಸಿ ಕೊಡುತ್ತೇವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿ ಎಂ. ರಾಮಯ್ಯ, ಜಿಪಂ ಮಾಜಿ ಸದಸ್ಯರಾದ ನಂಜಪ್ಪ, ರೇವಮ್ಮ, ಬಿ.ಎಂ. ರಾಮು, ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ಮುಖಂಡರಾದ ಗೌಡಿಕೆ ಎನ್. ಮಾದಪ್ಪ, ಇಂದನ್‌ಬಾಬು, ದಕ್ಷಿಣಾಮೂರ್ತಿ, ಕೆಂಪಣ್ಣ, ಕೃಷ್ಣಕುಮಾರ್ ಸಾಗರ್, ನಾಡನಹಳ್ಳಿ ರವಿ, ಹೆಳವರಹುಂಡಿ ಸೋಮು, ತಾ.ಪಂ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಅಕ್ಬರ್ ಅಲಿಂ, ಅಮ್ಜದ್, ಶಿವಣ್ಣ, ಸಿದ್ದಯ್ಯ, ಶಿವರುದ್ರಪ್ಪ, ಕುಂಬ್ರಳ್ಳಿ ಮಠ ಮಹದೇವ, ಭಾಗ್ಯಮ್ಮ, ಪುಷ್ಪ ಬೋರೇಗೌಡ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಮಂಗಳವಾರ 25 ಏಪ್ರಿಲ್ 2023

ಜೆಡಿಎಸ್ ಅಧಿಕಾರಕ್ಕೆ ಬಂದರೆ ಮಹಿಳೆಯರ ಸಾಲ ಮನ್ನಾ

ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ



ಹುಣಸೂರು, ಏ.24– ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪಂಚರತ್ನ ರಥಯಾತ್ರೆ ವೇಳೆ ಘೋಷಿಸಿರುವಂತೆ ಮಹಿಳೆಯರು ಸ್ವಸಹಾಯ ಸಂಘ ಹಾಗೂ ಮೈಕ್ರೋ ಫೈನಾನ್ಸ್‌ಗಳಲ್ಲಿ ತೆಗೆದುಕೊಂಡಿರುವ ಸಾಲ ಮನ್ನಾ ಮಾಡಲಿದ್ದಾರೆ ಎಂದು ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ನೇರಳಕುಪ್ಪೆ ಹಾಗೂ ಕಡೇ ಮನುಗನಹಳ್ಳಿ ಗ್ರಾಪಂಗಳಲ್ಲಿ ಪ್ರಚಾರ ಕೈಗೊಂಡು ಮಾತನಾಡಿದ ಅವರು, ಜೆಡಿಎಸ್ ಅಧಿಕಾರಕ್ಕೆ ಬಂದರೆ ಪಂಚರತ್ನ ಯೋಜನೆ ಜಾರಿಗೊಳಿಸಲಾಗುವುದು. ಅಲ್ಲದೇ ರೈತರ ಮುಂಗಾರಿಗೆ ಅನುಕೂಲವಾಗಲೆಂದು ಪ್ರತಿ ಎಕರೆಗೆ 10 ಸಾವಿರದಿಂದ 1 ಲಕ್ಷ ರೂ. ವರೆಗೆ ನೀಡಲಾಗುವುದು. ಈ ಹಿಂದೆ ಕುಮಾರ ಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ಹುಣಸೂರು ತಾಲೂಕಿನ ರೈತರ 26 ಕೋಟಿ ಸಾಲ ಮನ್ನಾ ಮಾಡಿದ್ದಾರೆ. ಮತ್ತೆ ಅಧಿಕಾರಕ್ಕೆ ಬಂದರೆ ರೈತರ ಸಂಪೂರ್ಣ ಸಾಲ ಮನ್ನಾ ಮಾಡುವುದಾಗಿ ಘೋಷಿಸಿದ್ದಾರೆ. ಹೀಗಾಗಿ ರೈತರು, ಬಡವರು, ಕೂಲಿ ಕಾರ್ಮಿಕರ ಪರ ಕೆಲಸ ಮಾಡುವ ಜೆಡಿಎಸ್‌ಗೆ ಮತ ನೀಡುವ ಮೂಲಕ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರಲು ಸಹಕರಿಸ ಬೇಕು ಎಂದು ಮನವಿ ಮಾಡಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್, ಮಾಜಿ ಜಿಪಂ ಸದಸ್ಯ ಕಟ್ಟನಾಯಕ, ಸುಭಾಶ್, ಕಿರಂಗೂರು ಬಸವರಾಜ್, ಚಂದ್ರು, ಶಂಕರ್, ವಿಜಯ್, ಚೌಡಮ್ಮ ಇನ್ನಿತರರಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯರಿಗೆ ರಾಜಕೀಯವೇ ಉದ್ಯೋಗ

- ಶಾಸಕ ಸಾ.ರಾ.ಮಹೇಶ್ ವಾಗ್ದಾಳಿ
- ಆಸ್ತಿ ಎಲ್ಲಿಂದ ಬಂತು ಎಂಬುದನ್ನು ಬಹಿರಂಗಪಡಿಸಲು ಆಗ್ರಹ

ಭೇರ್ಯ, ಏ.24– ಸಮಾಜವಾದಿ ಹಿನ್ನೆಲೆಯ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಉದ್ಯೋಗ ಏನು? ಅವರು ಹೊಂದಿರುವ ಆಸ್ತಿ ಎಲ್ಲಿಂದ ಬಂತು ಎಂಬುದನ್ನು ಸಾಬೀತು ಪಡಿಸಿ ನಂತರ ಬೇರೆಯವರ ವಿರುದ್ಧ ಟೀಕೆ ಮಾಡಲಿ ಎಂದು ಶಾಸಕ ಸಾ.ರಾ.ಮಹೇಶ್ ಆಕ್ರೋಶ ವ್ಯಕ್ತಪಡಿಸಿದರು.

ಹೊಸ ಅಗ್ರಹಾರ ಹೋಬಳಿಯ ಮಾರಗೌಡನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಪ್ರಚಾರ ಆರಂಭಿಸಿದ ವೇಳೆ ಮಾತನಾಡಿದ ಅವರು, ವೀರಶೈವ ಲಿಂಗಾಯತ ಮುಖ್ಯಮಂತ್ರಿಗಳು ಭ್ರಷ್ಟರು ಎಂಬ ಹೇಳಿಕೆ ಅಕ್ಷಮ್ಯ ಅಪರಾಧ. ಮಾಜಿ ಸಿಎಂ ಸಿದ್ದರಾಮಯ್ಯ ರೈತರು ಅಲ್ಲ. ವ್ಯಾಪಾರಸ್ಥರು ಅಲ್ಲ. ಉದ್ದಿಮೆದಾರರು ಅಲ್ಲ. ಆದರೆ ಇಷ್ಟೊಂದು ಆಸ್ತಿ ಭ್ರಷ್ಟಾಚಾರದಿಂದ ಸಂಪಾದಿಸಿರಬೇಕು. ಇಲ್ಲದಿದ್ದರೆ ಎಲ್ಲಿಂದ ಬಂತು ಎಂಬುದನ್ನು ಅವರೇ ಬಹಿರಂಗ ಪಡಿಸಲಿ ಎಂದು ಸವಾಲೆಸೆದರು.

ನಾನು ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದು, ರಾಜಕಾರಣದಲ್ಲಿ ಇರುವವರು ಒಬ್ಬೊಬ್ಬರು ಒಂದೊಂದು ಉದ್ಯೋಗದಲ್ಲಿ ತೊಡಗಿದ್ದು ಅವರ ಆಸ್ತಿ ವಿವರಗಳನ್ನು ಆದಾಯ ತೆರಿಗೆ ಮತ್ತು ಚುನಾವಣಾ ಆಯೋಗಕ್ಕೆ ಸಲ್ಲಿಸಿರುತ್ತಾರೆ. ಆದರೆ ರಾಜಕೀಯವನ್ನೇ ಉದ್ಯೋಗ ಮಾಡಿಕೊಂಡಿರುವ ಸಿದ್ದರಾಮಯ್ಯ ಬೇರೆಯವರನ್ನು ಟೀಕಿಸುವಾಗ ಎಚ್ಚರಿಕೆ ವಹಿಸಿ ಮುಂದೆಯಾದರೂ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು ಎಂದು ಎಚ್ಚರಿಸಿದರು.

ನನ್ನ 15 ವರ್ಷಗಳ ಶಾಸಕ ಅಧಿಕಾರಾವಧಿಯಲ್ಲಿ ಸ್ವಂತಕ್ಕಾಗಿ ಯಾರಿಂದಲೂ ಒಂದು ರೂಪಾಯಿ ಹಣ



ಪಡೆದಿಲ್ಲ. ನಾನು 2004ರಲ್ಲಿ ಚುನಾವಣೆಗೆ ಸ್ಪರ್ಧಿಸಿದಾಗ ನನ್ನ ಆಸ್ತಿ ಎಷ್ಟಿತ್ತು. 2008, 2013, 2018 ರಲ್ಲಿ ಹಾಗೂ ಇಂದು ಚುನಾವಣಾ ಆಯೋಗಕ್ಕೆ ಮತ್ತು ತೆರಿಗೆ ಇಲಾಖೆಗೆ ಸಲ್ಲಿಸಿರುವ ಮಾಹಿತಿಯನ್ನು ಒಂದು ಬಾರಿ ಪರಿಶೀಲಿಸಿ. ನನ್ನ ಸಾಲ 20 ಕೋಟಿ ಆಗಿದೆ ಎಂದರು.

ರಾಜಕೀಯ ಕ್ಷೇತ್ರ ಉದ್ಯೋಗವಲ್ಲ. ಸೇವೆ ಸಲ್ಲಿಸಲು ರಾಜಕೀಯಕ್ಕೆ ಬರಬೇಕೇ ವಿನಃ ಹಣ ಮಾಡಲು ಅಲ್ಲ. ಆದ್ದರಿಂದ ನಮ್ಮ ವಿರೋಧಿ ತಾಲೂಕಿನ ಜನತೆ ಸಂಕಷ್ಟದಲ್ಲಿದ್ದಾಗ ಅವರ ಸಹಾಯಕ್ಕೆ ಬರದೇ ಚುನಾವಣೆಯಲ್ಲಿ ಮತಕ್ಕಾಗಿ ನಾನು 2 ಬಾರಿ ಸೋತಿದ್ದೇನೆ ಎಲ್ಲವನ್ನು ಕಳೆದುಕೊಂಡಿದ್ದೇನೆ ನನ್ನನ್ನು ಕೈಬಿಡಬೇಡಿ ಎಂಬ ಅನುಕಂಪದ ಮತ ಕೇಳುತ್ತಿರುವ ಅಭ್ಯರ್ಥಿ ಬೇಕೋ ವರ್ಷಪೂರ್ತಿ ನಿಮ್ಮ ಮನೆಬಾಗಿಲಿಗೆ ಬಂದು ನಿಮ್ಮ ಸೇವೆ ಮಾಡುತ್ತಿರುವ ನಾನು ಬೇಕೋ ಎಂಬುದನ್ನು ನೀವೇ ನಿರ್ಧರಿಸಿ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಶಾಸಕ ಸಾ.ರಾ.ಮಹೇಶ್ ದಿನದ 24 ಗಂಟೆಯೂ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುತ್ತಾರೆ. ಹೀಗಾಗಿ ಈ ಬಾರಿ ಅಧಿಕ ಮತಗಳಿಂದ ಅವರನ್ನು ಗೆಲ್ಲಿಸಿ. ಕೆ.ಆರ್.ನಗರ ಕ್ಷೇತ್ರ ರಾಜ್ಯದಲ್ಲೇ ಮಾದರಿಯಾಗಲಿದೆ. ಸಾ.ರಾ.ಮಹೇಶ್ ವ್ಯಕ್ತಿ ಅಲ್ಲ. ಅವರು ರಾಜ್ಯದ ಒಂದು ಶಕ್ತಿ. ಶಾಸಕರು ಮಾಜಿ ಸಿಎಂ ಕುಮಾರಸ್ವಾಮಿ ಅವರಿಗೆ ಬೆನ್ನೆಲುಬಾಗಿ ನಿಂತು ಹೋರಾಡುತ್ತಿದ್ದಾರೆ. ಇಂತಹವರು ವಿಧಾನಸಭೆ 3ನೇ ಮಹಡಿಯಲ್ಲಿರಬೇಕು. ಇದಕ್ಕೆ ನಿಮ್ಮ ಆಶೀರ್ವಾದ ಬೇಕು. ಆದ್ದರಿಂದ ತಪ್ಪದೇ ಸಾ.ರಾ. ಮಹೇಶ್ ಅವರಿಗೆ ಮತ ನೀಡಿ ಎಂದರು.

> ಎರಡು ಚುನಾವಣೆಯಲ್ಲಿ ಸೋತು ಎಲ್ಲವನ್ನು ಕಳೆದುಕೊಂಡೆ ಎನ್ನುತ್ತಿರುವ ಕಾಂಗ್ರೆಸ್ ಅಭ್ಯರ್ಥಿ, ಜಿಪಂ ಸದಸ್ಯನಾಗಿ ಚುನಾಯಿತನಾಗುವಾಗ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಸ್ತಿ ಎಷ್ಟು ಈಗಿರುವ ಅಸ್ತಿ ಎಷ್ಟು ಹಾಗೂ ತಾಲೂಕಿನಲ್ಲಿ ಎರಡು ಪೆಟ್ರೋಲ್ ಬಂಕ್ ಮತ್ತು ಬೆಂಗಳೂರಿನಲ್ಲಿ ಗ್ಯಾಸ್ ಏಜೆನ್ಸಿ ಸೇರಿದಂತೆ ಸಂಪಾದನೆ ಮಾಡಿರುವ ಆಸ್ತಿ ಎಲ್ಲಿಂದ ಬಂತು, ಹಾಗಾದರೆ ಕಳೆದುಕೊಂಡಿರುವುದು ಏನು ಎಂಬುದನ್ನು ಸಾರ್ವಜನಿಕರಿಗೆ ತಿಳಿಸಲಿ.
> –ಶಾಸಕ ಸಾ.ರಾ.ಮಹೇಶ್.

ಇದೇ ವೇಳೆ ಅಡಗೂರು, ಗಳಿಗೆಕೆರೆ, ದೊಡ್ಡೇಕೊಪ್ಪಲು, ಕರ್ಗಹಳ್ಳಿ, ಬಡಕನಕೊಪ್ಪಲು, ಮಂಚನಹಳ್ಳಿ, ಬಾಲೂರು, ಬಾಲೂರು ಹೊಸಕೊಪ್ಪಲು, ಹಂಪಾಪುರ, ಸನ್ಯಾಸಿಪುರದಲ್ಲಿ ಶಾಸಕ ಸಾ.ರಾ. ಮಹೇಶ್ ಮತಯಾಚನೆ ಮಾಡಿದರು.

ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಚೆನ್ನಬಸಪ್ಪ, ಜಿಪಂ ಮಾಜಿ ಸದಸ್ಯ ಅಚ್ಯುತಾನಂದ್, ಎಂ.ಟಿ.ಕುಮಾರ್, ದ್ವಾರಕೀಶ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಅಣ್ಣೇಗೌಡ, ತಾಲೂಕು ವಿಶ್ವಕರ್ಮ ಸಮಾಜದ ಮುಖಂಡ ನಂಜುಂಡಚಾರ್, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ತಾ.ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಜೆಡಿಎಸ್ ಅಧ್ಯಕ್ಷರಾದ ಕುಮಾರ್, ರಾಜಣ್ಣ ಸೇರಿದಂತೆ ಇತರರಿದ್ದರು.

ವಿವಿಧೆಡೆ ಶಾಸಕ ಹರ್ಷವರ್ಧನ್ ಮತಬೇಟೆ



ನಂಜನಗೂಡು, ಏ.24– ತಾಲೂಕಿನ ಹಂಡುವಿನಹಳ್ಳಿ, ಹೆಗ್ಗಡಹಳ್ಳಿ, ಬೆಳಲೆ, ಶಿರಮಳ್ಳಿ, ಹುಸ್ಕೂರು, ಹಗಿನವಾಳು, ಅಂಬಳೆ, ವಳಗೆರೆ, ಹರತಲೆ, ದೇವಿರಮ್ಮನಹಳ್ಳಿ ಗ್ರಾಮಗಳಲ್ಲಿ ಶಾಸಕ ಬಿ. ಹರ್ಷವರ್ಧನ್ ಪ್ರಚಾರ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ವಿರೋಧ ಪಕ್ಷದವರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತನಾಡುವುದಿಲ್ಲ. ಬದಲಿಗೆ ಜನರ ಭಾವನೆಗಳನ್ನು ಬಂಡವಾಳ ಮಾಡಿಕೊಂಡು ಆಟ ಆಡುತ್ತಿದ್ದಾರೆ. ಜನ ಮತ ನೀಡುವುದು ಅಭಿವೃದ್ಧಿ ಕೆಲಸ ಮಾಡಲು ಹೊರತು ಜನರ ಭಾವನೆ ಕದಡಲಿ ಎಂದಲ್ಲ. ಶಾಶ್ವತ ಕೆಲಸಗಳನ್ನು ಮಾಡಿಕೊಟ್ಟು ನಾಯಕರು ಎನಿಸಬೇಕು. ನೀವು ಕೊಟ್ಟ ಮತದ ಶಕ್ತಿಯಿಂದ ನುಗು ಏತ ನೀರಾವರಿ ಯೋಜನೆ, ಬೆಳ್ಳಿರಥ ನಿರ್ಮಾಣ ಸೇರಿದಂತೆ ರೈತರಿಗೆ ಅನುಕೂಲವಾಗುವಂತಹ ಶಾಶ್ವತ ಕೆಲಸಗಳನ್ನು ಮಾಡಿದ್ದೇನೆ. ಕ್ಷೇತ್ರದಲ್ಲಿ ಕೆಲವು ದುಷ್ಟಶಕ್ತಿಗಳು ಶಾಂತಿ ಕದಡಲು ಯತ್ನಿಸಿದರೂ ನಾನು ಅದಕ್ಕೆ ಅವಕಾಶ ನೀಡದೇ ನಂಜನಗೂಡನ್ನು ಶಾಂತಿಯ ಗೂಡನ್ನಾಗಿಸಿದ್ದೇನೆ. ಈ ಚುನಾವಣೆ ಭಯ ಮತ್ತು ಭವಿಷ್ಯದ ನಡುವೆ ನಡೆಯುವಂತಹ ಚುನಾವಣೆಯಾಗಿದ್ದು, ಪ್ರಜ್ಞಾವಂತ ಮತದಾರರು ಯೋಚಿಸಿ ಮತ ಚಲಾಯಿಸಿ. ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳಿಂದ ಮತದಾರರು ನನ್ನನ್ನು ಕೈಬಿಡುವುದಿಲ್ಲ ಎಂಬ ನಂಬಿಕೆ ಇದೆ. ಈ ಬಾರಿ ಮತ್ತೊಂದು ಅವಧಿಗೆ ಆಯ್ಕೆಗೊಳಿಸುತ್ತಾರೆ ಎಂಬ ನಂಬಿಕೆ ಬಲವಾಗಿದೆ ಎಂದರು.

ಈ ವೇಳೆ ಬಿಜೆಪಿ ರಾಜ್ಯ ಮುಖಂಡ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆಂಡಗಣ್ಣಪ್ಪ, ಮುಖಂಡರಾದ ರಾಜು, ಶ್ಯಾಂಪಟೇಲ್, ಪುಟ್ಟಸ್ವಾಮಿ, ಡಿ.ಎನ್.ಲೋಕೇಶ್, ನಾಗಪ್ಪ, ಪರಮೇಶ್, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಅಣ್ಣಯ್ಯಶೆಟ್ಟಿ, ದೊಡ್ಡಂಕಶೆಟ್ಟಿ, ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ಮಹೇಶ್, ಗ್ರಾಪಂ ಸದಸ್ಯರಾದ ಗೋವಿಂದರಾಜು, ಮಲ್ಲಿಕಾರ್ಜುನ್, ನಾಗೇಂದ್ರ ಸೇರಿದಂತೆ ಇತರರಿದ್ದರು.

ಇಂದು ತಿ.ನರಸೀಪುರಕ್ಕೆ ಪ್ರಿಯಾಂಕ ಗಾಂಧಿ

- ಬೃಹತ್ ಸಮಾವೇಶದಲ್ಲಿ ಭಾಗಿ: ಹೆಚ್‌ಸಿಎಂ ಪರ ಮತಯಾಚನೆ
- 50 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ

ತಿ.ನರಸೀಪುರ, ಏ.24– ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪಣತೊಟ್ಟಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಏ.25ರಂದು ತಿ.ನರಸೀಪುರಕ್ಕೆ ಆಗಮಿಸುತ್ತಿದ್ದು, ಪಟ್ಟಣದ ಹೊರವಲಯದಲ್ಲಿ ಮಧ್ಯಾಹ್ನ 12 ಗಂಟೆಗೆ ನಡೆಯುವ ಬೃಹತ್ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಭಾಗಿಯಾಗಿ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ ಪರ ಮತಯಾಚಿಸಲಿದ್ದಾರೆ.

ಪಟ್ಟಣದ ಹೆಳವರಹುಂಡಿ– ಬನ್ನಹಳ್ಳಿ ಹುಂಡಿ ಗ್ರಾಮದ ನಡುವೆ ಇರುವ ವಿಶಾಲ ಪ್ರದೇಶದಲ್ಲಿ ಸಮಾವೇಶ ನಡೆಯಲಿದ್ದು, ಇದಕ್ಕಾಗಿ ಕೈಗೊಂಡಿರುವ ಸಕಲ ಸಿದ್ಧತೆಗಳನ್ನು ಸೋಮವಾರ ಸಂಜೆ ಡಾ.ಹೆಚ್.ಸಿ.ಮಹದೇವಪ್ಪ, ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್, ಸೇರಿದಂತೆ ಪ್ರಿಯಾಂಕ ಗಾಂಧಿ ಕಚೇರಿಯ ಮುಖ್ಯಸ್ಥರು, ಕೆಪಿಸಿಸಿ



ಪದಾಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿದರು.

ಸಮಾವೇಶದಲ್ಲಿ ಸುಮಾರು 50 ಸಾವಿರಕ್ಕೂ ಹೆಚ್ಚು ಮಂದಿ ಭಾಗಿಯಾಗಲಿದ್ದು, ಮಂಗಳವಾರ ಬೆಳಗ್ಗೆ ಸುತ್ತೂರಿನ ಹೆಲಿಪ್ಯಾಡ್‌ಗೆ ಬಂದಿಳಿಯುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಅವರು ಮಧ್ಯಾಹ್ನ 12 ಗಂಟೆಗೆ ತಿ.ನರಸೀಪುರಕ್ಕೆ ಆಗಮಿಸಿ, ಬೃಹತ್ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ. ಬಳಿಕ ಹನೂರಿಗೆ ತೆರಳಲಿದ್ದಾರೆ.

ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ನಾಗಲಕ್ಷ್ಮಿ, ಜಿಲ್ಲಾಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಜಿಪಂ ಮಾಜಿ ಸದಸ್ಯೆ ಎಂ.ಸುಧಾ, ಪಪಂ ಮಾಜಿ ಅಧ್ಯಕ್ಷರಾದ ಬಸವಣ್ಣ, ಎನ್.ಎಸ್.ಬಸವರಾಜು, ಎನ್.ಪಿ.ಕನಕರಾಜು, ರಾಜಣ್ಣ, ಪಣಜಿ ಮಹದೇವ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಗ್ರಾಪಂ ಮಾಜಿ ಅಧ್ಯಕ್ಷರಾದ ಚೀಕಾ ನಾಗರಾಜು, ಎ.ಜೆ.ವೆಂಕಟೇಶ್, ಮಾಜಿ ಉಪ ಪ್ರಧಾನ ಡಿ.ಆರ್. ಮೂರ್ತಿ, ಮುಖಂಡರಾದ ರಾಜು, ಗುರುಸ್ವಾಮಿ, ಜೆ.ಅನೂಪ್ ಗೌಡ, ಲಕ್ಷ್ಮೀನಾರಾಯಣ ಇನ್ನಿತರರಿದ್ದರು.

ಸಿಡಿಲು ಬಡಿದು ರೈತ ಸಾವು



ಸರಗೂರು, ಏ.24– ಸಿಡಿಲು ಬಡಿದು ರೈತ ಸಾವನ್ನಪ್ಪಿರುವ ಘಟನೆ ತಾಲೂಕಿನ ಹುಲ್ಲೇಮಾಳ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಗ್ರಾಮದ ನಿವಾಸಿ ಮುತ್ತಯ್ಯ(68) ಸಾವನ್ನಪ್ಪಿದವರು. ಈತ ಇಂದು ಮಧ್ಯಾಹ್ನ ಜಮೀನಿನಲ್ಲಿ ಕೆಲಸ ಮಾಡುವ ವೇಳೆ ಬಿರುಗಾಳಿ ಸಹಿತ ಭಾರೀ ಮಳೆ ಸುರಿದಿದೆ. ಈ ವೇಳೆ ಮಳೆಯಲ್ಲಿ ನೆನೆಯುವುದನ್ನು ತಪ್ಪಿಸಲು ಮುತ್ತಯ್ಯ ಮರದಡಿ ನಿಂತಿದ್ದರು. ಈ ವೇಳೆ ಸಿಡಿಲು ಬಡಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ, ಮರಣೋತ್ತರ ಪರೀಕ್ಷೆಗೆ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿನ ಗೋವಿಂದರಾಜನಗರ ಮಾದರಿ ವರುಣ ಅಭಿವೃದ್ಧಿ

15 ವರ್ಷ ಆಗದ ಅಭಿವೃದ್ಧಿ ಕಾರ್ಯ 5 ವರ್ಷದಲ್ಲಿ ಮಾಡುವೆ: ವಿ.ಸೋಮಣ್ಣ

ತಿ.ನರಸೀಪುರ, ಏ.24– ಕ್ಷೇತ್ರದ ಜನತೆ ಅವರಿಗೆ 15 ವರ್ಷ ಅವಕಾಶ ಮಾಡಿಕೊಟ್ಟಿದ್ದೀರಿ. ಈ ಬಾರಿ ನನಗೆ ಆಶೀರ್ವದಿಸಿದರೆ 15 ವರ್ಷಗಳಲ್ಲಿ ಆಗದ ಅಭಿವೃದ್ಧಿ ಕಾರ್ಯಗಳನ್ನು ಕೇವಲ 5 ವರ್ಷಗಳಲ್ಲಿ ಮಾಡಿ ತೋರಿಸುತ್ತೇನೆ ಎಂದು ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ತಿಳಿಸಿದರು.

ವರುಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ತಮ್ಮ ಬೆಂಬಲಿಗರೊಂದಿಗೆ ರೋಡ್ ಶೋ ಮಾಡುವ ಮೂಲಕ ಮತಯಾಚಿಸಿ ಮಾತನಾಡಿದ ಅವರು, ಕ್ಷೇತ್ರದ ಜನತೆ ಕಳೆದ 15 ವರ್ಷಗಳಿಂದಲೂ ಅವರನ್ನೇ(ಸಿದ್ದರಾಮಯ್ಯ, ಯತೀಂದ್ರ) ಆಯ್ಕೆ ಮಾಡುತ್ತಾ ಬಂದಿದ್ದೀರಿ. ಈ ಬಾರಿ ನನಗೊಂದು ಅವಕಾಶ ಕೊಡಿ. ಕಳೆದ 15 ವರ್ಷಗಳಲ್ಲಿ ಆಗದ ಅಭಿವೃದ್ಧಿಯನ್ನು ನಾನು 5 ವರ್ಷದಲ್ಲಿ ಮಾಡಿ ತೋರಿಸುತ್ತೇನೆ. ಬೆಂಗಳೂರಿನ ಗೋವಿಂದರಾಜನಗರ ಮಾದರಿ ವರುಣ ಕ್ಷೇತ್ರ ಅಭಿವೃದ್ಧಿ ಪಡಿಸುತ್ತೇನೆ ಎಂದರು.

ನಾನು ಮಾಜಿ ಪ್ರಧಾನಿ ದೇವೇಗೌಡರ ಗರಡಿಯಲ್ಲಿ ಬೆಳೆದವನು. 30 ವರ್ಷ ಅವರೊಂದಿಗೆ ಶಾಸಕ, ಸಚಿವ, ಕಾರ್ಪೊರೇಟರ್ ಆಗಿ ಕೆಲಸ ಮಾಡಿದ್ದೇನೆ. ಉಪ ಚುನಾವಣೆಯಲ್ಲಿ ದೇವೇಗೌಡರಿಗೆ ನಾನೊಬ್ಬನೇ ಏಕಾಂಗಿಯಾಗಿ ಸಾಥ್ ನೀಡಿದ್ದೆ ಎಂದ ಅವರು ಅಭಿವೃದ್ಧಿ ಎಂದರೆ ಸೋಮಣ್ಣ, ಸೋಮಣ್ಣ ಎಂದರೆ ಅಭಿವೃದ್ಧಿ ಎಂದರು.



ಕ್ಷೇತ್ರ ನನಗೆ ಹೊಸತಾದರೂ, ಇನ್ನೆರಡು ತಿಂಗಳಲ್ಲಿ ಗ್ರಾಮಗಳ ಇತಿಹಾಸ ನಾನೇ ಹೇಳುತ್ತೇನೆ. ಎಲ್ಲೆಡೆ ಸುತ್ತಾಡಿ ಜನರ ನಾಡಿಮಿಡಿತ ಅರಿತು ಅವರ ಆಶಯಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತೇನೆ. ಕ್ಷೇತ್ರದಲ್ಲಿ ಬದಲಾವಣೆ ಗಾಳಿ ಬೀಸುತ್ತಿರುವುದು ಚುನಾವಣಾ ಪ್ರಚಾರದ ವೇಳೆ ನನ್ನ ಗಮನಕ್ಕೆ ಬಂದಿದೆ ಎಂದರು.

ಕ್ಷೇತ್ರದಲ್ಲಿ ಸುತ್ತಾಡಿದ ವೇಳೆ ಜನರಿಗೆ ಮೂಲ ಸೌಲಭ್ಯ ಕೊರತೆ, ಸಾಕಷ್ಟು ಲೋಪಗಳು ಕಂಡು ಬಂದಿವೆ ಹೀಗಾಗಿ ನಿಮ್ಮ ಆಶೀರ್ವಾದ ಇದ್ದರೆ ನನ್ನ 45 ವರ್ಷಗಳ ರಾಜಕೀಯ ಜೀವನವನ್ನು ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ. ಕ್ಷೇತ್ರದಲ್ಲಿ ಆಗಬೇಕಾದ ಕೆಲಸಗಳನ್ನು ಆದಿಚುಂಚನಗಿರಿ ಹಾಗೂ ಸಿದ್ಧಗಂಗೆ ಶ್ರೀಗಳ ಮಾರ್ಗದರ್ಶನದಲ್ಲಿ ಮಾಡುತ್ತೇನೆ ಎಂದರು.

ಇದೇ ವೇಳೆ ಹುನುಗನಹಳ್ಳಿ, ಕಟ್ಟೇಹುಂಡಿ, ರಂಗನಾಥಪುರ, ರಂಗಾಚಾರಿಹುಂಡಿ, ರಂಗಸಮುದ್ರ, ಎಳೇಗೌಡನಹುಂಡಿ, ಹಿಟ್ಟುವಳ್ಳಿ, ಕುಪ್ಯ, ಬೊಮ್ಮನಾಯಕನಹಳ್ಳಿ, ಅಗಸ್ತ್ಯಪುರ, ತುಂಬಲ, ಮುತ್ತತ್ತಿ, ಆರ್.ಪಿ.ಹುಂಡಿ, ಯಡದೊರೆ, ಇಂಡವಾಳು, ಹೊಸ ಕೆಂಪಯ್ಯನಹುಂಡಿ, ಹುಣಸೂರು, ಬಿಲಿಗೆರೆಹುಂಡಿ, ಕಿರಗಸೂರು, ಮನ್ನೇಹುಂಡಿ, ಕೂಡ್ಲೂರು ಹಾಗೂ ಡಣಾಯಕನಪುರ ಗ್ರಾಮಗಳಲ್ಲಿ ಸೋಮಣ್ಣ ಮತಯಾಚಿಸಿದರು. ಪ್ರತಿ ಗ್ರಾಮದಲ್ಲೂ ಪಟಾಕಿ ಸಿಡಿಸಿ, ಬೃಹತ್ ಗಾತ್ರದ ಹೂವಿನ ಹಾರ ಹಾಕಿ ಸೋಮಣ್ಣ ಅವರನ್ನು ಸ್ವಾಗತಿಸಲಾಯಿತು.

ಮತಯಾಚನೆ ವೇಳೆ ಜಿಪಂ ಮಾಜಿ ಸದಸ್ಯ ಬಿ.ಎನ್.ಸದಾನಂದ, ಸಿದ್ದೇಗೌಡ, ಕಲ್ಮಳ್ಳಿ ವಿಜಯಕುಮಾರ್, ಪಿಎಸಿಎಸ್ ಅಧ್ಯಕ್ಷ ಬಿ.ವೀರಭದ್ರಪ್ಪ, ಪುರಸಭಾ ಸದಸ್ಯ ಎಸ್.ಕೆ. ಕಿರಣ್, ಮಾಜಿ ಅಧ್ಯಕ್ಷ ಪರಶಿವಮೂರ್ತಿ, ಕೆಂಪಯ್ಯನಹುಂಡಿ ಅಂದಾನಿಗೌಡ, ಸ್ವಾಮಿ, ತುಂಬಲ ನಂದೀಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಂಗನಾಯಕ್, ಮೆಲ್ಲಹಳ್ಳಿ ಮಹದೇವಸ್ವಾಮಿ, ಸ್ವಾಮಿ, ಸುರೇಂದ್ರ, ಚೇತನ್, ಹೊಂಬೇಗೌಡ, ನವೀನ್ ಮತ್ತಿತರರಿದ್ದರು.

ಅಕ್ಕಿ ಮೋದಿದು, ಚೀಲ ಸಿದ್ದರಾಮಯ್ಯನವರದು

ಪ್ರಧಾನಿ ಮೋದಿ ಪಡಿತರ ವ್ಯವಸ್ಥೆಯಲ್ಲಿ ಬಡ ಕುಟುಂಬದವರಿಗೆ ಅಕ್ಕಿ ನೀಡುತ್ತಿದ್ದಾರೆ. ಆದರೆ ಅಕ್ಕಿಯನ್ನು ಸಿದ್ದರಾಮಯ್ಯ ನೀಡುತ್ತಿದ್ದಾರೆ ಎಂಬ ತಪ್ಪು ಮಾಹಿತಿ ಜನರಲ್ಲಿದೆ. ಸಿದ್ದರಾಮಯ್ಯ ಅಕ್ಕಿ ಬದಲು ಅಕ್ಕಿಯ ಚೀಲ ಕೊಡುತ್ತಿದ್ದಾರೆ ಎಂದು ಸೋಮಣ್ಣ ವ್ಯಂಗ್ಯವಾಡಿದರು.

ಬಸವರಾಜ ಬೊಮ್ಮಾಯಿ ನಾಡಿನ ಜನರ ಸಮಸ್ಯೆ ಬಗೆಹರಿಸುತ್ತಿದ್ದಾರೆ. ರೈತರ ಖಾತೆಗಳಿಗೆ ಹಣ ಹಾಕುತ್ತಿರುವುದು ಮೋದಿ. ಬಡ ಜನರಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿ ಆರೋಗ್ಯ ವ್ಯವಸ್ಥೆ ಮಾಡಿರುವುದು ಮೋದಿ. ಆದರೆ ದೇಶದಲ್ಲಿ 75 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷದವರು ಈಗ ಬಡವರ ಉದ್ಧಾರ ಮಾಡುತ್ತೇವೆ ಎಂದು ಭರವಸೆ ನೀಡುತ್ತಿದ್ದು, ಅವರ ಸುಳ್ಳು ಭರವಸೆ ನಂಬಬೇಡಿ ಎಂದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಯಾದಿಸೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಿಲ್ಲರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಶಿವಾಜಿ ಸೂರತ್ಕಲ್–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಇಂಗ್ಲೀಷ್ ಮಂಜ (ಕ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೋಲಾ (ಹಿ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು

ನೇಮಕ



ಮೈಸೂರು, ಏ.24– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿಯನ್ನಾಗಿ ಹೆಬ್ಬಾಳು 1ನೇ ಹಂತದ ನಿವಾಸಿ ಹೆಚ್.ಎಸ್. ಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ.

ಕ್ಷೇತ್ರದ ಅಭಿವೃದ್ಧಿಗೆ ಮತ್ತೊಂದು ಅವಕಾಶ ನೀಡಿ: ಮನವಿ



ಹೆಚ್.ಡಿ.ಕೋಟೆ, ಏ.24– ನನ್ನ ಅಧಿಕಾರಾವಧಿಯಲ್ಲಿ ಈ ಭಾಗದ ಜನರ ನೋವಿಗೆ ಸ್ಪಂದಿಸಿದ್ದು, ಇಲ್ಲಿನ ಗ್ರಾಮಗಳಿಗೆ ಸಾಕಷ್ಟು ಅನುದಾನ ನೀಡಿ ಅಭಿವೃದ್ಧಿಗೊಳಿಸಿದ್ದೇನೆ. ತಾಲೂಕಿನ ಮತ್ತಷ್ಟು ಅಭಿವೃದ್ಧಿಗಾಗಿ ಮತ್ತೊಂದು ಅವಕಾಶ ಮಾಡಿಕೊಡಿ ಎಂದು ಶಾಸಕ ಅನಿಲ್ ಚಿಕ್ಕಮಾದು ಮನವಿ ಮಾಡಿದರು.

ತಾಲೂಕಿನ ಲಕ್ಷ್ಮೀಪುರ, ಅಂತರಸಂತೆ, ಹೊಸಹಳ್ಳಿ, ಸೋಗಹಳ್ಳಿ, ಕೆಂಪೇಗೌಡನಹುಂಡಿ, ಹೊಸಹಳ್ಳಿ, ಕಾರಾಪುರ, ಮಾಳದಹಾಡಿ, ಮಗ್ಗೆ, ಮಗ್ಗೆ ಹಾಡಿ, ಮಳಲಿ, ಕೆ.ಆರ್.ಪುರ, ಮಂಚೇಗೌಡನಹಳ್ಳಿ ಹಾಡಿ, ಎನ್.ಬೆಳತ್ತೂರು, ಗುಂಡತ್ತೂರು, ಉದ್ಬೂರು, ಹೊಸಹೊಳಲು, ಹೊನ್ನಮ್ಮನಕಟ್ಟೆ ಸೇರಿದಂತೆ ಅನೇಕ ಗ್ರಾಮಗಳು ಹಾಗೂ ಹಾಡಿಗಳಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ಈ ಭಾಗದ ಗ್ರಾಮಗಳಿಗೆ ರಸ್ತೆ, ಕುಡಿಯುವ ನೀರು ಸೇರಿದಂತೆ ಅನೇಕ ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸಿದ್ದೇನೆ. ಶಾಲಾ ಕೊಠಡಿ ನಿರ್ಮಾಣ, ಹಕ್ಕುಪತ್ರ ವಿತರಿಸಿದ್ದೇನೆ. ಎಲ್ಲಾ ಸಮುದಾಯದವರ ಅನುಕೂಲಕ್ಕಾಗಿ ಆಯಾ ಸಮುದಾಯಗಳಿಗೆ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಿದ್ದೇನೆ. ಅಲ್ಲದೇ ತಾಲೂಕಿನ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗಿರುವ ನನಗೆ ಈ ಚುನಾವಣೆಯಲ್ಲಿ ಹೆಚ್ಚು ಮತ ನೀಡುವ ಮೂಲಕ ಮತ್ತೊಮ್ಮೆ ನಿಮ್ಮ ಸೇವೆ ಮಾಡಲು ಅವಕಾಶ ನೀಡಿ ಎಂದರು.

ಆದಿವಾಸಿ ಮಹಿಳೆಯರು ಮಾತನಾಡಿ, ನಿಮ್ಮ ತಂದೆ ದಿ.ಚಿಕ್ಕಮಾದು ಅವರು ಆದಿವಾಸಿಗಳನ್ನು ತುಂಬಾ ಇಷ್ಟಪಡುತ್ತಿದ್ದರು. ನಮಗಾಗಿ ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದಾರೆ. ಅದರಂತೆ ನೀವು ತಂದೆಗೆ ತಕ್ಕ ಮಗನಾಗಿ ತಾಲೂಕಿನ ಜನತೆಯ ಆಶೀರ್ವಾದದಿಂದ ಶಾಸಕರಾಗಿ ಆದಿವಾಸಿಗಳಿಗೆ ಮನೆಗಳು ನಿರ್ಮಿಸಿ ಕೊಟ್ಟು, ಕೊರೊನಾ ವೇಳೆ ಆಹಾರ ಕಿಟ್, ಔಷಧ ಕಿಟ್, ಹೊದಿಕೆ ನೀಡಿ ನಮ್ಮ ರಕ್ಷಣೆಗೆ ಶ್ರಮಿಸಿದ್ದೀರಾ. ನಿಮ್ಮ ಮಗಳ ಹುಟ್ಟುಹಬ್ಬದ ಸಂದರ್ಭ ಹಾಡಿ ಮಕ್ಕಳು ಓದುವ ಶಾಲೆ ದತ್ತು ತೆಗೆದುಕೊಂಡು, ಆದಿವಾಸಿ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿರುವುದನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ. ಆದ್ದರಿಂದ ನೀವು ಈ ಬಾರಿ ಶಾಸಕರಾಗಿ ಆಯ್ಕೆಯಾಗುವುದು ಖಚಿತ ಎಂದರು.

ಈ ವೇಳೆ ನಂಜನಗೂಡು ಕೆಪಿಸಿಸಿ ಉಸ್ತುವಾರಿ ಸೋಮೇಶ್, ಕೋಟೆ ಯೂತ್ ಕಾಂಗ್ರೆಸ್ ಅಧ್ಯಕ್ಷ ನಯಾಜ್, ಜಿಪಂ ಮಾಜಿ ಸದಸ್ಯ ಹೆಚ್.ಸಿ.ಮಂಜುನಾಥ್, ಪುರಸಭೆ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ತಾಲೂಕು ನಾಯಕ ಸಮಾಜದ ಮಾಜಿ ಅಧ್ಯಕ್ಷ ಶಂಭುಲಿಂಗನಾಯಕ, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಸತೀಶ್‌ಗೌಡ, ನವೀನ್‌ದಾಸ್, ಕಾಳಿಂಗೇಗೌಡ, ಸುಬ್ರಹ್ಮಣ್ಯ, ಗಣೇಶಾಚಾರ್, ಸಿದ್ದರಾಮು, ಫಯಾಜ್, ಶಿವಲಿಂಗನಾಯಕ, ಅಶೋಕ್ ಇತರರಿದ್ದರು.

FORM No. 18

Notice for appearance in Appeals Order 41 Rule 14 CPC, and Rules 1, 2, 4 and 11 of Chapter IV Karnataka High Court Rules

In the High Court of Karnataka at Bengaluru

MFA No. 5794 / 2016 (FC)

APPELLANT: Sri Jayasimha G, S/o K.S. Gopalakrishna, Aged about 39 years, R/At No. 38, 7th Cross, Mahadesharanagar, Vijayanagara, Mysuru-570 016

By Sri G.K. Kulkarni ADV

Vs

RESPONDENT: Smt. Yashasini C, W/o Jayasimha G, aged about 31 years, C/o Lakshmi, R/At No. 1089, Vishnuvardhana Road, Chamarajapuram, Mysuru-570 032.

Appeal from the judgement / award / order passed on dated 21-06-2016 in M.C. No. 244 / 2013 on the file of The Principal I Additional Judge, Family Court, At Mysuru.

To

Respondent No.

Smt. Yashasini C, W/o Jayasimha G, aged about 31 years, C/o Lakshmi, R/at No. 1089, Vishnuvardhana Road, Chamarajapuram, Mysuru-570 032

Whereas the aforementioned Appeal preferred has been registered and admitted by this Court.

Notice is hereby given to you to appear in this Court in person or through an Advocate duly instructed or through some one authorised by law to act for you in this case on 6-6-2023 at 10.30 am., in case you intend to contest the appeal. If you fail so to appear, the appeal will be dealt with, heard and decided in your absence. Given under my hand and the seal of this court on Thursday day the 13th Day of April 2023.

By Order of the Court

Sd/- Assistant Registrar

ಅನುಬಂಧ – 47

(ಅಧ್ಯಾಯ 5, ಪ್ಯಾರಾ 5,16,5))

ನಮೂನೆ ಸಿ–1 ಯಿಂದ ಸಿ–8 ಮತ್ತು ಸಿ ಎ

ನಮೂನೆ ಸಿ–1

(ಅಭ್ಯರ್ಥಿಯು ವೃತ್ತಪತ್ರಿಕೆಗಳು, ಟಿವಿಯಲ್ಲಿ ಪ್ರಕಟಿಸುವುದಕ್ಕಾಗಿ)

ಅಪರಾಧ ಪ್ರಕರಣಗಳ ಬಗ್ಗೆ ಘೋಷಣೆ:

(ಮಾನ್ಯ ಸರ್ವೋಚ್ಚ ನ್ಯಾಯಾಲಯವು, 2011ರ ಡಬ್ಲ್ಯೂಪಿ (ಸಿವಿಲ್) ಸಂ.536, ದಿನಾಂಕ: 25ನೇ ಸೆಪ್ಟೆಂಬರ್ 2018 (ಸಾರ್ವಜನಿಕ ಹಿತಾಸಕ್ತಿ ಪ್ರತಿಷ್ಠಾನ ಮತ್ತು ಇತರರು=ವಿರುದ್ಧ–ಭಾರತ ಒಕ್ಕೂಟ ಮತ್ತು ಇತರರು)ರಲ್ಲಿ ನೀಡಿದ ತೀರ್ಪಿಗೆ ಅನುಸಾರವಾಗಿ)

ಅಭ್ಯರ್ಥಿಯ ಹೆಸರು : ದರ್ಶನ್ ಧೃವನಾರಾಯಣ್
ಅಭ್ಯರ್ಥಿಯ ವಿಳಾಸ : ಹೆಗ್ಗದಾಡಿ ಗ್ರಾಮ, ಬೆಂಡರವಾಡಿ ಅಂಚೆ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ 571312
ರಾಜಕೀಯ ಪಕ್ಷದ ಹೆಸರು : ಭಾರತೀಯ ರಾಷ್ಟ್ರೀಯ ಕಾಂಗ್ರೆಸ್
ಚುನಾವಣೆಯ ಹೆಸರು : ಕರ್ನಾಟಕ ವಿಧಾನಸಭೆ
ಚುನಾವಣಾ ಕ್ಷೇತ್ರದ ಹೆಸರು : 214 ನಂಜನಗೂಡು ವಿಧಾನಸಭಾ ಕ್ಷೇತ್ರ

ಮೇಲೆ ಸೂಚಿಸಿರುವ ಚುನಾವಣೆಯ ಅಭ್ಯರ್ಥಿಯಾಗಿರುವ **ದರ್ಶನ್ ಧೃವನಾರಾಯಣ್** (ಅಭ್ಯರ್ಥಿಯ ಹೆಸರು) ನಾನು, ನನ್ನ ಅಪರಾಧಿಕ ಪೂರ್ವ ಇತಿಹಾಸದ ಬಗ್ಗೆ ಮುಂದಿನ ವಿವರಗಳನ್ನು ಸಾರ್ವಜನಿಕ ಮಾಹಿತಿಗಾಗಿ ಘೋಷಿಸುತ್ತೇನೆ.

(ಎ) ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳು

ಕ್ರ.ಸಂ.	ನ್ಯಾಯಾಲಯದ ಹೆಸರು	ಪ್ರಕರಣ ಸಂಖ್ಯೆ ಮತ್ತು ದಿನಾಂಕ	ಪ್ರಕರಣ (ಗಳ) ಸ್ಥಿತಿಗತಿ	ಸಂಬಂಧಪಟ್ಟ ಅಧಿನಿಯಮಗಳ ಪ್ರಕರಣ (ಗಳು) ಮತ್ತು ಅಪರಾಧ)(ಗಳ) ಸಂಕ್ಷಿಪ್ತ ವಿವರ
1	2ನೇ ಹೆಚ್ಚುವರಿ ಸಿಜೆ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ನಂಜನಗೂಡು	39/2023 171ಇ ಮತ್ತು 171 ಬಿ, ಐಪಿಸಿ	ತನಿಖಾ ಹಂತದಲ್ಲಿದೆ	ದೇಣಿಗೆ ಪಡೆದಿರುತ್ತಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿದ್ದು ತನಿಖೆ ಹಂತದಲ್ಲಿದೆ

(ಬಿ) ಕ್ರಿಮಿನಲ್ ಅಪರಾಧಿಗಳಿಗಾಗಿ ನ್ಯಾಯನಿರ್ಣಿತವಾದ ಪ್ರಕರಣಗಳ ಕುರಿತಾದ ವಿವರಗಳು

ಕ್ರ.ಸಂ.	ನ್ಯಾಯಾಲಯದ ಹೆಸರು ಮತ್ತು ಆದೇಶ(ಗಳು) ದಿನಾಂಕ (ಗಳು)	ಅಪರಾಧ (ಗಳ) ವಿವರಣೆ ಮತ್ತು ವಿಧಿಸಲಾದ ದಂಡನೆ	ವಿಧಿಸಲಾದ ಗರಿಷ್ಠ ದಂಡನೆ
1	ಅನ್ವಯಿಸುವುದಿಲ್ಲ		

ಸಹಿ/– ದರ್ಶನ್ ಧೃವನಾರಾಯಣ್, ಕಾಂಗ್ರೆಸ್ ಅಭ್ಯರ್ಥಿ ನಂಜನಗೂಡು ವಿಧಾನಸಭಾ ಕ್ಷೇತ್ರ